ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 6 ಸೋಮವಾರ 2023

ಸಂಪುಟ: 43 | ಸಂಚಿಕೆ: 316 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮೈಸೂರಿನಲ್ಲಿ ಬಿಜೆಪಿ ಭರ್ಜರಿ ವಿಜಯ ಸಂಕಲ್ಪ ಯಾತ್ರೆ

ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ, ಸಂಸದರಾದ ಪ್ರತಾಪ್ ಸಿಂಹ, ಬಿ.ವೈ.ರಾಘವೇಂದ್ರ ನೇತೃತ್ವದಲ್ಲಿ ಯಶಸ್ವಿ ರೋಡ್ ಶೋ

ಮೈಸೂರು, ಮಾ.5(ಆರ್‌ಕೆ)–ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಮೈಸೂರಿನ ಎನ್.ಆರ್., ಚಾಮುಂಡೇಶ್ವರಿ ಮತ್ತು ಚಾಮರಾಜ ಕ್ಷೇತ್ರಗಳಲ್ಲಿ ಇಂದು ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ಭರ್ಜರಿಯಾಗಿ ನಡೆಯಿತು.

ಮೈಸೂರಿನ ಎನ್.ಆರ್. ಕ್ಷೇತ್ರದ ಗಾಯತ್ರಿಪುರಂನ ಹುಲಿಯಮ್ಮನ ದೇವಸ್ಥಾನದ ಬಳಿ ಬಿಜೆಪಿ ಮುಖಂಡ ಸುಬ್ರಹ್ಮಣಿ ಅವರು ಆಯೋಜಿಸಿದ್ದ ಪೌರಕಾರ್ಮಿಕರಿಗೆ ಉಪಾಹಾರ ನೀಡುವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಅವರು, ಈ ಬಾರಿ ಬಿಜೆಪಿಯತ್ತ ಜನರ ಒಲವಿದೆ. ಸರ್ಕಾರದ ಜನಪರ ಯೋಜನೆಗಳನ್ನು ಫಲಾನುಭವಿಗಳಿಗೆ ತಲುಪಿಸಿದೆ ಎಂದರು.

ನಂತರ ಬೆಂಗಳೂರು–ನೀಲಗಿರಿ ರಸ್ತೆಯ ಎಫ್‌ಟಿಎಸ್ ಸರ್ಕಲ್ ಬಳಿಯ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮುಜರಾಯಿ ಸಚಿವ ಕೋಟಾ ಶ್ರೀನಿವಾಸ ಪೂಜಾರಿಯವರೊಂದಿಗೆ ಮಾಲಾರ್ಪಣೆ ಮಾಡಿದ ಬಿಜೆಪಿ ಮುಖಂಡರು, ಶಿವಾಜಿ ರಸ್ತೆ, ಕೆಸರೆ ರಾಜೇಂದ್ರನಗರದ ಮುಖ್ಯ ರಸ್ತೆಗೆ ತಲುಪಿದ





(ಹೆಚ್ಚಿನ ಸಚಿತ್ರ ವರದಿ ಪುಟ–3)

ವಿಜಯ ಸಂಕಲ್ಪ ಯಾತ್ರೆಗೆ ಶನಿ ದೇವಸ್ಥಾನದ ಕಮಾನು ಸರ್ಕಲ್ ಬಳಿ ಬಂದು ಸೇರಿಕೊಂಡ ಸಂಸದರಾದ ಬಿ.ವೈ.ರಾಘವೇಂದ್ರ ಹಾಗೂ ಪ್ರತಾಪ್ ಸಿಂಹ ಅವರು, ಬಿಜೆಪಿ ಎನ್.ಆರ್. ಕ್ಷೇತ್ರದ ಕಚೇರಿಯನ್ನು ಉದ್ಘಾಟಿಸಿದರು. ಈ ವೇಳೆ ವಂದನಾರ್ಪಣೆ ಮಾಡಿದ ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಸಂಕಲ್ಪಯಾತ್ರೆ ಯಶಸ್ವಿಗೊಳಿಸಿದ ಸಂಸದರಾದ ಬಿ.ವೈ.ರಾಘವೇಂದ್ರ, ಪ್ರತಾಪ್‌ಸಿಂಹ, ಸಚಿವ ಕೋಟಾ ಶ್ರೀನಿವಾಸ ಪೂಜಾರಿ, ಪಕ್ಷದ ನಗರಾಧ್ಯಕ್ಷ ಶ್ರೀವತ್ಸ ಸೇರಿದಂತೆ ಎಲ್ಲರಿಗೂ ಧನ್ಯವಾದ ತಿಳಿಸಿದರಲ್ಲದೆ, ಈ ಯಾತ್ರೆಯು ಎನ್.ಆರ್. ಕ್ಷೇತ್ರದಲ್ಲಿ ಬಿಜೆಪಿ ವಿಜಯ ಪತಾಕೆ ಹಾರಿಸುವ ಮುನ್ಸೂಚನೆಯಾಗಿದೆ ಎಂದರು.

ನಂತರ ರಾಜೇಂದ್ರನಗರ ಬಸ್ ನಿಲ್ದಾಣ, ಕುರಿಮಂಡಿ, ಆರ್.ಎಸ್.ನಾಯ್ಡುನಗರ ಬಸ್ ನಿಲ್ದಾಣದ ಮೂಲಕ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿದ ವಿಜಯ ಸಂಕಲ್ಪ ಯಾತ್ರೆಯು ಎನ್.ಆರ್.ಮೊಹಲ್ಲಾದ ▶ 8ನೇ ಪುಟಕ್ಕೆ

ಬಿಜೆಪಿ ಭ್ರಷ್ಟಾಚಾರ: ಮಾ.9ರಂದು 2 ಗಂಟೆ ಕಾಲ 'ಕರ್ನಾಟಕ ಬಂದ್'ಗೆ ಕರೆ ನೀಡಿದ ಕಾಂಗ್ರೆಸ್

ತುಮಕೂರು, ಮಾ.5– ರಾಜ್ಯ ಬಿಜೆಪಿ ಸರ್ಕಾರದ ಭ್ರಷ್ಟಾಚಾರ ಹಗರಣಗಳನ್ನು ವಿರೋಧಿಸಿ ಇದೇ ಮಾರ್ಚ್ 9ರಂದು ರಾಜ್ಯ ಕಾಂಗ್ರೆಸ್ ಘಟಕ ಕರ್ನಾಟಕ ಬಂದ್‌ಗೆ ಕರೆ ನೀಡಿದೆ. ಆಡಳಿತಾರೂಢ ಬಿಜೆಪಿ ಸರ್ಕಾರದ ಭ್ರಷ್ಟಾಚಾರದ ವಿರುದ್ಧದ ಹೋರಾಟದ ಭಾಗವಾಗಿ ಕರ್ನಾಟಕ ಕಾಂಗ್ರೆಸ್ ತನ್ನ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ಪುತ್ರ ಪ್ರಶಾಂತ್ ಕುಮಾರ್ ಎಂವಿ ಅವರಿಂದ ಲೋಕಾಯುಕ್ತ ಅಧಿಕಾರಿಗಳು 8 ಕೋಟಿ ರೂಪಾಯಿ ಹಣವನ್ನು ವಶಕ್ಕೆ ಪಡೆದ ಹಿನ್ನೆಲೆಯಲ್ಲಿ ಮಾರ್ಚ್ 9 ರಂದು ಎರಡು ಗಂಟೆಗಳ ಕಾಲ ಬಂದ್‌ಗೆ ಕರೆ ನೀಡಿದೆ. ಮಾರ್ಚ್ 9 ರಂದು ಕರ್ನಾಟಕ ಬಂದ್‌ಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಕರೆ ಕೊಟ್ಟಿದ್ದು, ತುಮಕೂರಿನಲ್ಲಿ ಮಾತನಾಡಿದ ಅವರು, ಬಿಜೆಪಿ ಭ್ರಷ್ಟಾಚಾರ ಖಂಡಿಸಿ ಮಾರ್ಚ್ 9 ರಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 11 ಗಂಟೆವರೆಗೆ ಎಲ್ಲಾ ವ್ಯಾಪಾರಿಗಳು ಬಂದ್‌ಗೆ ಬೆಂಬಲ ನೀಡುವಂತೆ ಕೋರಿದ್ದಾರೆ. ಬಂದ್ ವೇಳೆ ಯಾವುದೇ ಶಾಲೆ, ಕಾಲೇಜು ಆಸ್ಪತ್ರೆ ಸಾರ್ವಜನಿಕರಿಗೆ ತೊಂದರೆಯಾಗಬಾರದು, ಕಾನೂನು (Law) ಕೈಗೆತ್ತಿಕೊಳ್ಳುವ ಕೆಲಸ ಯಾರೂ ಮಾಡಬಾರದು. ಕರ್ನಾಟಕ ಭ್ರಷ್ಟಾಚಾರ ಮುಕ್ತಮಾಡಲು ನಿಮ್ಮ ಸಹಕಾರ ಬೇಕು. ಅದಕ್ಕಾಗಿ ಎಲ್ಲ ಸಂಘ, ಸಂಸ್ಥೆಗಳು ಸಹಕಾರ ಕೊಡಬೇಕು. ರಾಷ್ಟ್ರದ ನಾಯಕರ ಬಳಿ ಅನೇಕ ವಿಚಾರಗಳನ್ನ ಚರ್ಚೆ ಮಾಡಿದ್ದೇವೆ. ಕಳೆದ ಮೂರುವರೆ ವರ್ಷದಿಂದ ಬ್ರಹ್ಮಾಂಡ ಭ್ರಷ್ಟಾಚಾರದ ಬಗ್ಗೆ ಜನರ ಗಮನ ಸೆಳೆದಿದ್ದೇವೆ. ಬಿಜೆಪಿ ಇಡೀ ▶ 8ನೇ ಪುಟಕ್ಕೆ

ಏಪ್ರಿಲ್ 1ರಿಂದ ಹೆದ್ದಾರಿ ಟೋಲ್, ಮಾಸಿಕ ಪಾಸ್ ದರಗಳ ಏರಿಕೆ



ನವದೆಹಲಿ, ಮಾ.5– ಈಗಾಗಲೇ ಹೆದ್ದಾರಿಗಳಲ್ಲಿ ಬಹಳಷ್ಟು ಕಡೆ ಟೋಲ್ ಕಟ್ಟಿ ಹೈರಾಣಾಗಿರುವ ವಾಹನಸವಾರರಿಗೆ ಮತ್ತು ಜನಸಾಮಾನ್ಯರಿಗೆ ಮುಂದಿನ ದಿನಗಳು ಇನ್ನಷ್ಟು ದುಬಾರಿಯಾಗಲಿವೆ. ರಾಷ್ಟ್ರಾದ್ಯಂತ ರಾಷ್ಟ್ರೀಯ ಹೆದ್ದಾರಿ ಮತ್ತು ಎಕ್ಸ್‌ಪ್ರೆಸ್‌ವೇಗಳಲ್ಲಿನ ಟೋಲ್‌ಗಳಲ್ಲಿ ದರ ಏರಿಕೆ ಮಾಡಲು ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಎನ್‌ಎಚ್‌ಎಐ ಯೋಜಿಸಿದೆ. ಭಾನುವಾರ ಬಂದ ವರದಿಗಳ ಪ್ರಕಾರ ಟೋಲ್ ದರ ಶೇ.5ರಿಂದ 10ರಷ್ಟು ಹೆಚ್ಚಾಗುವ ನಿರೀಕ್ಷೆ ಇದೆ. ಮಾಸಿಕ ಟೋಲ್ ಪಾಸ್‌ನ ದರವನ್ನೂ ಶೇ.10ರಷ್ಟು ಏರಿಕೆ ಮಾಡಬಹುದು ಎನ್ನಲಾಗುತ್ತಿದೆ. ಇನ್ನು ರಾಜ್ಯ ಹೆದ್ದಾರಿಗಳಲ್ಲಿರುವ ಟೋಲ್ ದರಗಳ ಏರಿಕೆ ಬಗ್ಗೆ ಯಾವುದೇ ಮಾಹಿತಿ ಬಂದಿಲ್ಲ. ಟೋಲ್ ದರಗಳನ್ನು ಪ್ರತೀ ವರ್ಷ ಪರಿಷ್ಕರಿಸಲಾಗುತ್ತದೆ. ಕೇಂದ್ರ ರಸ್ತೆ ಮತ್ತು ಸಾರಿಗೆ ಸಚಿವಾಲಯದ ಅನುಮೋದನೆ ಬಳಿಕ ಮುಂದಿನ ಹಣಕಾಸು ವರ್ಷಕ್ಕೆ ಹೊಸ ಟೋಲ್ ದರಗಳು ಜಾರಿಗೆ ಬರಲಿವೆ. ಮೂಲಗಳ ಪ್ರಕಾರ ಕಾರು ಮತ್ತು ಹಗುರ ವಾಹನಗಳಿಗೆ ▶ 8ನೇ ಪುಟಕ್ಕೆ

ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ: ರಾಷ್ಟ್ರೀಯ ತನಿಖಾ ದಳದಿಂದ ಕೊಡಗು ಮೂಲದ ಓರ್ವನ ಬಂಧನ

ಮಡಿಕೇರಿ, ಮಾ.5– ಸುಳ್ಯ ತಾಲೂಕಿನ ಬೆಳ್ಳಾರೆಯ ಮಾಸ್ತಿಕಟ್ಟೆಯಲ್ಲಿ 2022ರ ಜು.26ರಂದು ನಡೆದಿದ್ದ ಬಿಜೆಪಿ ಯುವ ನಾಯಕ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದ ಓರ್ವ ಆರೋಪಿಯನ್ನು ರಾಷ್ಟ್ರೀಯ ತನಿಖಾ ದಳ ಬಂಧಿಸಿದೆ.

ಮಡಿಕೇರಿ ಗದ್ದುಗೆ ಮಸೀದಿ ಹಿಂಭಾಗದ ನಿವಾಸಿ ಎಂ.ಹೆಚ್.ಹಮೀದ್ ಎಂಬವರ ಪುತ್ರ ನಿಷೇಧಿತ ಪಿಎಫ್‌ಐ ಸಂಘಟನೆಯ ಸದಸ್ಯನಾಗಿರುವ ತೌಫಿಲ್ ಬಂಧಿತ ಆರೋಪಿ. ಶನಿವಾರ ರಾತ್ರಿ 9.30ರ ಸುಮಾರಿಗೆ ನಗರದ ಅಮೃತಹಳ್ಳಿ ಠಾಣೆ ವ್ಯಾಪ್ತಿಯ ದಾಸರಹಳ್ಳಿಯಲ್ಲಿ ಆರೋಪಿಯನ್ನು ಬಂಧನಕ್ಕೊಳಪಡಿಸಲಾಗಿದೆ. ಎನ್‌ಐಎ ಅಧಿಕಾರಿಗಳು ಆರೋಪಿ ಪತ್ತೆಗೆ ಈ ಹಿಂದೆ ರೂ. 5 ಲಕ್ಷ ಹಣ ಬಹುಮಾನ ಘೋಷಣೆ ಮಾಡಿದ್ದರು. ನಿನ್ನೆ ಖಚಿತ ಮಾಹಿತಿ ಮೇರೆಗೆ ಸುಮಾರು 10ಕ್ಕೂ ಹೆಚ್ಚು ಎನ್‌ಐಎ ಅಧಿಕಾರಿಗಳು ತೌಫಿಲ್ ಮನೆ ಬಳಿಗೆ ಹೋಗಿದ್ದಾರೆ. ನಂತರ ಇಬ್ಬರು ಅಧಿಕಾರಿಗಳು ಪ್ಲಂಬರ್ ಅಂತ ಕೈಯಲ್ಲಿ ರಿಂಚ್ ಹಿಡಿದು ಮನೆ ಒಳಗೆ ಹೋಗಿದ್ದಾರೆ. ಈ ವೇಳೆ ತೌಫಿಲ್ ಮಟನ್ ಕತ್ತರಿಸುತ್ತಿರುವುದು ಕಂಡುಬಂದಿದೆ.



ತೌಫಿಲ್

ನಂತರ ಮತ್ತಿಬ್ಬರು ಒಳಗೆ ಬಂದಿದ್ದನ್ನು ನೋಡಿದ ತೌಫಿಲ್, ಚಾಕುವಿನಿಂದ ಹಲ್ಲೆ ಮಾಡಲು ಯತ್ನಿಸಿದ್ದಾನೆ. ಇದನ್ನು ತಿಳಿದ ಉಳಿದ ಅಧಿಕಾರಿಗಳು ಏಕಕಾಲಕ್ಕೆ ಒಳಗೆ ಬಂದು ತೌಫಿಲ್‌ನನ್ನು ಲಾಕ್ ಮಾಡಿ, ವಶಕ್ಕೆ ಪಡೆದುಕೊಂಡಿದ್ದಾರೆಂದು ತಿಳಿದುಬಂದಿದೆ. ಪ್ರವೀಣ್ ನೆಟ್ಟಾರುನನ್ನು ಜುಲೈ 26 ರಂದು ಆತನ ಕೋಳಿ ಅಂಗಡಿಗೆ ನುಗ್ಗಿ ಹಂತಕರು ಬರ್ಬರವಾಗಿ ಹತ್ಯೆ ಮಾಡಿದ್ದರು. ▶ 8ನೇ ಪುಟಕ್ಕೆ

ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟದ ಹೊಣೆ ಹೊತ್ತ ISIS ಸಂಘಟನೆ

ಮಂಗಳೂರು, ಮಾ.5 ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಹಾಗೂ ತಮಿಳುನಾಡಿನ ಕೊಯಮತ್ತೂರು ಸ್ಫೋಟದ ಹೊಣೆಯನ್ನು ಕೊನೆಗೂ ಐಎಸ್‌ಐಎಸ್ ಉಗ್ರ ಸಂಘಟನೆ ಹೊತ್ತಿದೆ.

ಮಂಗಳೂರಿನ ಕದ್ರಿ ದೇವಾಲಯದ ಮೇಲೆ ದಾಳಿ ಮಾಡುವ ಉದ್ದೇಶದಿಂದ ಶಂಕಿತ ಉಗ್ರ ಶಾರೀಕ್ ಕುಕ್ಕರ್‌ನಲ್ಲಿ ಬಾಂಬ್ ಇಟ್ಟುಕೊಂಡು ಹೋಗುತ್ತಿದ್ದಾಗ ಕಂಕನಾಡಿ ಬಳಿ ಅಚಾನಕ್ ಆಗಿ ಸ್ಫೋಟವಾಗಿ ದೊಡ್ಡ ಅನಾಹುತ ತಪ್ಪಿತ್ತು. ಇನ್ನು ತಮಿಳುನಾಡಿನ ಕೊಯಮತ್ತೂರು ಬಳಿ ಸಹ ಸ್ಫೋಟ ನಡೆದಿತ್ತು. ಇಸ್ಲಾಮಿಕ್ ಸ್ಟೇಟ್ ಸಂಘಟನೆಯ ಸಹ ಸಂಘಟನೆಯಾದ ▶ 8ನೇ ಪುಟಕ್ಕೆ


ಮಾಡಾಳ್ ವಿರೂಪಾಕ್ಷಪ್ಪ ಬಂಧನಕ್ಕೆ ವಿಶೇಷ ತಂಡ ರಚಿಸಿದ ಕರ್ನಾಟಕ ಲೋಕಾಯುಕ್ತ

ಬೆಂಗಳೂರು, ಮಾ.5– ಲಂಚ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿರುವ ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರನ್ನು ಬಂಧಿಸಲು ಕರ್ನಾಟಕ ಲೋಕಾಯುಕ್ತ ಉಪ ವರಿಷ್ಠಾಧಿಕಾರಿಗಳ ನೇತೃತ್ವದಲ್ಲಿ ಏಳು ತಂಡಗಳನ್ನು ರಚಿಸಿದೆ. ತಂಡಗಳು ಈಗಾಗಲೇ ರಾಜ್ಯಾದ್ಯಂತ ಟ್ರ್ಯಾಕಿಂಗ್ ಮತ್ತು ಶೋಧ ಕಾರ್ಯಾಚರಣೆಯನ್ನು ಆರಂಭಿಸಿವೆ ಎಂದು ಮೂಲಗಳು ತಿಳಿಸಿವೆ. ಬೆಂಗಳೂರು ಮತ್ತು ದಾವಣಗೆರೆ ನಗರಗಳ ವಿವಿಧೆಡೆ ತಂಡಗಳು ಬೇಟೆ ಆರಂಭಿಸಿವೆ ಎಂದು ಮೂಲಗಳು ತಿಳಿಸಿದ್ದು, ಇದೇ ವೇಳೆ ಲೋಕಾಯುಕ್ತ ಪೊಲೀಸರ ಮುಂದೆ ▶ 8ನೇ ಪುಟಕ್ಕೆ



ಮೈಸೂರಲ್ಲಿ ಕಿಡಿಗೇಡಿಗಳಿಂದ ಚಾ.ಬೆಟ್ಟ ತಪ್ಪಲು, ಸಿವೇಜ್ ಫಾರಂ ಸೇರಿ ಐದು ಕಡೆ ಬೆಂಕಿ

ಕ್ಯಾಂಟರ್, ಅಪಾರ ಪ್ರಮಾಣದ ಟೈರ್ ಅಗ್ನಿಗಾಹುತಿ, ಉಳಿದೆಡೆ ತಪ್ಪಿದ ಅನಾಹುತ



ಮೈಸೂರಿನ ಸಿವೇಜ್ ಫಾರಂ ಹಾಗೂ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಬೆಂಕಿಯ ಜ್ವಾಲೆ

ಮೈಸೂರು, ಮಾ.5(ಎಂಟಿವೈ,ಜಿಎ)–ಕಿಡಿಗೇಡಿಗಳು ಹಚ್ಚಿರುವ ಬೆಂಕಿಗೆ ಚಾಮುಂಡಿ ಬೆಟ್ಟದ ತಪ್ಪಲು ಹಾಗೂ ನಾಲ್ಕು ಸ್ಥಳಗಳಲ್ಲಿ ಬೆಂಕಿ ಹೊತ್ತಿಕೊಂಡಿರುವ ಘಟನೆ ಮೈಸೂರಿನಲ್ಲಿ ಭಾನುವಾರ ನಡೆದಿದೆ.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಗೌರಿಶಂಕರ ನಗರದ ಬಳಿ, ಹೆಬ್ಬಾಳು ಕೈಗಾರಿಕಾ ಪ್ರದೇಶ, ಮೇಟಗಳ್ಳಿ ಕೈಗಾರಿಕಾ ಪ್ರದೇಶ, ಸಿವೇಜ್ ಫಾರಂ ಹಾಗೂ ವೈಪಾಲ್ ಕೈಗಾರಿಕೆ ಬಳಿ ಕಿಡಿಗೇಡಿಗಳು ಹಚ್ಚಿರುವ ಬೆಂಕಿಗೆ ಸಾಕಷ್ಟು ಪ್ರಮಾಣದ ಹಾನಿಯುಂಟಾಗಿದ್ದು, ಅಗ್ನಿಶಾಮಕ ದಳದ ಸಿಬ್ಬಂದಿಗಳ ಪರಿಶ್ರಮದಿಂದ ಯಾವುದೇ ಪ್ರಾಣಹಾನಿಯಾಗಿಲ್ಲ.

ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಗೌರಿಶಂಕರ ನಗರದ ಬಳಿ ಭಾನುವಾರ ಕಿಡಿಗೇಡಿಗಳು ಖಾಲಿ ಜಾಗದಲ್ಲಿ ಹಚ್ಚಿದ್ದ ಬೆಂಕಿಯಿಂದಾಗಿ ಕೆಲಕಾಲ ಆತಂಕ ಉಂಟಾಗಿತ್ತು. ಶನಿವಾರವಷ್ಟೇ ಚಾಮುಂಡಿಬೆಟ್ಟದಲ್ಲಿ ಕಿಡಿಗೇಡಿಗಳು ಹಚ್ಚಿದ್ದ ಬೆಂಕಿಗೆ ಹಲವು ಎಕರೆ ಅರಣ್ಯ ಭಸ್ಮವಾಗಿತ್ತು. ಮರು ದಿನವೇ ಬೆಟ್ಟದ ತಪ್ಪಲಿನಲ್ಲಿ ಹೊತ್ತಿ ಉರಿಯುತ್ತಿದ್ದ ಬೆಂಕಿಯಿಂದಾಗಿ ಚಾಮುಂಡಿಬೆಟ್ಟಕ್ಕೆ ಮತ್ತೊಮ್ಮೆ ಬೆಂಕಿ ಆವರಿಸುವ ಆತಂಕ ನಿರ್ಮಾಣವಾಗಿತ್ತು. ತಪ್ಪಲಿನಲ್ಲಿ ಉರಿಯುತ್ತಿದ್ದ ಬೆಂಕಿಯನ್ನು ಅರಣ್ಯ ಸಿಬ್ಬಂದಿ ಹಾಗೂ ಅಗ್ನಿಶಾಮಕ ಸಿಬ್ಬಂದಿಗಳು ಜಂಟಿಯಾಗಿ ಕಾರ್ಯಾಚರಣೆ ನಡೆಸಿ, ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ಇದರಿಂದ ಬೆಟ್ಟಕ್ಕೆ ಬೆಂಕಿ ವ್ಯಾಪಿಸುವುದನ್ನು ತಡೆಗಟ್ಟಿದಂತಾಯಿತು.

ಬೆಟ್ಟಕ್ಕೆ ಹೊಂದಿಕೊಂಡಂತೆ ಇರುವ ಖಾಲಿ ಜಾಗದಲ್ಲಿ ಕೆಲವರು ಟೀ ಅಂಗಡಿಗಳಲ್ಲಿ ಬಳಸಿದ ಪೇಪರ್ ಲೋಟ ಹಾಗೂ ಇನ್ನಿತರ ಪ್ಲಾಸ್ಟಿಕ್ ತ್ಯಾಜ್ಯ ತಂದು ಬೆಂಕಿ ಹಚ್ಚುವುದು ಕಂಡು ಬಂದಿದೆ. ಬೆಳಗ್ಗೆ ಯಾರೋ ಸುಟ್ಟಿದ್ದ ಪ್ಲಾಸ್ಟಿಕ್ ಪೇಪರ್‌ನಿಂದ ಕಿಡಿ ಹೊತ್ತಿಕೊಂಡು ಬೆಂಕಿ ವ್ಯಾಪಿಸಿದೆ. ಬೇಸಿಗೆ ಆರಂಭವಾಗಿರುವುದರಿಂದ ರಸ್ತೆಬದಿ ಬೀಡಿ–ಸಿಗರೇಟ್ ಕಿಡಿ ನಂದಿಸದೆ ಎಸೆಯಬಾರದು. ಬೆಟ್ಟದ ತಪ್ಪಲಿನ ಖಾಲಿ ಜಾಗದಲ್ಲಿ ಸುಖಾಸುಮ್ಮನೆ ಬೆಂಕಿ ಹಚ್ಚದಂತೆ ಅರಣ್ಯ ಸಿಬ್ಬಂದಿಗಳು ಮನವಿ ಮಾಡಿದ್ದಾರೆ. ಅಲ್ಲದೆ, ರಸ್ತೆಬದಿ ಬೇಲಿಗಳಿಗೆ ಬೆಂಕಿ ಹಚ್ಚುವುದರಿಂದ ಪಕ್ಷಿ ಸಂಕುಲ ಮಾತ್ರವಲ್ಲದೆ, ಗಿಡ–ಮರಗಳು ಸುಟ್ಟು ಕರಕಲಾಗುತ್ತದೆ. ಈ ಹಿನ್ನೆಲೆಯಲ್ಲಿ ಪರಿಸರ ಸಂರಕ್ಷಣೆಗೆ ಸಹಕರಿಸುವಂತೆ ಮನವಿ ಮಾಡಿದ್ದಾರೆ.

ನಗರದ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ವಿಜಯ್ ಪ್ರಿಸಿಷನ್ ಡೈಸ್ ಎಂಬ ಟೈರ್ ರೀ ಬಿಲ್ಟ್ ಕಾರ್ಖಾನೆಯಲ್ಲಿ ಇಂದು ಮಧ್ಯಾಹ್ನ ಸುಮಾರು 1.30ರ ವೇಳೆಯಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಪರಿಣಾಮ ಕಾರ್ಖಾನೆಯ ಆವರಣದಲ್ಲಿದ್ದ ಒಂದು ಕ್ಯಾಂಟರ್ ವಾಹನ ಮತ್ತು ಅಪಾರ ಪ್ರಮಾಣದ ಟೈರ್‌ಗಳು ಮತ್ತು ಟೈರ್ ರೀ ಬಿಲ್ಟ್‌ನ ▶ 6ನೇ ಪುಟಕ್ಕೆ

ಇಂದು ಪ್ರಾಣಿ, ಪಕ್ಷಿಗಳಿಗೆ ನೀರಿನ ತೊಟ್ಟಿ, ಆಹಾರದ ಬಟ್ಟಲು ಅಳವಡಿಸುವ 'ಮೂಕ ಸ್ಪಂದನೆ' ಅಭಿಯಾನ

ಮೈಸೂರು, ಮಾ.5-ಕೆಎಂಪಿಕೆ ಚಾರಿಟೇಬಲ್ ಟ್ರಸ್ಟ್ ಹಾಗೂ ಪರಿಸರ ಸ್ನೇಹಿ ತಂಡದ ವತಿಯಿಂದ ಬೇಸಿಗೆ ಬೇಗೆ ತೀವ್ರತೆ ಹಿನ್ನೆಲೆಯಲ್ಲಿ ಪ್ರಾಣಿ-ಪಕ್ಷಿಗಳಿಗೆ ನೀರಿನ ತೊಟ್ಟಿ ಹಾಗೂ ಆಹಾರದ ಬಟ್ಟಲು ಅಳವಡಿಸುವ ಮೂಲಕ ಮೂಕ ಸ್ಪಂದನೆ ಎಂಬ ಜಾಗೃತಿ ಅಭಿಯಾನ ಮತ್ತು ಜವಾಬ್ದಾರಿಯುತ ಪ್ರಾಣಿ-ಪಕ್ಷಿ ಪ್ರಿಯರಿಗೆ ಉಚಿತವಾಗಿ ನೀರಿನ ತೊಟ್ಟಿ ಕೊಡುವ ಕಾರ್ಯಕ್ರಮವನ್ನು ನಾಳೆ (ಸೋಮವಾರ) ಬೆಳಗ್ಗೆ 8.30 ಗಂಟೆಗೆ ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್, ಉರಗ ತಜ್ಞ ಸ್ನೇಕ್ ಶಾಮ್, ಆಯುರ್ ಫೋರ್ಟ್ ವೆಲ್ ನೆಸ್ ವ್ಯವಸ್ಥಾಪಕ ನಿರ್ದೇಶಕ ಭರತ್ ರಾಜ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಹಿರಿಯ ಸಮಾಜ ಸೇವಕ ಕೆ.ರಘುರಾಮ ವಾಜಪೇಯಿ, ಕಾಂಗ್ರೆಸ್ ಯುವ ಮುಖಂಡ ಎನ್.ಎಂ.ನವೀನ್ ಕುಮಾರ್, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಪ್ರಜ್ಞಾವಂತ ನಾಗರಿಕ ವೇದಿಕೆ ಅಧ್ಯಕ್ಷ ಕಡಕೊಳ ಜಗದೀಶ್, ಅಜಯ್ ಶಾಸ್ತ್ರಿ ಹಾಗೂ ಇನ್ನಿತರರು ಭಾಗವಹಿಸಲಿದ್ದಾರೆ.

ಸಂಚಾರ ನಿಯಮ ಉಲ್ಲಂಘನೆ: ಶೇ.50 ರಿಯಾಯಿತಿ

ಎರಡನೇ ದಿನ 11.61 ಲಕ್ಷ ರೂ. ದಂಡ ಸಂಗ್ರಹ

ಮೈಸೂರು, ಮಾ.5(ಆರ್‌ಕೆ)-ಶೇ.50ರ ರಿಯಾಯಿತಿ ನೀಡಿರುವುದರಿಂದ ಎರಡನೇ ದಿನ ಮೈಸೂರಲ್ಲಿ ಲಕ್ಷ ರೂ. ದಂಡ ಸಂಗ್ರಹವಾಗಿದೆ. ಮಾರ್ಚ್ 4ರಿಂದ 15 ದಿನಗಳವರೆಗೆ ಶೇ.50ರ ರಿಯಾಯಿತಿಯಲ್ಲಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡ ಪಾವತಿಸಲು ಅವಕಾಶ ನೀಡಿ ಸರ್ಕಾರ ಆದೇಶ ನೀಡಿರುವ ಹಿನ್ನೆಲೆಯಲ್ಲಿ ಮಾರ್ಚ್ 4ರಂದು ಮೊದಲ ದಿನ 21,63,900 ರೂ. ದಂಡ ಪಾವತಿಸಿದ್ದ ವಾಹನಗಳ ಆರ್‌ಸಿ ಮಾಲೀಕರು, 14,630 ಪ್ರಕರಣಗಳನ್ನು ಮುಕ್ತಾಯಗೊಳಿಸಿದ್ದರು.

ಭಾನುವಾರವಾದ ಕಾರಣ ಎರಡನೇ ದಿನವಾದ ಇಂದು 10,526 ಪ್ರಕರಣಗಳಲ್ಲಿ 11,61,000 ರೂ. ದಂಡ ಪಾವತಿಸಿದ್ದು, ಎರಡು ದಿನಗಳಲ್ಲಿ ಒಟ್ಟು 51,65,950 ರೂ. ಹಣ ಸರ್ಕಾರದ ಬೊಕ್ಕಸಕ್ಕೆ ಜಮಾ ಆದಂತಾಗಿದೆ ಎಂದು ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ನಾಳೆ (ಮಾ.6)ಯಿಂದ ಹೆಚ್ಚಿನ ಸಂಖ್ಯೆಯ ವಾಹನ ಮಾಲೀಕರು ಬಾಕಿ ಪ್ರಕರಣಗಳ ಇತ್ಯರ್ಥಕ್ಕೆ ಮುಂದಾಗುವ ನಿರೀಕ್ಷೆ ಇದ್ದು, ದಂಡ ಪಾವತಿಸಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡಲಾಗಿದೆ ಎಂದು ಅವರು ತಿಳಿಸಿದರು.

ಬ್ಯಾಂಕ್‌ನಲ್ಲಿ ಒತ್ತೆಯಿಟ್ಟ ಕಾರು ಮಾರಾಟಕ್ಕೆ ಸಹಕರಿಸಿದ ಆರ್‌ಟಿಓ ಸೇರಿ ಮೂವರ ವಿರುದ್ಧ ಕೇಸ್

ಮೈಸೂರು, ಮಾ. 5-ಬ್ಯಾಂಕ್‌ನಲ್ಲಿ ಒತ್ತೆಯಲ್ಲಿದ್ದ ಐಷಾರಾಮಿ ಕಾರನ್ನು ಮಾರಾಟ ಮಾಡುವ ಮೂಲಕ ಬ್ಯಾಂಕ್‌ಗೆ ವಂಚಿಸಿದ ಆರೋಪದ ಮೇರೆಗೆ ಬೆಂಗಳೂರು ಪಶ್ಚಿಮ ಆರ್‌ಟಿಓ ಸೇರಿದಂತೆ ಮೂವರ ವಿರುದ್ಧ ಪ್ರಕರಣ ದಾಖಲಾಗಿದೆ.

ವಿವರ: ಬೆಂಗಳೂರಿನ ಜೆ.ಪಿ.ನಗರ ನಿವಾಸಿ ಟಿ. ಮಧುಮೋಹನ ಎಂಬಾತ ಮೈಸೂರಿನ ಬ್ಯಾಂಕ್ ಆಫ್ ಬರೋಡಾ ಸಂತೇಪೇಟೆ ಶಾಖೆಯಲ್ಲಿ 2022ರ ಮಾರ್ಚ್ 15ರಂದು 41.25 ಲಕ್ಷ ಸಾಲ ಪಡೆದು ಟೊಯೊಟಾ ಫಾರ್ಚೂನರ್ (ಕೆಎ 05-ಎನ್‌ಡಿ 9740) ಕಾರನ್ನು ಖರೀದಿಸಿದ್ದು, ಈ ಕಾರು ಬ್ಯಾಂಕ್ ಆಫ್ ಬರೋಡಾದ ಒತ್ತೆಯಲ್ಲಿದೆ. ಈ ಸಂಬಂಧ ಕಾರು ನೋಂದಣಿಯಾಗಿರುವ ಬೆಂಗಳೂರು ಪಶ್ಚಿಮ ಆರ್‌ಟಿಓ ಕಚೇರಿಯ ದಾಖಲೆಗಳಲ್ಲಿ ನಮೂದಾಗಿದೆ ಎಂದು ಹೇಳಲಾಗಿದೆ. ಕಾರಿನ ಸಾಲದ ಬಾಬ್ತು 42,61,918 ರೂ.ಗಳನ್ನು ಮಧುಮೋಹನ ಪಾವತಿಸಬೇಕಾಗಿದ್ದು, ಈ ಕಾರಿನ ಮೇಲೆ ಬ್ಯಾಂಕ್‌ನಲ್ಲಿ ಸಾಲವಿದ್ದರೂ ಅದನ್ನು ಮರೆಮಾಚಿ ಇಶಾಕ್ ಅಹಮದ್ ಖಾನ್ ಎಂಬಾತನಿಗೆ ಕಾರನ್ನು ಮಾರಾಟ ಮಾಡಲಾಗಿದೆ. ಬ್ಯಾಂಕ್‌ಗೆ ವಂಚಿಸಿರುವ ಆರೋಪದ ಮೇರೆಗೆ ಬೆಂಗಳೂರು ಪಶ್ಚಿಮ ಆರ್‌ಟಿಓ, ಸಾಲ ಪಡೆದಿರುವ ಮಧುಮೋಹನ ಮತ್ತು ಕಾರನ್ನು ಖರೀದಿಸಿರುವ ಇಶಾಕ್ ಅಹಮದ್ ಖಾನ್ ವಿರುದ್ಧ ಬ್ಯಾಂಕ್ ಆಫ್ ಬರೋಡಾ ಸಂತೇಪೇಟೆ ಶಾಖೆಯ ಮ್ಯಾನೇಜರ್ ವೈ. ಪ್ರಶಾಂತ್ ನೀಡಿದ ದೂರಿನ ಮೇರೆಗೆ ಭಾರತೀಯ ದಂಡ ಸಂಹಿತೆ 34, 406, 420ರಡಿ ಪ್ರಕರಣ ದಾಖಲಿಸಿಕೊಂಡಿರುವ ದೇವರಾಜ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಪಾಲಿಷ್ ನೆಪದಲ್ಲಿ ಗೃಹಿಣಿಯ ಚಿನ್ನದ ಸರ ಲಪಟಾಯಿಸಿದ ಖದೀಮರು

ಮೈಸೂರು, ಮಾ. 5- ಪಾಲಿಷ್ ಮಾಡುವ ನೆಪದಲ್ಲಿ ಗೃಹಿಣಿಯೋರ್ವರ ಚಿನ್ನದ ಸರ ಕಳವು ಮಾಡಿರುವ ಬಗ್ಗೆ ಮೈಸೂರಿನ ರಾಜೇಂದ್ರನಗರದ ಎನ್‌ಜಿಓ ಕಾಲೋನಿಯಿಂದ ವರದಿಯಾಗಿದೆ. ಅಲ್ಲಿನ ನಿವಾಸಿ ಎನ್.ಆರ್. ಸರೋಜಾ(47) ಸರ ಕಳೆದುಕೊಂಡವರಾಗಿದ್ದು, ಮಾರ್ಚ್ 2ರಂದು ಬೆಳಗ್ಗೆ 11.30ರ ವೇಳೆಯಲ್ಲಿ ಇಬ್ಬರು ವ್ಯಕ್ತಿಗಳು ಇವರ ಮನೆಗೆ ಬಂದು ಹಿತ್ತಾಳೆ ಮತ್ತು ಬೆಳ್ಳಿ ಪದಾರ್ಥಗಳನ್ನು ಪಾಲಿಷ್ ಮಾಡುವ ಪೌಡರ್ ಮಾರಾಟ ಮಾಡಲು ಬಂದಿರುವುದಾಗಿ ತಿಳಿಸಿ, ಸ್ಯಾಂಪಲ್‌ಗಾಗಿ ಸರೋಜಾ ಅವರ ಬೆಳ್ಳಿ ಕಾಲುಚೈನ್‌ನನ್ನು ಪಾಲಿಷ್ ಮಾಡಿ ತೋರಿಸಿದ್ದಾರೆ. ನಂತರ ಈ ಪೌಡರ್‌ನಿಂದ ಚಿನ್ನದ ಒಡವೆಗಳನ್ನು ಕೂಡ ಪಾಲಿಷ್ ಮಾಡಬಹುದು ಎಂದು ಹೇಳಿದ ಖದೀಮರು, ನಿಮ್ಮ ಬಳಿ ಇರುವ ಚಿನ್ನದ ಒಡವೆ ಕೊಡಿ ಪಾಲಿಷ್ ಮಾಡಿ ತೋರಿಸುತ್ತೇವೆ ಎಂದಿದ್ದಾರೆ. ಅದನ್ನು ನಂಬಿದ ಸರೋಜಾ ತಮ್ಮ 35 ಗ್ರಾಂ ತೂಕದ ಚಿನ್ನದ ಸರವನ್ನು ಕೊಟ್ಟಾಗ ಖದೀಮರು ಮುಚ್ಚಳವಿರುವ ಚಿಕ್ಕ ಪಾತ್ರೆಯನ್ನು ಕೇಳಿದ್ದಾರೆ. ಆಗ ಅವರಿಗೆ ಸ್ಟೀಲ್ ಬಾಕ್ಸ್‌ವೊಂದನ್ನು ಗೃಹಿಣಿ ನೀಡಿದಾಗ ಬಾಕ್ಸ್‌ಗೆ ನೀರನ್ನು ಹಾಕಿ ಖದೀಮರು ತಂದಿದ್ದ ಅರಿಶಿನ ಬಣ್ಣದ ಪುಡಿ ಜೊತೆಗೆ ಸರವನ್ನು ಬಾಕ್ಸ್‌ಗೆ ಹಾಕಿ, ಇದನ್ನು ಬಿಸಿ ಮಾಡಬೇಕೆಂದು ಖದೀಮರು ತಿಳಿಸಿ ಸರೋಜಾ ಅವರ ಅಡುಗೆ ಮನೆಯಲ್ಲಿ ಸ್ಟೌವ್ ಮೇಲೆ ಬಾಕ್ಸ್ ಅನ್ನು ಇಟ್ಟು ನೀರು ಬಿಸಿ ಮಾಡಲು ಆರಂಭಿಸಿದ್ದಾರೆ. ಅದೇ ವೇಳೆ ಓರ್ವ ಸ್ವಲ್ಪ ನಿರ್ಮಾ ಪೌಡರ್ ಬೇಕು ಎಂದು ಕೇಳಿದಾಗ ಸರೋಜಾ ಅವರು ಹೊರಗೆ ಹೋಗಿ ಅದನ್ನು ತಂದುಕೊಟ್ಟಿದ್ದಾರೆ.

ನಂತರ 10 ನಿಮಿಷ ಚಿನ್ನದ ಸರ ಇರುವ ನೀರು ಬಿಸಿಯಾದ ನಂತರ ತೆಗೆದು ನೋಡಿ ಎಂದು ತಿಳಿಸಿ ಖದೀಮರು ಕಾಲ್ಕಿತ್ತಿದ್ದಾರೆ. ಅವರು ಹೇಳಿದಂತೆ ಕೆಲ ನಿಮಿಷಗಳ ನಂತರ ಬಾಕ್ಸ್ ಅನ್ನು ಸ್ಟೌವ್‌ನಿಂದ ಕೆಳಗಿಳಿಸಿ ನೋಡಿದಾಗ ಅದರಲ್ಲಿ ಚಿನ್ನದ ಸರ ಇರಲಿಲ್ಲ. ಈ ಸಂಬಂಧ ಎನ್.ಆರ್. ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಣ ಪಡೆದು ಯಂತ್ರೋಪಕರಣ ನೀಡದ ಉದ್ಯಮಿ ವಿರುದ್ಧ ಪ್ರಕರಣ ದಾಖಲು

ಚಾಮರಾಜನಗರ, ಮಾ. 5- ಯಂತ್ರೋಪಕರಣ ಖರೀದಿಗಾಗಿ ಮಂಜೂರಾಗಿದ್ದ ಸಾಲದ ಡಿಡಿ ಅನ್ನು ಪಡೆದು ನಗದೀಕರಿಸಿಕೊಂಡ ನಂತರ ಯಂತ್ರೋಪಕರಣ ನೀಡದೆ ಪತ್ರಿಕಾ ಪ್ರತಿನಿಧಿಯೋರ್ವರಿಗೆ 9.30 ಲಕ್ಷ ರೂ. ವಂಚಿಸಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಚಾಮರಾಜನಗರದ 'ಪ್ರಜಾವಾಣಿ' ಪತ್ರಿಕೆಯ ಪ್ರತಿನಿಧಿ ಎಸ್.ಸಾಗರ್(32) ವಂಚನೆಗೊಳಗಾದವರಾಗಿದ್ದು, ಇವರಿಗೆ ಪಿಎಂಇಜಿಪಿ ಮುದ್ರಾ ಯೋಜನೆಯಡಿ 9.30 ಲಕ್ಷ ರೂ. ಸಾಲ ಮಂಜೂರಾಗಿತ್ತು ಈ ಸಾಲಕ್ಕಾಗಿ ಚಾಮರಾಜನಗರದ ಸಿದ್ಧಾರ್ಥ ಮೆಷಿನ್ಸ್ ಅಂಡ್ ಮೋಟಾರ್ಸ್ ಮಾಲೀಕ ಪುಟ್ಟಸ್ವಾಮಿ ಎಂಬುವರು ಬ್ಯಾಂಕ್‌ಗೆ ದರಪಟ್ಟಿ ನೀಡಿದ್ದರು. ಸಾಲ ಮಂಜೂರಾದ ನಂತರ ಯಂತ್ರೋಪಕರಣಗಳ ಪೂರೈಕೆಗಾಗಿ ಪುಟ್ಟಸ್ವಾಮಿಯವರಿಗೆ ಬ್ಯಾಂಕ್‌ನ ಡಿಡಿ ಪಾವತಿಯಾಗಿದ್ದು, ಡಿಡಿ ನಗದೀಕರಿಸಿಕೊಂಡಿದ್ದರೂ ಕೂಡ ಸಾಗರ್ ಅವರಿಗೆ ಪುಟ್ಟಸ್ವಾಮಿ ಯಂತ್ರೋಪಕರಣ ಸರಬರಾಜು ಮಾಡಿಲ್ಲ. ಈತ ಒದಗಿಸಿರುವ ಇನ್‌ವಾಯ್ಸ್ ಮತ್ತು ಆತ ನೀಡಿರುವ ಆಧಾರ್ ಸಂಖ್ಯೆ ಹಾಗೂ ವಿಳಾಸವೂ ನಕಲಿಯಾಗಿದೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ಆರೋಪಿಸಲಾಗಿದೆ.

ಪುಟ್ಟಸ್ವಾಮಿಯವರು ಲೋಕೇಶ್ ಎಂಬಾತನ ಮೂಲಕ ಫಲಾನುಭವಿಗಳ ಮಾಹಿತಿ ಪಡೆದು ಕಮಿಷನ್ ಆಧಾರದ ಮೇರೆಗೆ ಸಾಲ ಕೊಡಿಸುವ ವ್ಯವಹಾರ ಮಾಡುತ್ತಾರೆ. ಜೊತೆಗೆ ಸಾಲ ದೊರೆಯುವ ಯೋಜನೆಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಫಲಾನುಭವಿಗಳಿಗೆ ನೀಡುತ್ತಾರೆ ಎಂದು ದೂರಿನಲ್ಲಿ ತಿಳಿಸಿರುವ ಸಾಗರ್, ತನಗೆ ಮಂಜೂರಾಗಿರುವ 9.30 ಲಕ್ಷ ರೂ.ಗಳ ಪೈಕಿ 2.30 ಲಕ್ಷ ರೂ.ಗಳನ್ನು ಕಮಿಷನ್ ನೀಡಿದರೆ ಪುಟ್ಟಸ್ವಾಮಿಯನ್ನು ಕರೆಸಿ ಉಳಿಕೆ ಹಣ ಕೊಡಿಸುವುದಾಗಿ ಲೋಕೇಶ್ ಎಂಬಾತ ತಿಳಿಸಿದ್ದಾನೆ. ಪುಟ್ಟಸ್ವಾಮಿಯೂ ಕೂಡ 12 ದಿನದ ಒಳಗಾಗಿ ತನ್ನ ಹಣ ನೀಡುವುದಾಗಿ 2022ರ ಮೇ 5ರಂದು ತನ್ನ ಲೆಟರ್‌ಹೆಡ್‌ನಲ್ಲಿ ವಕೀಲರ ಮೂಲಕ ಪೊಲೀಸ್ ಠಾಣೆಗೆ ಪತ್ರ ರವಾನಿಸಿದ್ದಾನೆ. ಆದರೆ, ಈವರೆಗೂ ಹಣ ನೀಡದೆ ವಂಚಿಸಿದ್ದಾನೆ ಎಂದು ಸಾಗರ್ ನೀಡಿರುವ ದೂರನ್ನು ದಾಖಲಿಸಿಕೊಂಡಿರುವ ಚಾಮರಾಜನಗರ ಟೌನ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಜಿಪಂ ಸಿಇಓರಿಂದ ಹೆಚ್.ಡಿ.ಕೋಟೆ ತಾಲೂಕಿನಲ್ಲಿ

ನರೇಗಾದಡಿ ಅಭಿವೃದ್ಧಿ ಕಾಮಗಾರಿ ಪರಿಶೀಲನೆ



ಮೈಸೂರು, ಮಾ.5(ಆರ್‌ಕೆ)- ಹೆಚ್.ಡಿಕೋಟೆ ತಾಲೂಕಿನಲ್ಲಿ ನರೇಗಾ ಯೋಜನೆಯಡಿ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಮೈಸೂರು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಅವರು ಇಂದು ಪರಿಶೀಲಿಸಿದರು.

ತಾಲೂಕಿನ ಸವ್ವೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶ್ರೀ ಚೌಡೇಶ್ವರಿ ದೇವಸ್ಥಾನದ ಆವರಣದಲ್ಲಿ ಕೈಗೊಂಡಿರುವ ಕಲ್ಯಾಣಿ ಕಾಮಗಾರಿ ವೀಕ್ಷಿಸಿದ ಅವರು, ಅಲ್ಲಿನ ಡಿಜಿಟಲ್ ಗ್ರಂಥಾಲಯ ವೀಕ್ಷಿಸಿದರಲ್ಲದೆ, ನೋಂದಣಿ ಮಾಡಿಸಿಕೊಂಡು ವಿದ್ಯಾರ್ಥಿಗಳು, ಮಹಿಳೆಯರು ಹಾಗೂ ನಾಗರಿಕರು ಓದುವಿನಲ್ಲಿ ತೊಡಗಿಸಿಕೊಳ್ಳುವಂತೆ ಸಲಹೆ ನೀಡಿದರು. ಕೆ.ಜಿ.ಹುಂಡಿ ಗ್ರಾಮದ ಕೆರೆ ಅಭಿವೃದ್ಧಿ ವೀಕ್ಷಿಸಿದ ಗಾಯತ್ರಿ ಅವರು, ಇತರ ಕೆರೆಗಳನ್ನು ನರೇಗಾ ಯೋಜನೆಯಡಿ ಅಭಿವೃದ್ಧಿಪಡಿಸುವಂತೆ ಅಧಿಕಾರಿಗಳಿಗೆ ಅವರು ಸೂಚನೆ ನೀಡಿದರು.

ಚಿಪ್ಸ್ ಘಟಕ ಉದ್ಘಾಟನೆ: ಅಣ್ಣೂರು ಗ್ರಾಪಂ ವ್ಯಾಪ್ತಿಯ ಅಣ್ಣೂರು ಹಾಡಿಯಲ್ಲಿ ಸ್ವಾಮಿ ವಿವೇಕಾನಂದ ಸಂಘದ ಸಹಕಾರದೊಂದಿಗೆ ನಿರ್ಮಿಸಿರುವ ಚಿಪ್ಸ್ ಘಟಕವನ್ನು ಉದ್ಘಾಟಿಸಿ ಮಾತನಾಡಿದ ಗಾಯತ್ರಿ ಅವರು, ಮಹಿಳೆಯರು ಮತ್ತು ಹಾಡಿ ಜನರು ಸಮಾಜದಲ್ಲಿ ಮುಖ್ಯವಾಹಿನಿಗೆ ಬರಬೇಕು. ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಸದೃಢರಾದರೆ ಮಾತ್ರ ಮಹಿಳಾ ಸಬಲೀಕರಣ ಸಾಧ್ಯ ಎಂದು ಹೇಳಿದರು. ಅಣ್ಣೂರು ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಸಾರ್ವಜನಿಕರೊಂದಿಗೆ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ಚರ್ಚೆ ನಡೆಸಿ, ತಮ್ಮ ಪಂಚಾಯಿತಿ ಅಭಿವೃದ್ಧಿಗೆ ಪೂರಕವಾದ ಕಾಮಗಾರಿಗಳನ್ನು ಕೈಗೊಳ್ಳುವಂತೆ ಕರೆ ನೀಡಿದರು. ಸ್ವಚ್ಛತಾ ವಾಹನಕ್ಕೆ ಚಾಲನೆ ನೀಡಿ, ಮಹಿಳೆಯರಿಗೆ ಹಸಿ ಕಸ ಹಾಗೂ ಒಣ ಕಸದ ಬಕೆಟ್ ವಿತರಿಸಿ ಕಸವನ್ನು ಪ್ರತ್ಯೇಕವಾಗಿ ವಿಂಗಡಣೆ ಮಾಡಿ ವಾಹನ ಬಂದಾಗ ನೀಡಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂದು ಹೇಳಿದರು.

ಮತದಾನದ ಬಗ್ಗೆ ಜಾಗೃತಿ ಮೂಡಿಸಿ: ಸೋನಹಳ್ಳಿ ಹಾಡಿ ಸಮೀಪದಲ್ಲಿರುವ ಏಕಲವ್ಯ ವಸತಿ ಶಾಲೆ ಆವರಣದಲ್ಲಿ ಮತದಾನದ ಬಗ್ಗೆ ಜಾಗೃತಿ ಮೂಡಿಸುವ ಸ್ವೀಪ್ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಅವರು, ಮಕ್ಕಳೊಂದಿಗೆ ಸಮಾಲೋಚನೆ ನಡೆಸಿ, ಮತದಾನಕ್ಕೆ ನೋಂದಣಿ ಮಾಡಿಕೊಂಡಿರುವರು ಮುಂಬರುವ 2023ರ ವಿಧಾನಸಭಾ ಚುನಾವಣೆಯಲ್ಲಿ ತಪ್ಪದೇ ಮತದಾನ ಮಾಡಬೇಕು. ಜತೆಗೆ ನಿಮ್ಮ ಕುಟುಂಬದವರು ಹಾಗೂ ನೆರೆ ಹೊರೆಯವರಿಗೆ ಮತದಾನ ಮಾಡುವಂತೆ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು. ಏಕಲವ್ಯ ಶಾಲೆಯಲ್ಲಿಯೇ ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾರ್ಚ್ 7ರಂದು ನಡೆಯಲಿರುವ ಮುಖ್ಯಮಂತ್ರಿ ಕಾರ್ಯಕ್ರಮಕ್ಕೆ ಫಲಾನುಭವಿಗಳ ಆಯ್ಕೆಯ ಪಟ್ಟಿ ಸಿದ್ಧಪಡಿಸಿಕೊಂಡು, ಅವರಿಗೆ ಬಸ್ ವ್ಯವಸ್ಥೆಯ ಬಗ್ಗೆ ಪಿಡಿಓಗಳ ಜತೆ ಸಮನ್ವಯ ಮಾಡಿಕೊಳ್ಳಬೇಕು. ತಮ್ಮ ಎಲ್ಲಾ ಕಾರ್ಯಕ್ರಮಗಳ ಸಂದರ್ಭದಲ್ಲೂ ಮತದಾನದ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು. ಮತದಾನ ಶೇಕಡ ಪ್ರಮಾಣವನ್ನು ಹೆಚ್ಚಿಸುವ ಮೂಲಕ ಪ್ರಜಾಪ್ರಭುತ್ವದ ಮಹತ್ವದ ಬಗ್ಗೆ ಜನರಲ್ಲಿ ವಿಶ್ವಾಸ ಮೂಡಿಸಬೇಕು. ನೀರಿನ ಸಂಪರ್ಕ ಇಲ್ಲದ ಮತಗಟ್ಟೆಗಳಲ್ಲಿ ನೀರು ಪೂರೈಕೆ ಸಂಪರ್ಕ ಕಲ್ಪಿಸುವಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಇಇಗೆ ಸೂಚನೆ ನೀಡಿದರು. ನಂತರ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಅಭಿವೃದ್ಧಿ ಸಾಧಿಸುವಂತೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ಜೆರಾಲ್ಡ್ ರಾಜೇಶ್, ತಾಲೂಕು ಕಾರ್ಯಕ್ರಮ ಅಧಿಕಾರಿ ರಂಗಸ್ವಾಮಿ, ಗ್ರಾಮೀಣ ಉದ್ಯೋಗ ಖಾತ್ರಿ ಸಹಾಯಕ ನಿರ್ದೇಶಕ ಕಿರಣ್ ಆರ್.ಜಹಗೀರ್‌ದಾರ್ ಸೇರಿದಂತೆ ಇತರರು ಇದ್ದರು.

ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಸಂಖ್ಯೆ ಕ್ಷೀಣ

ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಯ ಉಪ ವ್ಯವಸ್ಥಾಪಕ ನಿರ್ದೇಶಕಿ ಡಾ. ಗೀತಾ ಗೋಪಿನಾಥ್ ವಿಷಾದ



ಮೈಸೂರು, ಮಾ.5(ಎಂಟಿವೈ)- ಜಾಗತಿಕ ಮಟ್ಟದಲ್ಲಿ ಭಾರತ ದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುತ್ತಿದ್ದರೂ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಸಂಖ್ಯೆ ಕ್ಷೀಣಿಸಿದೆ ಎಂದು ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಯ ಉಪ ವ್ಯವಸ್ಥಾಪಕ ನಿರ್ದೇಶಕಿ ಡಾ.ಗೀತಾ ಗೋಪಿನಾಥ್ ವಿಷಾದಿಸಿದ್ದಾರೆ.

ಮೈಸೂರು ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಭಾನುವಾರ ನಡೆದ 15ನೇ ಪದವೀಧರರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು. ಆಗ ಮಾತ್ರ ದೇಶದ ಪ್ರಗತಿ ಸಾಧ್ಯ. ಆದರೆ, ಭಾರತದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಕಡಿಮೆ ಇದೆ. ಇದರಿಂದ ದೇಶದ ಅಭಿವೃದ್ಧಿಗೆ ಹಿನ್ನಡೆಯಾಗಲಿದೆ. ಈ ಸಮಸ್ಯೆಯ ನಿವಾರಣೆಗೆ ಕ್ರಮ ಕೈಗೊಳ್ಳಬೇಕು. ಜಾಗತಿಕ ಮಟ್ಟದಲ್ಲಿ ಸಾಕಷ್ಟು ಬದಲಾವಣೆಗಳಾಗುತ್ತಿವೆ. ಇದರಿಂದ ಭಾರತೀಯ ಮಹಿಳೆಯರಿಗೂ ಹೆಚ್ಚು ಅವಕಾಶ ದೊರೆಯುತ್ತಿವೆ. ಅದನ್ನು ಸದ್ಬಳಕೆ ಮಾಡಿಕೊಳ್ಳಲು ಅರ್ಹ ಮಹಿಳೆಯರು ಮುಂದಾಗಬೇಕು. ಗುರಿ ಮತ್ತು ಆತ್ಮ ವಿಶ್ವಾಸದಿಂದ ಮುನ್ನುಗ್ಗಬೇಕು. ಹಕ್ಕುಗಳನ್ನು ಅಧಿಕಾರಯುತವಾಗಿ ಅಥವಾ ಹೋರಾಟ ಮಾಡಿಯಾದರೂ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ದೇಶದಲ್ಲಿ ಸಾರ್ವಜನಿಕ ಡಿಜಿಟಲ್ ವ್ಯವಸ್ಥೆ ತ್ವರಿತಗತಿಯಲ್ಲಿ ಪ್ರಗತಿ ಸಾಧಿಸುತ್ತಿದೆ. ಅದಕ್ಕೆ ಅಗತ್ಯವಾದ ಮೂಲಸೌಲಭ್ಯ ಒದಗಿಸಲಾಗುತ್ತಿದೆ. ನೀತಿ-ನಿಯಮದಲ್ಲಿ ಬದಲಾವಣೆ ತಂದು ಜನಸಾಮಾನ್ಯರಿಗೆ ದೊರಕುವಂತೆ ಡಿಜಿಟಲ್ ವ್ಯವಸ್ಥೆಯನ್ನು ಸರಳೀಕರಣಗೊಳಿಸಲಾಗಿದೆ. ಇದೇ ಮಾದರಿಯಲ್ಲಿ ಕಾರ್ಮಿಕ ವಲಯದಲ್ಲೂ ಸುಧಾರಣೆ ತರುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು. ಭಾರತ ಜಿ-20 ಗುಂಪಿನ ಅಧ್ಯಕ್ಷತೆ ವಹಿಸಿಕೊಂಡಿರುವುದು ಮಹತ್ವದ ಬೆಳವಣಿಗೆಯಾಗಿದೆ. ಪ್ರಮುಖ ಪಾತ್ರ ವಹಿಸಲು ವೇದಿಕೆಯಾಗಿದೆ. ಜಿ-20 ಗುಂಪಿನಲ್ಲಿರುವ ದೇಶಗಳು ಜಾಗತಿಕ ಜಿಡಿಪಿಯ ಶೇ.80ರಷ್ಟು ಪಾಲು ಹೊಂದಿವೆ. ಹೀಗಾಗಿ, ಈ ಎಲ್ಲ ದೇಶಗಳು ಒಂದೆಡೆ ಸೇರಿ ಜಗತ್ತು ಎದುರಿಸುವ ಸಮಸ್ಯೆಗಳ ಕುರಿತು ಚರ್ಚಿಸಲಿವೆ. ಸಾವಿನ ಪ್ರಮಾಣ ಏರಿಕೆ, ಸೈಬರ್ ರಕ್ಷಣೆ, ಕ್ರಿಪ್ಟೋ ಕರೆನ್ಸಿ, ಆಹಾರ ಭದ್ರತೆ, ಪೋಷಕಾಂಶದ ಕೊರತೆ ಇವು ಪ್ರಮುಖ ಚರ್ಚಾ ವಿಷಯಗಳಾಗಿವೆ. ವಿಶ್ವದ ಆರ್ಥಿಕತೆ ಕಷ್ಟದ ಹಾದಿಯಲ್ಲಿ ಸಾಗಿದೆ. ಚೀನಾ ಮತ್ತು ಅಮೆರಿಕಾದ ನಡುವಿನ ಸಂಘರ್ಷ, ಉಕ್ರೇನ್- ರಷ್ಯಾ ನಡುವಿನ ಯುದ್ಧ ತಲ್ಲಣ ಸೃಷ್ಟಿಸಿದೆ. ದೇಶ ದೇಶಗಳ ವಿದೇಶಾಂಗ ಬಾಂಧವ್ಯಕ್ಕೆ ಸವಾಲು ಎದುರಾಗಿದೆ. ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಯ(ಐಎಂಎಫ್) 190 ದೇಶಗಳ ಸದಸ್ಯತ್ವ ಹೊಂದಿದೆ ಎಂದರು.

ಬಾಲ್ಯದ ನೆನಪು: ನಾನು ಮೈಸೂರಿನ ನಿವಾಸಿ. ಇಲ್ಲೇ ನನಗೆ ಬುನಾದಿ ಶಿಕ್ಷಣ ದೊರೆಯಿತು. ಇಲ್ಲಿಂದ ನನ್ನ ಜೀವನ ಪ್ರಯಣ ಆರಂಭವಾಯಿತು. ನಿರ್ಮಲ ಕಾನ್ವೆಂಟ್‌ದಲ್ಲಿ ಪ್ರಾಥಮಿಕ, ಪ್ರೌಢಶಿಕ್ಷಣ, ಮಹಾಜನ ಕಾಲೇಜಿನಲ್ಲಿ ಪಿಯುಸಿ ಕಲಿತ ಬಳಿಕ ಉನ್ನತ ಶಿಕ್ಷಣವನ್ನು ದೆಹಲಿಯಲ್ಲಿ ಪೂರೈಸಿದೆ ಎಂದು ತಿಳಿಸಿದರು.

ಪದವಿ ಪ್ರದಾನ: ಕಾರ್ಯಕ್ರಮದಲ್ಲಿ 2021-22 ಸಾಲಿನ ಒಟ್ಟು 591 ಮಂದಿಗೆ ವಿವಿಧ ಪದವಿಯನ್ನು ವಿತರಿಸಲಾಯಿತು. 627 ಮಂದಿ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಅವರಲ್ಲಿ 302 ವಿದ್ಯಾರ್ಥಿನಿಯರು ಉನ್ನತ ಶ್ರೇಣಿ, 284 ವಿದ್ಯಾರ್ಥಿನಿಯರು ಪ್ರಥಮ ದರ್ಜೆ ಐವರು ವಿದ್ಯಾರ್ಥಿನಿಯರು ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ. ಸ್ನಾತಕೋತ್ತರ ಪದವಿ ವಿಭಾಗದಲ್ಲಿ 97 ವಿದ್ಯಾರ್ಥಿನಿಯರಲ್ಲಿ 18 ವಿದ್ಯಾರ್ಥಿನಿಯರು ಉನ್ನತ ದರ್ಜೆ 78 ವಿದ್ಯಾರ್ಥಿನಿಯರು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿ ಪದವಿ ಸ್ವೀಕರಿಸಿದರು.

ಕಾರ್ಯಕ್ರಮದ ಸಾನ್ನಿಧ್ಯವನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸಿದ್ದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ.ಬೆಟಸೂರಮಠ, ಪ್ರಾಂಶುಪಾಲ ಡಾ.ಎಚ್.ಬಿ.ಸುರೇಶ್, ಡೀನ್(ಶೈಕ್ಷಣಿಕ) ಡಾ.ರೇಚಣ್ಣ, ಪರೀಕ್ಷಾ ನಿಯಂತ್ರಣಾಧಿಕಾರಿ ಎಂ.ಎಂ.ಸ್ವಾಮಿ ಇದ್ದರು.

ಇಂದು, ನಾಳೆ ಸಿದ್ದಪ್ಪಾಜಿ ಜಾತ್ರೆ

ಮೈಸೂರು, ಮಾ.5(ಎಂಟಿವೈ)- ಮೈಸೂರಿನ ಒಂಟಿಕೊಪ್ಪಲಿನ ಶ್ರೀ ಸಿದ್ದಪ್ಪಾಜಿ ದೇವಸ್ಥಾನದಲ್ಲಿ ಮಾ.6 ಮತ್ತು 7ರಂದು ಶ್ರೀ ಸಿದ್ದಪ್ಪಾಜಿ ದೇವರ 73ನೇ ವರ್ಷದ ಪೂಜಾ ಮತ್ತು ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ಜರುಗಲಿದೆ.

ಪ್ರತಿ ವರ್ಷವೂ ಈ ದೇವಾಲಯದ ಜಾತ್ರಾ ಮಹೋತ್ಸವ ಸಂಭ್ರಮದಿಂದ ಜರುಗಲಿದ್ದು, ಈ ಬಾರಿ ಮಾ.6ರಂದು ಬೆಳಗ್ಗೆ 10ಕ್ಕೆ ಗಣಪತಿ ಪೂಜೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯ ನಡೆಯಲಿವೆ. ಮಧ್ಯಾಹ್ನ 1ಕ್ಕೆ ಕುಂಭಾಭಿಷೇಕ, ಮಹಾಮಂಗಳಾರತಿ ನಡೆಯಲಿವೆ. ಸಂಜೆ 7ಕ್ಕೆ ಖಂಡಾಯ ಮತ್ತು ಜಾನಪದ ಕಲಾತಂಡಗಳೊಂದಿಗೆ ರಥೋತ್ಸವವು ಮೊಹಲ್ಲಾದ ಪ್ರಮುಖ ಬೀದಿಗಳಲ್ಲಿ ಜರುಗಲಿದೆ. ಬಳಿಕ ಮಹಾಮಂಗಳಾರತಿ ಹಾಗೂ ಅನ್ನಸಂತರ್ಪಣೆ ನಡೆಯಲಿದೆ. ಮಾ.7ರಂದು ಮಧ್ಯಾಹ್ನ 1ಕ್ಕೆ ಮಹಾಮಂಗಳಾರತಿ ನಡೆಯಲಿದ್ದು, ಬಳಿಕ ಅನ್ನ ಸಂತರ್ಪಣೆ ನಡೆಯಲಿದೆ ಎಂದು ದೇವಾಲಯದ ಗುಡ್ಡಪ್ಪ ಸಿದ್ದಪ್ಪ ತಿಳಿಸಿದ್ದಾರೆ.

ಸದ್ದಿಲ್ಲದೆ ಮತ್ತೆ ತಲೆ ಎತ್ತುತ್ತಿರುವ ಮಹಾಮಾರಿ ಕೊರೊನಾ

- ರಾಜ್ಯದಲ್ಲಿ ಶುರುವಾಯ್ತು ಕೆಮ್ಮು, ನೆಗಡಿ ಉಪಟಳ
- ಇಂದು ಅಧಿಕಾರಿಗಳೊಂದಿಗೆ ಆರೋಗ್ಯ ಸಚಿವ ಸುಧಾಕರ್ ಸಭೆ



ಬೆಂಗಳೂರು, ಮಾ.5- ರಾಜ್ಯದಲ್ಲಿ ಸದ್ದಿಲ್ಲದೆ ಮಹಾಮಾರಿ ಕೊರೊನಾ ತಲೆ ಎತ್ತುತ್ತಿದ್ದು, ಎಲ್ಲೆಡೆ ನೆಗಡಿ, ಕೆಮ್ಮು, ಜ್ವರದ ಉಪಟಳ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ತಜ್ಞರು ಸಲಹೆ ನೀಡುತ್ತಿದ್ದು, ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅವರು ಸೋಮವಾರ ಆರೋಗ್ಯ ಇಲಾಖೆ ಅಧಿಕಾರಿಗಳು ಹಾಗೂ ತಜ್ಞರೊಂದಿಗೆ ಸಭೆ ನಡೆಸಲಿದ್ದಾರೆ. ಮಾರ್ಚ್ 8ರಂದು ಆಚರಿಸುವ 'ಅಂತಾರಾಷ್ಟ್ರೀಯ ಮಹಿಳಾ ದಿನ'ದ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ವಿಧಾನಸೌಧದ ಆವರಣದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ ಆಯೋಜಿಸಿದ್ದ 'ಸೈಕ್ಲೋಥಾನ್' ಉದ್ಘಾಟನಾ ಕಾರ್ಯಕ್ರಮದಲ್ಲಿ ಡಾಕೆ. ಸುಧಾಕರ್ ಅವರು ಪಾಲ್ಗೊಂಡಿದ್ದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ದೇಶದಲ್ಲಿ ಹೊಸ ವೈರಾಣು ಎಚ್3ಎನ್2 ಪ್ರಭೇದ ಪತ್ತೆಯಾಗಿದೆ. ಆದರೆ, ರಾಜ್ಯದಲ್ಲಿ ಇನ್ನೂ ಪತ್ತೆಯಾಗಿಲ್ಲ. ಈಗಾಗಲೇ ಅನುಸರಿಸಬೇಕಾದ ಕ್ರಮಗಳ ಕುರಿತು ಕೇಂದ್ರ ಸರ್ಕಾರ ಮಾರ್ಗಸೂಚಿ ಹೊರಡಿಸಿದ್ದು, ನಾಳೆ ನಡೆಯುವ ಸಭೆಯಲ್ಲಿ ಕೈಗೊಳ್ಳಬೇಕಾದ ಕ್ರಮಗಳು ಸೇರಿದಂತೆ ಹಲವು ವಿಷಯಗಳ ಬಗ್ಗೆ ಚರ್ಚಿಸಿ ಸೂಕ್ತ ನಿರ್ಣಯ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ. ಪ್ರಾಥಮಿಕ ವರದಿಗಳ ಪ್ರಕಾರ ಈ ವೈರಾಣುವಿನಿಂದ ದೀರ್ಘಾವಧಿಯ ಕೆಮ್ಮು ಇರಲಿದೆ. ಆದರೆ, ರಾಜ್ಯದಲ್ಲಿ ಎಚ್3ಎನ್2 ಪ್ರಭೇದ ಪತ್ತೆಯಾಗಿಲ್ಲ, ಹೀಗಾಗಿ ಆತಂಕ ಪಡುವ ಅಗತ್ಯವಿಲ್ಲ ಎಂದು ತಿಳಿಸಿದ್ದಾರೆ.

ಕಳೆದ ಒಂದು ವಾರದಿಂದ ರಾಜ್ಯದಲ್ಲಿ ಕೊರೋನಾ ಪ್ರಕರಣಗಳಲ್ಲಿ ದಿನದಿಂದ ದಿನ ಏರಿಕೆ ಕಂಡುಬರುತ್ತಿದೆ. ನಿನ್ನೆ ಕೂಡ ರಾಜ್ಯದಲ್ಲಿ 95 ಹಾಗೂ ಬೆಂಗಳೂರಿನಲ್ಲಿ 79 ಹೊಸ ಪ್ರಕರಣಗಳು ಪತ್ತೆಯಾಗಿವೆ. 100 ದಿನಗಳ ನಂತರ ಬೆಂಗಳೂರು ಸೇರಿ ಕೆಲ ಜಿಲ್ಲೆಗಳಲ್ಲಿ ಕೊರೊನಾ ಪ್ರಕರಣದಲ್ಲಿ ಹೆಚ್ಚಳಗಳು ಕಂಡು ಬಂದಿದೆ ಎಂದರು.

ರವಿಕುಮಾರ್‌ಗೆ ಪಿಎಚ್‌ಡಿ ಪದವಿ



ಮೈಸೂರು, ಮಾ.5-ಪ್ರೊ.ಎಚ್.ಚಂದ್ರಶೇಖರ್ ಅವರ ಮಾರ್ಗದರ್ಶನದಲ್ಲಿ ಮೈಸೂರಿನ ಅರವಿಂದನಗರದ ನಿವಾಸಿ ಎಂ. ರವಿಕುಮಾರ್ ಸಾಧರ ಪಡಿಸಿದ ನಕ್ಷತ್ರಗಳು ಎಂಬ ಪ್ರಬಂಧವನ್ನು ಕೋಲ್ಕತದ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಜರೀನ್ಸ್ ಹೆರಿಟೇಜ್ ಮುಕ್ತ ವಿಶ್ವವಿದ್ಯಾಲಯವು ಅಂಗೀಕರಿಸಿ, ಪಿಎಚ್‌ಡಿ ನೀಡಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

6.3.2023 ಸೋಮವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ, 05.02.2023ರಿಂದ 17.03.2023 ಶ್ರೀ ಶುಭಕೃತ ನಾಮಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಮಖ. ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ.

■ **ಕೆಎಂಪಿಕೆ ಚಾರಿಟೇಬಲ್ ಟ್ರಸ್ಟ್, ಪರಿಸರ ಸ್ನೇಹಿ ತಂಡ:** ಬೇಸಿಗೆ ಬೇಗೆ ತೀವ್ರತೆ ಹಿನ್ನೆಲೆಯಲ್ಲಿ ಪ್ರಾಣಿ ಪಕ್ಷಿಗಳಿಗೆ ನೀರಿನ ತೊಟ್ಟಿ, ಆಹಾರದ ಬಟ್ಟಲು ಅಳವಡಿಸುವ ಮತ್ತು ವಿತರಿಸುವ ಮೂಕ ಸ್ಪಂದನೆ, ಜಾಗೃತಿ ಅಭಿಯಾನ, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್. ಸ್ಥಳ: ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ, ಬೆಳಗ್ಗೆ 8.30ಕ್ಕೆ.

■ **ಶ್ರೀ ವಿಶ್ವಕರ್ಮ ಚಿನ್ನ-ಬೆಳ್ಳಿ ಕೆಲಸಗಾರರ ಹಿರಿಯ ಹಾಗೂ ಕಿರಿಯ ಪ್ರಾಮಾಣಿಕರ ಬಳಗ:** ಚಿನ್ನದ ಕೆಲಸಗಾರರು ಎದುರಿಸುತ್ತಿರುವ ಸಮಸ್ಯೆ ಕುರಿತು ಚರ್ಚಿಸಲು ಸಭೆ. ಸ್ಥಳ: ಹಳೇ ಸಂಘದ ಕಚೇರಿ ಬಳಿ, 5ನೇ ಕ್ರಾಸ್, ಅಶೋಕ ರಸ್ತೆ. ಮಧ್ಯಾಹ್ನ 12 ಗಂಟೆಗೆ.

■ **ಶ್ರೀ ದಿಗಂಬರ ಜೈನ ಸಮಾಜ:** ಶ್ರೀ ಶುಭಕೃತು ನಾಮ ಸಂವತ್ಸರದ ಫಾಲ್ಗುಣ ಮಾಸದ ನಂದೀಶ್ವರ ಅಷ್ಟಾಹ್ನಿಕ ಪರ್ವ, ಪ್ರವಚನ ಮಾಲೆ, ಮೈಸೂರು ವಿವಿ ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗದ ಪ್ರಾಧ್ಯಾಪಕರಾದ ಡಾ. ಎಂ.ಎಸ್.ಪದ್ಮ ಅವರಿಂದ ಗಾಥ: 551 ರಿಂದ 575ರವರೆಗೆ. ಸ್ಥಳ: ಶ್ರೀ ಶಾಂತೀಶ್ವರಸ್ವಾಮಿ ಬಸದಿ (ಕೋಟೆ ಬಸದಿ), ಸಂಜೆ 7 ಗಂಟೆಗೆ.

■ **ಧಾರ್ಮಿಕ ದತ್ತಿ ಇಲಾಖೆ:** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಗಿರಿಜಾ ಕಲ್ಯಾಣ, ಗಜಾರೋಹಣ. ಸ್ಥಳ: ದೇವಸ್ಥಾನದ ಆವರಣ, ಹಳೇ ಸಂತೇಪೇಟೆ. ರಾತ್ರಿ ನೃತ್ಯ ರೂಪಕ, ತಿಲ್ಲಾನ, ಮಂಗಳ, ಸ್ಥಳ: ರಮಾಗೋವಿಂದ ಕಲಾ ವೇದಿಕೆ, ಗಾನಭಾರತಿ, ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ- ಡಾ. ಕೃಷ್ಣಮೂರ್ತಿ ಹನೂರು, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ನೃತ್ಯ ಶಿಲ್ಪ 0ಯಾತ್ರೆ: ಲೇಖನ ಮತ್ತು ಪ್ರಸ್ತುತಿ- ಡಾ.ಬಿ.ಎನ್. ಮನೋರಮ, 6.40 ಅರಿವಿನ ಶಿಖರ- ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾ0ರ್ಯಕ್ರಮ ಸರಣಿ, ಗಾ0ಯನ- ನಿತಿನ್ ರಾಜಾರಾಂ ಶಾಸ್ತ್ರಿ, ಕೆ.ಟಿ. ಉದ0ಯಕಿರನ್, ವ್ಯಾಖ್ಯಾನ- ಡಾ.ಹೆಚ್.ಎಂ. ಕಲಾಶ್ರೀ, 7.25 ಭಾವಗೀತೆ: ರತ್ನಮಾಲಾ ಪ್ರಕಾಶ್, 10.00 ಲ0ಯ ಸಂಭ್ರಮ- ರಂಗ ಸಂಗೀತದಲ್ಲಿ ಭಾವ ಲ0ಯ: ಭಾಗವಹಿಸುವವರು, ಗುರುರಾಜ್ ಮಾರ್ಪಳ್ಳಿ, ಪ್ರಸ್ತುತಿ- ಹೆಚ್.ಎಲ್.ಶಿವಶಂಕರಸ್ವಾಮಿ.

ಮಧ್ಯಾಹ್ನ: 12.30 ದೇವರನಾಮ- ವೃಂದಗಾನ. 12.45 ನಮ್ಮ ಆರೋಗ್ಯ: ವಿಶ್ವ ಕಿಡ್ನಿ ದಿನಾಚರಣೆ0ಯ ಸಂದೇಶ ಮತ್ತು ಮಹತ್ವ ಕುರಿತು ತಿಳಿಸಿಕೊಡುತ್ತಾರೆ ಡಾ. ಕೆ.ಬಿ. ಶಶಿಕಿರಣ್, 1.20 ಭಾವಗೀತೆ- ಅಕ್ಷತಾ ಅದ್ದೋಣಿ.


ಸಂಜೆ: 4.00 ಮಹಿಳಾರಂಗ, 6.50 ಕೃಷಿರಂಗ: ಕಿಸಾನ್ ವಾಣಿ 'ಸುಸ್ಥಿರ ಬೇಸಾ0ಯ' ಸಾವ0ಯುವ ಕೃಷಿ ಪದ್ಧತಿ0ಯಲ್ಲಿರುವ ಅವಕಾಶಗಳನ್ನು ಕುರಿತು ನೇರ ಫೋನ್ ಇನ್ ಕಾ0ರ್ಯಕ್ರಮದಲ್ಲಿ ಭಾಗವಹಿಸುತ್ತಾರೆ ಡಾ. ಕೆ.ಜೆ. ದ0ಯಾಮಣಿ ಹಾಗೂ ಕೃಷಿಕ ಟಿ.ಎಸ್. ಸೋಮಶೇಖರ್.

ರಾತ್ರಿ: 9.15 ಸೆಲ್ಫಿ ತಗೋಳೋಣ ಬನ್ನಿ: ವಿನೋದ ಭಾಷಣ- ಪ್ರವೀಣ್ ಕುಮಾರ್ ಮಾವಿನಕಾಡು, 9.34 ಹಳ್ಳಿ ಹಾಡು: ಪಾಳ್ಯದ ಸೋಬಾನೆ ಶಿವಮ್ಮ ಮತ್ತು ಸಂಗಡಿಗರು ಪ್ರಸ್ತುತಿ- ಅಬ್ದುಲ್ ರಶೀದ್, 10.00 ನಾಟಕ 'ಕಾಶೀ 0ಯಾತ್ರೆ', ಮೂಲ ಕಾದಂಬರಿ- ತ್ರಿವೇಣಿ, ಬಾನುಲಿ ನಾಟಕ ರೂಪ- ಪ್ರೊ.ಎಸ್.ಎನ್. ಶಂಕರ್, 10.30 ಸವಿನೆನಪು.

ಮೈಸೂರಲ್ಲಿ ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ಸಮಾವೇಶ

ಕಾಂಗ್ರೆಸ್, ಜೆಡಿಎಸ್‌ನದ್ದು 'ಕುಟುಂಬ ಮೊದಲು ನಂತರ ರಾಷ್ಟ್ರ' ಸಿದ್ಧಾಂತ

ಬಿಜೆಪಿ ಚುನಾವಣಾ ಸಹ ಉಸ್ತುವಾರಿ ಅಣ್ಣಾಮಲೈ ಕುಟುಕು



ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಭಾನುವಾರ ಆಯೋಜಿಸಿದ್ದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ಸಮಾವೇಶದಲ್ಲಿ ಭಾಗವಹಿಸಿದ್ದ ಗಣ್ಯರು



ಬಿಜೆಪಿ ವಿಜಯ ಸಂಕಲ್ಪ ಸಮಾವೇಶದಲ್ಲಿ ನೆರೆದಿದ್ದ ಜನಸಮೂಹ

ಮೈಸೂರು, ಮಾ.5(ಎಸ್‌ಬಿಡಿ)– ಸೈದ್ಧಾಂತಿಕವಾಗಿ ಕಾಂಗ್ರೆಸ್ ಹಾಗೂ ಜೆಡಿಎಸ್ ಒಂದೇ ಆಗಿದ್ದು, ಹೊರನೋಟಕ್ಕಷ್ಟೇ ಭಿನ್ನತೆ ಪ್ರದರ್ಶಿಸುತ್ತಿವೆ ಎಂದು ರಾಜ್ಯ ಬಿಜೆಪಿ ಚುನಾವಣಾ ಸಹ ಉಸ್ತುವಾರಿ ಅಣ್ಣಾಮಲೈ ಹೇಳಿದರು.

ಬಿಜೆಪಿ 'ವಿಜಯ ಸಂಕಲ್ಪ ಯಾತ್ರೆ' ಮೈಸೂರಿಗೆ ಆಗಮಿಸಿದ್ದ ಹಿನ್ನೆಲೆಯಲ್ಲಿ ಇಲ್ಲಿನ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ ಚಾಮರಾಜ ಹಾಗೂ ಕೃಷ್ಣರಾಜ ವಿಧಾನಸಭಾ ಕ್ಷೇತ್ರಗಳ ಸಾರ್ವಜನಿಕ ಸಭೆಯಲ್ಲಿ ಮಾತನಾಡಿ, ತ್ರಿಪುರಾದಲ್ಲಿ ಸಿದ್ಧಾಂತ, ನಾಯಕತ್ವ ಭಿನ್ನವಿದ್ದರೂ ಕಾಂಗ್ರೆಸ್ ಹಾಗೂ ಎಡಪಕ್ಷಗಳು ಸೇರಿ ಬಿಜೆಪಿ ವಿರುದ್ಧ ಚುನಾವಣೆ ನಡೆಸಿದರೂ ಶೇ.50 ಸ್ಥಾನ ಪಡೆಯಿತು. ಈ ರೀತಿ ಕರ್ನಾಟಕದಲ್ಲೂ ಎರಡು ಪಕ್ಷಗಳಿವೆ. ಮೇಲ್ನೋಟಕ್ಕೆ ಮಾತ್ರ ಜಗಳ ಆಡುತ್ತಾರೆ. ಆದರೆ ಈ ಎರಡೂ ಪಕ್ಷಗಳಲ್ಲೂ 'ಕುಟುಂಬ ಮೊದಲು ರಾಷ್ಟ್ರ ನಂತರ' ಸಿದ್ಧಾಂತವಿದೆ. ಮೊದಲು ತಮ್ಮ ಪರಿವಾರದವರಿಗೆ ಟಿಕೆಟ್ ನೀಡಿ, ಉಳಿದಿದ್ದನ್ನು ಸಾಲಿನಲ್ಲಿರುವವರಿಗೆ ನೀಡುತ್ತಾರೆ. ಆದರೆ ಬಿಜೆಪಿಯಲ್ಲಿ ಕಾರ್ಯಕರ್ತರನ್ನು ಹುಡುಕಿ, ಜನರ ಪ್ರತಿಬಿಂಬವಾಗಿಸುವ ಸಂಸ್ಕೃತಿ ಇದೆ ಎಂದು ತಿಳಿಸಿದರು.

> ಮೈಸೂರು ಒಂದು ಐತಿಹಾಸಿಕ ನಗರ. ವಿಶ್ವದಲ್ಲಿ ಮೊದಲ ಬಾರಿ ವಿದ್ಯುಚ್ಛಕ್ತಿ ಸೌಲಭ್ಯ ಪಡೆದ ಹೆಗ್ಗಳಿಕೆ ಇದೆ. ರಾಜರ ಕಾಲದಿಂದಲೂ ಪ್ರತ್ಯೇಕವಾಗಿ ಅಭಿವೃದ್ಧಿಯಾಗಿರುವ ನಗರ. ನಮ್ಮ ಮೈಸೂರು ಅಂತಾರಾಷ್ಟ್ರೀಯ ಭೂಪಟದಲ್ಲಿ ಗುರುತಿಸಿಕೊಳ್ಳಲು ಮುಖ್ಯ ಕಾರಣ ಬಿಜೆಪಿ ಸರ್ಕಾರ. ಸ್ವಲ್ಪ ದೂರದಲ್ಲಿರುವ ಅವಳಿ ನಗರಗಳಾದ ಬೆಂಗಳೂರು–ಮೈಸೂರು ನಡುವೆ 4 ಗಂಟೆ ಪ್ರಯಾಣ ಅವಧಿ ಇತ್ತು. ಆದರೆ ಈಗ ಎಕ್ಸ್‌ಪ್ರೆಸ್‌ವೇ ನಿರ್ಮಾಣದಿಂದ ಪ್ರಯಾಣ ಅವಧಿ ಅರ್ಧಕ್ಕಿಂತ ಕಡಿಮೆಯಾಗಿದೆ. ಇದರ ಪರಿಣಾಮ ಮೂರ್ನಾಲ್ಕು ವರ್ಷಗಳ ನಂತರ ಅರಿವಿಗೆ ಬರುತ್ತದೆ. ನಗರದ ಚಿತ್ರಣ ಸಂಪೂರ್ಣ ಬದಲಾಗಲಿರುತ್ತದೆ.
> -ಅಣ್ಣಾಮಲೈ

ಕಾಂಗ್ರೆಸ್ ಸರ್ಕಾರವಿದ್ದಾಗ ಎ.ಕೆ.ಆಂಟನಿಯವರು ದೇಶದ ಗಡಿಯಲ್ಲಿ ಅಭಿವೃದ್ಧಿಯಾದರೆ ಕ್ಷೇಮವಲ್ಲ, ಆ ಕಾರ್ಯವನ್ನು ನಾವು ಮಾಡಲಾರೆವು ಎಂದಿದ್ದರು. ಪರಿಣಾಮ ಅರುಣಾಚಲಪ್ರದೇಶ ಗಡಿಯಲ್ಲಿ 1 ಲಕ್ಷ ಹಾಗೂ ಲಡಾಖ್ ಭಾಗದಲ್ಲಿ 50 ಸಾವಿರ ಎಕರೆ ಜಾಗ ಚೀನಾ ಅತಿಕ್ರಮಿಸಿಕೊಂಡಿತು. ಆದರೆ ನರೇಂದ್ರ ಮೋದಿ ಪ್ರಧಾನಿ ಆದ ಬಳಿಕ ಚೀನಾ ಹಾಗೂ ಪಾಕಿಸ್ತಾನಕ್ಕೆ ತಕ್ಕ ಉತ್ತರ ನೀಡಿದ್ದಾರೆ. ಗಡಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ದೇಶಕ್ಕೆ ಓರ್ವ ಉತ್ತಮ, ಸಮರ್ಥ ನಾಯಕ ಸಿಕ್ಕರೆ ಏನೆಲ್ಲಾ ಸುಧಾರಣೆ ಸಾಧ್ಯ ಎನ್ನುವುದಕ್ಕೆ ಮೋದಿ ಉದಾಹರಣೆಯಾಗಿದ್ದಾರೆ. ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಬಂದರೆ ನಂತರದ 9 ತಿಂಗಳಲ್ಲಿ ತೆಲಂಗಾಣ, ಎರಡೂವರೆ ವರ್ಷ ನಂತರ ತಮಿಳುನಾಡಿನಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದರು.

ದೇಶದೆಲ್ಲೆಡೆ ಕಾಂಗ್ರೆಸ್ ಮುಕ್ತ ಭಾರತ ಎಂದು ಜನ ನಿರ್ಧರಿಸಿದ್ದಾರೆ. 1948ರಲ್ಲಿ ಮಹಾತ್ಮ ಗಾಂಧಿ ಅವರೇ ಕಾಂಗ್ರೆಸ್ ಬೇಡ ಎಂದಿದ್ದರು. ಮುಂದಿನ ಚುನಾವಣೆಯಲ್ಲಿ ಕರ್ನಾಟಕದ ಜನತೆ ಯೋಚಿಸಿ ಮತದಾನ ಮಾಡಿದರೆ ಗಾಂಧೀಜಿ ಕನಸು ನನಸಾಗುತ್ತದೆ. ಅಧಿಕಾರ ಹಿಡಿಯುವ ಕಾಂಗ್ರೆಸ್ ಕನಸು ನನಸಾಗುವುದಿಲ್ಲ. ಬಿಜೆಪಿ ಸರ್ಕಾರ, ನಿಮ್ಮ ಪ್ರತಿನಿಧಿಗಳ ಅಭಿವೃದ್ಧಿ ಕಾರ್ಯಗಳನ್ನು ಗಮನದಲ್ಲಿಟ್ಟುಕೊಂಡು ಚಿಂತನೆ ಮಾಡಿ ಬೆಂಬಲಿಸುತ್ತೀರೆಂಬ ವಿಶ್ವಾಸವಿದೆ ಎಂದರು.

ಅಂಕಿಅಂಶವೇ ಇರಲಿಲ್ಲ: ಸ್ವಾತಂತ್ರ್ಯ ನಂತರ ಭಾರತದಲ್ಲಿ 2014ರವರೆಗೆ ಅಧಿಕಾರ ನಡೆಸಿದ ಸರ್ಕಾರಗಳು ಜನರ ದೃಷ್ಟಿಯಲ್ಲಿ ಯೋಚಿಸಿ ಕೆಲಸ ಮಾಡಿರಲಿಲ್ಲ. ಕಾಂಗ್ರೆಸ್ ಸರ್ಕಾರ ಒಂದು ಕುಟುಂಬದ ಉನ್ನತಿ ಹಾಗೂ ನಿರ್ದಿಷ್ಟ ಮತ ಬ್ಯಾಂಕ್‌ಗೆ ಮಾತ್ರ ಅಭಿವೃದ್ಧಿ ಕಾರ್ಯಕ್ರಮ ನೀಡುತ್ತಿತ್ತು. ಆದರೆ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಕಳೆದ 9 ವರ್ಷದಲ್ಲಿ 135 ಕೋಟಿ ಜನರಿಗೆ ಅಭಿವೃದ್ಧಿ ಕಾರ್ಯಕ್ರಮ ತಲುಪಿಸಿದೆ. 2014ರವರೆಗೆ ಅಭಿವೃದ್ಧಿಶೀಲ ರಾಜಕೀಯಕ್ಕೆ ಬದಲಾಗಿ ಧರ್ಮ, ಜಾತಿ ಹೆಸರಲ್ಲಿ ಒಂದು ಮತಬ್ಯಾಂಕ್ ಸೃಷ್ಟಿಸಿಕೊಂಡು ರಾಜಕೀಯ ಮಾಡಿಕೊಂಡು ಬರಲಾಗಿತ್ತು. ಅದನ್ನು ಮೋದಿ ಅವರು ಒಡೆದು ಹಾಕಿದ್ದಾರೆ ಎಂದು ತಿಳಿಸಿದರು.

ಕಾಂಗ್ರೆಸ್ ಸುಳ್ಳು ಭರವಸೆ: ತಮಿಳುನಾಡಿನಲ್ಲಿ 24 ತಿಂಗಳ ಹಿಂದೆ ಕಾಂಗ್ರೆಸ್ ಹಾಗೂ ಡಿಎಂಕೆ ಮೈತ್ರಿಯಾಗಿ ರೇಷನ್ ಕಾರ್ಡ್ ಹೊಂದಿರುವ ಮಹಿಳೆಗೆ ಮಾಸಿಕ 1 ಸಾವಿರ ನೀಡುವುದಾಗಿ ಭರವಸೆ ನೀಡಿದ್ದರು. ಆದರೆ ಈವರೆಗೆ 1 ಪೈಸೆ ನೀಡಿಲ್ಲ. ಅಲ್ಲಿ 3 ಕೋಟಿ ರೇಷನ್ ಕಾರ್ಡ್ ಇದ್ದು, ತಿಂಗಳಿಗೆ 3 ಸಾವಿರ ಕೋಟಿ ರೂ. ಬೇಕಾಗುತ್ತದೆ. ಇದೀಗ ಕರ್ನಾಟಕದಕ್ಕೂ ಕಾಂಗ್ರೆಸ್‌ನವರು ತಮ್ಮ ಸುಳ್ಳು ಭರವಸೆ ನಂಬಿ ಜನ ಮತ ನೀಡುತ್ತಾರೆ ಎಂಬ ಭ್ರಮೆಯಲ್ಲಿದ್ದಾರೆ. ಇಲ್ಲಿ ರೇಷನ್ ಕಾರ್ಡ್ ಇರುವ ಮನೆ ಮುಖ್ಯಸ್ಥೆಗೆ 2 ಸಾವಿರ ಕೊಡುವುದಾಗಿ ಹೇಳಿದ್ದಾರೆ. ಹಾಗಾದರೆ ತಿಂಗಳಿಗೆ 4 ಸಾವಿರ ಕೋಟಿ ರೂ. ಬೇಕಾಗುತ್ತದೆ. ಇಷ್ಟೊಂದು ಹಣ ಎಲ್ಲಿಂದ ತರುತ್ತಾರೆ. ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯನವರು ಮನೆಯಲ್ಲಿ ನೋಟ್ ಪ್ರಿಂಟಿಂಗ್ ಮಿಷನ್ ಇಟ್ಟುಕೊಂಡಿದ್ದಾರಾ. ಹಿಮಾಚಲ ಪ್ರದೇಶದಲ್ಲಿ ಸರ್ಕಾರಿ ನೌಕರರಿಗೆ ಓಪಿಎಸ್ ಜಾರಿಗೊಳಿಸುವ ಭರವಸೆ ನೀಡಿ ಅಧಿಕಾರಕ್ಕೆ ಬಂದರು. ಅದಕ್ಕೆ ಬಂಡವಾಳ ಹೊಂದಿಸಲು ಪ್ರತಿ ಲೀಟರ್ ಡೀಸೆಲ್‌ಗೆ 3 ರೂ. ಸೆಸ್ ಹಾಕುತ್ತಿದ್ದಾರೆ. ಮುಖ್ಯಮಂತ್ರಿ ಬೊಮ್ಮಾಯಿಯವರೂ ರೇಷನ್ ಕಾರ್ಡ್ ಇರುವ ಮಹಿಳೆಗೆ 15 ಸಾವಿರ ನೀಡುವುದಾಗಿ ಘೋಷಿಸಿ, ಪೆಟ್ರೋಲ್ ಹಾಗೂ ಡೀಸೆಲ್ ದರದಲ್ಲಿ 10 ರೂ. ಹೆಚ್ಚಿಸಿ ಸರಿದೂಗಿಸಬಹುದಲ್ಲವೇ. ಆದರೆ ಈ ರೀತಿಯ ಭರವಸೆಗಳನ್ನು ಜನ ನಂಬುವುದಿಲ್ಲ ಎಂದರು.

ಜನ ನಿರ್ಧರಿಸಿದ್ದಾರೆ: ಅಭಿವೃದ್ಧಿಶೀಲ ಆಡಳಿತದ ಕಾರಣದಿಂದಲೇ ಭಾರತದಲ್ಲಿ ನಿರಂತರವಾಗಿ ಬಿಜೆಪಿ ಗೆಲ್ಲುತ್ತಿದೆ. ಕೊರೊನಾ ಉತ್ತುಂಗದಲ್ಲಿದಾಗ ಬಿಹಾರ ಚುನಾವಣೆಯಲ್ಲಿ ಬಿಜೆಪಿಗೆ ಬೆಂಬಲ ನೀಡಿದರು. ನಂತರ ಗೋವಾ, ಉತ್ತರಾಖಂಡ, ತ್ರಿಪುರಾ, ಮಣಿಪುರ, ಉತ್ತರ ಪ್ರದೇಶ ಹೀಗೆ ಎಲ್ಲಾ ಕಡೆ ಬಿಜೆಪಿ ಸರ್ಕಾರ ಬಂದಿದೆ. ಕರ್ನಾಟಕದಲ್ಲಿ 2 ವರ್ಷ ಯಡಿಯೂರಪ್ಪನವರು, 1 ವರ್ಷ 215 ದಿನಗಳಿಂದ ಬೊಮ್ಮಾಯಿ ಅವರು ಉತ್ತಮ ಆಡಳಿತ ನೀಡಿದ್ದಾರೆ. 3 ವರ್ಷದಲ್ಲಿ ಕರ್ನಾಟಕದಲ್ಲಿರುವ ಎಲ್ಲಾ ಮನೆಗೆ ಅಭಿವೃದ್ಧಿ ತಲುಪಿವೆ ಎಂದು ಹೇಳಿದರು. ಕೊರೊನಾ ನಂತರ ದೊಡ್ಡ ರಾಜ್ಯ ಕರ್ನಾಟದಲ್ಲಿ ಚುನಾವಣೆ ಬಂದಿದೆ ಇಲ್ಲಿಯೂ ಬಿಜೆಪಿ ಅಧಿಕಾರಕ್ಕೆ ಬರುವ ವಿಶ್ವಾಸ ಅಚಲವಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಣ್ಣಿಸಿದ ಅಣ್ಣಾಮಲೈ: ಕೆಎಸ್.ಈಶ್ವರಪ್ಪನವರು ಸೈದ್ಧಾಂತಿಕ ವ್ಯಕ್ತಿ. ದಕ್ಷಿಣ ಭಾರತದಲ್ಲಿ ಬಿಜೆಪಿ ಇಷ್ಟೊಂದು ಗಟ್ಟಿಯಾಗಿರಲು ಇವರೂ ಪ್ರಮುಖ ಕಾರಣಕರ್ತರು. ಪ್ರತಾಪ್ ಸಿಂಹ ಅಭಿವೃದ್ಧಿಶೀಲ ಸಂಸದ. ಅದಕ್ಕೆ ಸಾಕ್ಷಿಯಾಗಿರುವ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಹೆದ್ದಾರಿಯನ್ನು ಮಾ.12ರಂದು ಪ್ರಧಾನಿ ಮೋದಿ ಅವರು ಉದ್ಘಾಟಿಸಲಿದ್ದಾರೆ. ಹಿರಿಯರಾದ ಶಾಸಕ ರಾಮದಾಸ್ ಅವರು ಮೈಸೂರು ಅಭಿವೃದ್ಧಿಗೆ ಚಾಲನೆ ಕೊಟ್ಟಿರುವ ಪ್ರಮುಖ ನಾಯಕರು. ನಾಗೇಂದ್ರ ಅವರನ್ನು ಮೊದಲ ಭೇಟಿಯಾಗಿದ್ದು, ಇವರು ಅಭಿವೃದ್ಧಿಶೀಲ ಶಾಸಕರೆನಿಸಿಕೊಂಡಿದ್ದಾರೆ ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ನಗರಾಧ್ಯಕ್ಷ ಶ್ರೀವತ್ಸ, ಶಾಸಕರಾದ ಎಸ್.ಎ.ರಾಮದಾಸ್, ಪ್ರತಾಪ್ ಸಿಂಹ, ಎಲ್.ನಾಗೇಂದ್ರ ಮೇಯರ್ ಶಿವಕುಮಾರ್, ಉಪ ಮೇಯರ್ ರೂಪ, ಮೈಲ್ಯಾಕ್ ಅಧ್ಯಕ್ಷ ಆರ್.ರಘು, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಬಿಜೆಪಿ ಕೆ.ಆರ್.ಕ್ಷೇತ್ರದ ಅಧ್ಯಕ್ಷ ವಡಿವೇಲು, ಚಾಮರಾಜ ಕ್ಷೇತ್ರದ ಅಧ್ಯಕ್ಷ ಸೋಮಶೇಖರ್ ರಾಜು, ಮುಖಂಡರಾದ ಗಿರಿಧರ್, ಹಿರೇಂದ್ರ ಶಾ, ದತ್ತಾತ್ರಿ, ಬಿ.ಪಿ.ಮಂಜುನಾಥ್, ಹೇಮಂತ್ ಕುಮಾರ್ ಗೌಡ, ದೇವರಾಜ್, ಕಿರಣ್ ಗೌಡ, ಮ.ವಿ.ರಾಂಪ್ರಸಾದ್, ಸೋಮಸುಂದರ್, ಜಯಪ್ರಕಾಶ್ ಮತ್ತಿತರರಿದ್ದರು.

ಬಿ.ಪಿ.ಮಂಜುನಾಥ್ ಗಾನ ಮೋಡಿ...



ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಭಾನುವಾರ ನಡೆದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ಸಮಾವೇಶದಲ್ಲಿ ಬಿಜೆಪಿ ಮುಖಂಡ ಹಾಗೂ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ.ಮಂಜುನಾಥ್ ತಮ್ಮ ಗಾಯನದ ಮೂಲಕ ಎಲ್ಲರ ಗಮನ ಸೆಳೆದರು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ 'ರಾಮನ ಅವತಾರ', 'ಶಂಕರಾಭರಣಂ' ಚಿತ್ರದ 'ಓಂಕಾರ ನಾದನು', 'ಒಳಿತು ಮಾಡು ಮನುಷ' ಸೇರಿದಂತೆ ಹಲವು ಹಾಡುಗಳನ್ನು ಸುಮಧುರವಾಗಿ ಹಾಡುವ ಮೂಲಕ ನೆರೆದಿದ್ದವರನ್ನು ರಂಜಿಸಿದರು. ಅಲ್ಲದೆ ಪ್ರಧಾನಿ ಮೋದಿ ಕುರಿತಾದ ಹಾಡನ್ನು ಹಾಡಿ ಮೆಚ್ಚುಗೆ ಪಡೆದರು.

ರಾಷ್ಟ್ರದ್ರೋಹಿ, ಧರ್ಮ–ಸಂಸ್ಕೃತಿ ವಿರೋಧಿ ಕಾಂಗ್ರೆಸ್ ಮಟ್ಟಹಾಕಲು ಬಿಜೆಪಿ ಅಧಿಕಾರಕ್ಕೆ ತನ್ನಿ



ಮೈಸೂರು, ಮಾ.5(ಎಂಕೆ)– ರಾಷ್ಟ್ರದ್ರೋಹಿ ಶಕ್ತಿಗಳು, ಧರ್ಮ–ಸಂಸ್ಕೃತಿ ವಿರೋಧಿಸುವಂತಹ ಕಾಂಗ್ರೆಸಿಗರನ್ನು ಮಟ್ಟಹಾಕಿ, ಭಾರತೀಯ ಸಂಸ್ಕೃತಿಯನ್ನು ಉಳಿಸುವ ಬಿಜೆಪಿಯನ್ನು ಅಧಿಕಾರಕ್ಕೆ ತನ್ನಿ ಎಂದು ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಮನವಿ ಮಾಡಿದರು.

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಭಾನುವಾರ ನಡೆದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ಸಮಾವೇಶದಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರನ್ನು ಸೋಲಿಸಿದ್ದ ಜಿಲ್ಲೆಯ ಜನತೆಗೆ ಮೊದಲು ಅಭಿನಂದನೆ ಸಲ್ಲಿಸುತ್ತೇನೆ ಎಂದು ಮಾತು ಆರಂಭಿಸಿದ ಈಶ್ವರಪ್ಪ, ಸಿದ್ದರಾಮಯ್ಯ ಅವರಿಗೆ ಸೋತಿದ್ದರೂ ಬುದ್ಧಿ ಬಂದಿಲ್ಲ. ಬಿಜೆಪಿ ಸರ್ಕಾರದ ಒಳ್ಳೆಯ ಕಾರ್ಯಕ್ರಮಗಳನ್ನು ಹೇಳುತ್ತಲೇ, ಮತ್ತೊಮ್ಮೆ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಬಿಜೆಪಿ ಜಾರಿ ಮಾಡಿರುವ ಎಲ್ಲಾ ಕಾಯ್ದೆಗಳನ್ನು ವಾಪಸ್ ತೆಗೆದುಕೊಳ್ಳುವುದಾಗಿ ಹೇಳುತ್ತಿದ್ದಾರೆ ಎಂದು ಕುಟುಕಿದರು.

ಬಾಂಬ್‌ಗಳನ್ನು ತಯಾರಿಸಿ, ಪರಸ್ಪರ ದ್ವೇಷವನ್ನುಂಟು ಮಾಡಿ ರಾಷ್ಟ್ರದ್ರೋಹಿ ಚಟುವಟಿಕೆಗಳಲ್ಲಿ ಭಾಗಿಯಾಗಿ ರಾಷ್ಟ್ರಭಕ್ತ ಯುವಕರನ್ನು ಕಗ್ಗೊಲೆ ಮಾಡಿ ಬ್ಯಾನ್ ಆಗಿರುವ ಪಿಎಫ್‌ಐ ಸಂಸ್ಥೆಯ ಮೇಲಿನ ನಿಷೇಧವನ್ನು ವಾಪಸ್ ಪಡೆಯುತ್ತಾರಂತೆ. ಹೆಣ್ಣು ಮಕ್ಕಳಿಗೆ ಇಲ್ಲ–ಸಲ್ಲದ ಆಸೆ ತೋರಿಸಿ ಮತಾಂತರ ಮಾಡುವವರ ವಿರುದ್ಧ ಜಾರಿಗೊಳಿಸಿರುವ ಮತಾಂತರ ಕಾಯ್ದೆ ಹಾಗೂ ತಾಯಿಯಂತೆ ಪೂಜಿಸುವ ಗೋವುಗಳ ರಕ್ಷಣೆಗೆ ಜಾರಿಯಾದ ಗೋಹತ್ಯೆ ನಿಷೇಧ ಕಾಯ್ದೆಯನ್ನೂ ವಾಪಸ್ ಪಡೆಯುವುದಾಗಿ ಹೇಳುತ್ತಿದ್ದಾರೆ. ಈ ದೇಶ ಚರಂಡಿ, ರಸ್ತೆ, ಕಟ್ಟಡಗಳನ್ನು ಕಟ್ಟಲು ಮಾತ್ರ ಇರುವುದಲ್ಲ. ಸ್ವಾತಂತ್ರ್ಯ ಹೋರಾಟಗಾರರು ಪ್ರಾಣ ಬಿಟಿದ್ದು ಚರಂಡಿ ಮಾಡುವುದಕ್ಕಲ್ಲ. ಈ ದೇಶದ ಸಂಸ್ಕೃತಿಯನ್ನು ಉಳಿಸಲು. ಅವರ ಪ್ರಾಣತ್ಯಾಗಕ್ಕೆ ಬೆಲೆಯಿದೆ ಎಂದು ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.

ಕಾಂಗ್ರೆಸ್‌ನವರು ಬಿಜೆಪಿ ಬಗ್ಗೆ ಹಗುರವಾಗಿ ಮಾತನಾಡುತ್ತಿದ್ದಾರೆ. ನಮ್ಮನ್ನು ಜಾತಿವಾದಿಗಳು ಎಂದು ಕರೆಯುತ್ತಿದ್ದಾರೆ. ಆದರೆ ಒಂದು ಕಡೆ ಸಿದ್ದರಾಮಯ್ಯನವರು ಕುರುಬರನ್ನು ಕಟ್ಟಿಕೊಂಡು ಹೋಗಿ ನನ್ನನ್ನು ಮುಖ್ಯಮಂತ್ರಿ ಮಾಡಿ ಎಂದರೆ, ಮತ್ತೊಂದು ಕಡೆ ಡಿ.ಕೆ.ಶಿವಕುಮಾರ್ ಒಕ್ಕಲಿಗರನ್ನು ಸೇರಿಸಿ ನನಗೊಂದು ಅವಕಾಶ ಕೊಡಿ ಎನ್ನುತ್ತಿದ್ದಾರೆ ಎಂದು ವ್ಯಂಗ್ಯವಾಡಿದರಲ್ಲದೆ ಭಾರತೀಯ ಜನತಾ ಪಾರ್ಟಿ ಜಾತಿವಾದಿಗಳದಲ್ಲ, ರಾಷ್ಟ್ರೀಯವಾದಿಗಳದ್ದು ಎಂದು ನುಡಿದರು.

ಪ್ರಧಾನಿ ನರೇಂದ್ರ ಮೋದಿ, ಅಮಿತ್ ಷಾ ರಾಜ್ಯಕ್ಕೆ ಬಂದರೆ, ಕಾಂಗ್ರೆಸ್‌ನಲ್ಲಿ ಇವರಿಬ್ಬರೇನಾ ಇರೋದು ಎನ್ನುತ್ತಿದ್ದರು. ರಾಜ್ಯ ಬಿಜೆಪಿಯ 50 ನಾಯಕರು ನಾಲ್ಕು ತಂಡಗಳಾಗಿ ಹೊರಟು ರಾಜ್ಯ ಪ್ರವಾಸ ಮಾಡುತ್ತಿದ್ದಾರೆ. ಆದರೆ ನೀವೆಲ್ಲಿ ಪ್ರವಾಸ ಮಾಡುತ್ತಿದ್ದೀರಿ... ಇರೋ ಮೂವರು ಮೂರು ದಿಕ್ಕಿನಲ್ಲಿದ್ದಾರೆ. ಅವರ ಪಕ್ಷದವರೇ ಅವರನ್ನು ಸೋಲಿಸುತ್ತಾರೆ ಎಂದು ಭವಿಷ್ಯ ನುಡಿದ ಅವರು, ರಾಜ್ಯದಲ್ಲಿ ಬಿಜೆಪಿ ಆಡಳಿತ ಮಾಡಿ ಎನ್ನುತಾರೆ. ಆದರೆ ಪೂರ್ಣ ಬಹುಮತ ನೀಡುತ್ತಿಲ್ಲ. ಹಳೇ ಮೈಸೂರು ಭಾಗದಲ್ಲಿ ಕೆಲವೇ ಮತಗಳಿಂದ ಸೋಲಾಗುತ್ತಿದೆ. ಆದ್ದರಿಂದ ಈ ಭಾಗದಲ್ಲಿ ಪೂರ್ಣ ಮತ ನೀಡಿದರೆ ರಾಜ್ಯದಲ್ಲಿ ಮತ್ತೊಮ್ಮೆ 150 ಸ್ಥಾನಗಳೊಂದಿಗೆ ಬಿಜೆಪಿ ಅಧಿಕಾರಕ್ಕೆ ಬರುವುದು ಖಚಿತ. ಕಳೆದ ಬಾರಿ ಸಿದ್ದರಾಮಯ್ಯ ಅವರನ್ನು ಸೋಲಿಸಿದಂತೆ ಮತ್ತೆ ಸೋಲಿಸಿ ಎಂದು ಹೇಳಿದರು.

ಕೇಂದ್ರ, ರಾಜ್ಯ ಸರ್ಕಾರದ ಅಭಿವೃದ್ಧಿ ಪಟ್ಟಿ ನೆನಪಿಸಿದರೆ ಜನರಿಂದ ಬಿಜೆಪಿಗೆ ಮತ



ಮೈಸೂರು, ಮಾ.5(ಎಂಕೆ)– ಬಿಜೆಪಿಗೆ ಮತ ನೀಡಿ ಎಂದು ಮನವಿ ಮಾಡುವ ಅಗತ್ಯವಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಭಿವೃದ್ಧಿ ಕಾರ್ಯಕ್ರಮಗಳ ಪಟ್ಟಿ ಕೊಟ್ಟು, ನೆನಪು ಮಾಡಿಕೊಟ್ಟರೆ ಸಾಕು ಅವರೇ ಸ್ವ–ಇಚ್ಛೆಯಿಂದ ಬಿಜೆಪಿ ಮತ ನೀಡುತ್ತಾರೆ ಎಂದು ಸಂಸದ ಪ್ರತಾಪ್ ಸಿಂಹ ಹೇಳಿದರು.

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ಸಮಾವೇಶದಲ್ಲಿ ಮಾತನಾಡಿದ ಅವರು, ಈ ಬಾರಿ ಕೃಷ್ಣರಾಜ ಮತ್ತು ಚಾಮರಾಜ ಕ್ಷೇತ್ರದ ಜೊತೆಗೆ ಚಾಮುಂಡೇಶ್ವರಿ ಮತ್ತು ನರಸಿಂಹರಾಜ ವಿಧಾನ ಸಭಾ ಕ್ಷೇತ್ರದಲ್ಲೂ ಕಮಲ ಅರಳಬೇಕು. ಅದಕ್ಕೊಸ್ಕರ ಪ್ರಧಾನಿ ನರೇಂದ್ರ ಮೋದಿಯವರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಮಾಜಿ ಸಿಎಂ ಯಡಿಯೂರಪ್ಪ ಅವರ ನೀಡಿರುವ ಜನಪರ ಕಾರ್ಯಕ್ರಮಗಳನ್ನು ನೆನಪು ಮಾಡಿಕೊಂಡು ಮನೆ ಮನೆಗೆ ತಲುಪಿಸುವಂತಹ ಕಾರ್ಯವನ್ನು ಕಾರ್ಯಕರ್ತರು ಮಾಡಬೇಕು ಎಂದರು.

ಕೇಂದ್ರ ಸರ್ಕಾರದ ಅಮೃತ್ ಯೋಜನೆ ಮೂಲಕ ಮೈಸೂರಿನಲ್ಲಿದ್ದ ಕುಡಿಯುವ ನೀರು ಸಮಸ್ಯೆ ಬಗೆಹರಿದಿದೆ. ಸ್ವಚ್ಛ ಭಾರತ್ ಮಿಷನ್ ಮೂಲಕ ಮೈಸೂರು ನಗರದ ಸ್ವಚ್ಛತಾ ಕಾರ್ಯ ನಡೆಯುತ್ತಿದೆ. ಮೈಸೂರು–ಬೆಂಗಳೂರು ದಶಪಥ ರಸ್ತೆ ಅಭಿವೃದ್ಧಿ ಮೂಲಕ ಮೈಸೂರು ಬೆಳವಣಿಗೆ ನಾಂದಿ ಹಾಡಿದ್ದು, ಪ್ರಧಾನಿ ಮೋದಿಯವರು. ರಿಂಗ್ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಯನ್ನಾಗಿಸಿ ಡಾಂಬರೀಕರಣ ಮಾಡಿ, ದೀಪಗಳು ಬೆಳಗುತ್ತಿದ್ದರೆ ಅದಕ್ಕೆ ಪ್ರಧಾನಿ ಮೋದಿ ಹಾಗೂ ಮುಡಾ ಅಧ್ಯಕ್ಷರಾಗಿದ್ದ ಹೆಚ್.ವಿ. ರಾಜೀವ್ ಕಾರಣ. ಹಾಗೆಯೇ ನಾಲ್ಕು ಪಟ್ಟಣ ಪಂಚಾಯಿತಿ ಹಾಗೂ ಒಂದು ನಗರ ಸಭೆ ಮಾಡುವುದಕ್ಕೆ ವೇದಿಕೆ ಸೃಷ್ಟಿ ಮಾಡಿದ್ದು, ಅಂದಿನ ಮೈಸೂರು ಉಸ್ತುವಾರಿ ಸಚಿವರಾಗಿದ್ದ ವಿ. ಸೋಮಣ್ಣ ಅವುಗಳನ್ನು ಸೇರಿಸಿಕೊಂಡು ಬೃಹತ್ ಮೈಸೂರು ಮಹಾನಗರ ಪಾಲಿಕೆಯನ್ನಾಗಿ ಮಾಡುವ ಎಲ್ಲಾ ಪ್ರಯತ್ನದಲ್ಲಿದ್ದೇವೆ. ಇದಕ್ಕೆ ಕಾರಣ ಕೇಂದ್ರ ಸರ್ಕಾರದ ಅಮೃತ್–2 ಯೋಜನೆಯಲ್ಲಿ ಕುಡಿಯುವ ನೀರಿನಿಂದ ಹಿಡಿದು ಚರಂಡಿ ಅಭಿವೃದ್ಧಿಯವರೆಗೆ ಅನುದಾನ ದೊರೆಯುವುದರಿಂದ ಸಾಧ್ಯವಾಗಿದೆ. ಈ ಮೂಲಕ ಮುಂದಿನ ದಿನಗಳಲ್ಲಿ ಚಾಮುಂಡೇಶ್ವರಿ ಕ್ಷೇತ್ರವನ್ನು ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿಸಿಕೊಳ್ಳಲಾಗುವುದು ಎಂದರು.

ಹಳೇ ಉಂಡುವಾಡಿ ಯೋಜನೆ ಕುಮಾರಸ್ವಾಮಿ ಮತ್ತು ಜಿ.ಟಿ.ದೇವೇಗೌಡರು ಪ್ರಯತ್ನ ಮಾಡಿರಬಹುದು ಆದರೆ ಅದಕ್ಕೆ 350 ಕೋಟಿ ರೂ., ದುಡ್ಡು ಕೊಟ್ಟಿದ್ದು ಮಾಜಿ ಸಿಎಂ ಯಡಿಯೂರಪ್ಪ ಅವರು. ಮತ್ತೆ ಅದೇ ಯೋಜನೆಗೆ 300 ಕೋಟಿ ರೂ. ಕೊಟ್ಟಿರುವುದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಯವರು. ಇವತ್ತು ಚಾಮುಂಡೇಶ್ವರಿ ಕ್ಷೇತ್ರದ 92 ಗ್ರಾಮಗಳಿಗೆ ಹಾಗೂ ಹುಣಸೂರಿನ 277 ಗ್ರಾಮಗಳಿಗೆ ಹಳೇ ಉಂಡುವಾಡಿಯಿಂದ ನೀರು ಪೂರೈಕೆಯಾಗುತ್ತಿದ್ದರೆ ಮೋದಿಯವರ ಜಲ ಜೀವನ್ ಮಿಷನ್ ಹಾಗೂ ರಾಜ್ಯ ಸರ್ಕಾರದ ಬಸವರಾಜ ಬೊಮ್ಮಾಯಿ ಯವರ ಕೊಡುಗೆಯಾಗಿದೆ. ಇದಿಷ್ಟು ವಿಚಾರವನ್ನು ಜನರಿಗೆ ಮನವರಿಕೆ ಮಾಡಿಕೊಟ್ಟರೆ ಸಾಕು ಸಹಜವಾಗಿ ಜನರು ಬಿಜೆಪಿ ಬೆಂಬಲಿಸುತ್ತಾರೆ. ಈ ಮೂಲಕ ಬಿಜೆಪಿ ವಿಜಯ ಸಂಕಲ್ಪ ಯಾತ್ರೆಯೂ ಪರಿಪೂರ್ಣವಾಗುತ್ತದೆ ಎಂದರು.

ಗೋಪಾಲಸ್ವಾಮಿಬೆಟ್ಟ ವಲಯದಲ್ಲಿ ಬೆಂಕಿ ಅವಘಡ

ಅರಣ್ಯಾಧಿಕಾರಿಗಳಿಂದ ಓರ್ವನ ಬಂಧನ

ಮೈಸೂರು, ಮಾ.5(ಎಸ್‌ಬಿಡಿ)– ಹಿಮವದ್ ಗೋಪಾಲಸ್ವಾಮಿಬೆಟ್ಟ ವಲಯದಲ್ಲಿ ಸಂಭವಿಸಿದ್ದ ಬೆಂಕಿ ಅವಘಡಕ್ಕೆ ಸಂಬಂಧಿಸಿದಂತೆ ಓರ್ವನನ್ನು ಅರಣ್ಯ ಇಲಾಖೆ ಅಧಿಕಾರಿಗಳು ಭಾನುವಾರ ಬಂಧಿಸಿದ್ದಾರೆ. ಮಗುವಿನಹಳ್ಳಿ ಗ್ರಾಮದ ಮಾದ ಅಲಿಯಾಸ್ ಕೆಂಚ (39 ವರ್ಷ) ಬಂಧಿತ. ಗೌರಿಕಲ್ಲು ಗುಡ್ಡ ಅರಣ್ಯ ಪ್ರದೇಶದಲ್ಲಿ ಓಡಾಡುತ್ತಿದ್ದ ಈತನನ್ನು ಗಸ್ತಿನಲ್ಲಿದ್ದ ಅರಣ್ಯ ಸಿಬ್ಬಂದಿ ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ತಾನೇ ಬೆಂಕಿ ಹಾಕಿದ್ದು ಎಂದು ಆತ ಹೇಳಿದ್ದು, ಈ ಸಂಬಂಧ ಪ್ರಕರಣ ದಾಖಲಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಗೋಪಾಲಸ್ವಾಮಿಬೆಟ್ಟ ವಲಯ ವ್ಯಾಪ್ತಿಯ ಗೌರಿಕಲ್ಲು ಗುಡ್ಡ ಅರಣ್ಯ ಪ್ರದೇಶದಲ್ಲಿ ನಿನ್ನೆ(ಮಾ.4) ಮಧ್ಯಾಹ್ನ 12.30ರ ಸಮಯದಲ್ಲಿ ಬೆಂಕಿ ಅವಘಡ ಸಂಭವಿಸಿತ್ತು. ಕಣಿವೆ ಪ್ರದೇಶವಾಗಿದ್ದರಿಂದ ಬೆಂಕಿ ನಂದಿಸುವ ಕಾರ್ಯಾಚರಣೆ ಸವಾಲಾಗಿತ್ತು. ಆದರೂ ಗೋಪಾಲಸ್ವಾಮಿ ಬೆಟ್ಟ, ಬಂಡೀಪುರ, ಕುಂದುಕೆರೆ, ಗುಂಡ್ಲುಪೇಟೆ, ಮೂಲೆಹೊಳೆ, ಮದ್ದೂರು ಹಾಗೂ ಓಂಕಾರ ವಲಯಗಳ ಸಿಬ್ಬಂದಿ ಎರಡು ಗಂಟೆ ಕಾರ್ಯಾಚರಣೆ ನಡೆಸಿ, ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ನೆಲಬೆಂಕಿ ಆಗಿದ್ದರಿಂದ ಯಾವುದೇ ಮರಗಳು ಹಾಗೂ ವನ್ಯಪ್ರಾಣಿಗೆ ಹಾನಿಯಾಗಿಲ್ಲ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರಾಗಿ ನೇಮಕ



ಮೈಸೂರು, ಮಾ.5–ಮೈಸೂರು ನಗರ ಜಿಲ್ಲೆಯ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರಾಗಿ ನಗರ ಪಾಲಿಕೆ ಮಾಜಿ ಸದಸ್ಯ ರಘುರಾಜೇ ಅರಸ್ ಅವರನ್ನು ನೇಮಕ ಮಾಡಿ ಮೈಸೂರು ವಿಭಾಗದ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರೂ ಆದ ಶಾಸಕ ಡಾ. ಯತೀಂದ್ರ ಅವರು ಆದೇಶ ಹೊರಡಿಸಿದ್ದಾರೆ. ಸಿದ್ದರಾಮಯ್ಯ ಮುಖ್ಯಮಂತ್ರಿಗಳಾಗಿದ್ದಾಗ ರಘುರಾಜೇ ಅರಸ್ ಅವರನ್ನು ಮೈಸೂರು ನಗರ ಪಾಲಿಕೆಯ ನಾಮ ನಿರ್ದೇಶಿತ ಸದಸ್ಯರಾಗಿ ನೇಮಕ ಮಾಡಿದ್ದರು.

ಆರೋಗ್ಯ ಕಾಪಾಡಿಕೊಳ್ಳಲು ತುಳಸಿ ಮಿಶ್ರಿತ ಕಬ್ಬಿನ ಹಾಲಿಗೆ ಡಿಮ್ಯಾಂಡಪ್ಪೋ ಡಿಮ್ಯಾಂಡು



ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಮಾ.5– ಹವಾಮಾನದ ವೈಪರೀತ್ಯದಿಂದಾಗಿ ಕಂಡು ಬರುವ ಆರೋಗ್ಯ ಸಮಸ್ಯೆ ಹಾಗೂ ಕೊರೊನಾದಂತಹ ಸಾಂಕ್ರಾಮಿಕ ರೋಗ, ಗಂಟಲು ಬೇನೆ ಸೇರಿದಂತೆ ಇನ್ನಿತರ ಸಮಸ್ಯೆಗಳಿಗೆ ರಾಮಬಾಣವಾಗಿ ಪರಿಣಮಿಸಿರುವ ತುಳಸಿ ಮಿಶ್ರಿತ ಕಬ್ಬಿನ ಹಾಲಿಗೆ ಡಿಮ್ಯಾಂಡ್ ಹೆಚ್ಚಾಗಿದ್ದು, ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿ ಯುವಕನೊಬ್ಬ ಗ್ರಾಹಕರ ಆರೋಗ್ಯ ಕಾಪಾಡುವ ಕಬ್ಬಿನ ಹಾಲು ಪೂರೈಸಿ ಜೀವನದ ಬಂಡಿ ಸಾಗಿಸುತ್ತಿದ್ದಾರೆ.

ಸಾಂಸ್ಕೃತಿಕ ನಗರಿ ಮೈಸೂರಿನ ಹಲವೆಡೆ ತಿನಿಸು ಹಾಗೂ ಪಾನೀಯಗಳಲ್ಲಿ ವಿಶೇಷ ಕಂಡುಕೊಂಡು ವ್ಯಾಪಾರ ಮಾಡುವವರ ಸಂಖ್ಯೆ ಹೆಚ್ಚಾಗಿದ್ದು, ಅವರಲ್ಲಿ ಮೈಸೂರಿನ ಜೆಎಲ್‌ಬಿ ರಸ್ತೆಯ ಇನ್‌ಸ್ಟಿಟ್ಯೂಷನ್ ಆಫ್ ಎಂಜಿನಿಯರ್ಸ್ ಜಂಕ್ಷನ್‌ನಲ್ಲಿ 'ಚಾಮುಂಡೇಶ್ವರಿ ಕಬ್ಬಿನ ಹಾಲಿನ ಕೇಂದ್ರ'ದ ಹೆಸರಲ್ಲಿ ಕಬ್ಬಿನ ಜ್ಯೂಸ್ ಸೆಂಟರ್ ನಡೆಸುತ್ತಿರುವ ಕಾಳಿಸಿದ್ದಹುಂಡಿ ನಿವಾಸಿ ಶಿವು ಎಂಬಾತ ಗ್ರಾಹಕರಿಂದ ಮೆಚ್ಚುಗೆ ಗಳಿಸಿದ್ದು, ಆತ ನೀಡುವ ತುಳಸಿ ಮಿಶ್ರಿತ ಕಬ್ಬಿನ ಜ್ಯೂಸ್‌ಗೆ ಬೇಡಿಕೆ ವ್ಯಕ್ತವಾಗುತ್ತಿದೆ. ಔಷಧೀಯ ಗುಣವುಳ್ಳ, ನೈಸರ್ಗಿಕವಾಗಿ ಬೆಳೆದ ತುಳಸಿಯನ್ನೇ ಬಳಸುತ್ತಿರುವುದರಿಂದ ಗ್ರಾಹಕರ ವಿಶ್ವಾಸ ಗಳಿಸಿಕೊಂಡು ಜೀವನ ರೂಪಿಸಿಕೊಂಡಿದ್ದಾರೆ.



3–4 ತಿಂಗಳಿಂದ ಹೊಸ ಪ್ರಯೋಗ: ಮೈಸೂರಿನ ವಿವಿಧೆಡೆ ಕಳೆದ 20 ವರ್ಷದಿಂದ ಕಬ್ಬಿನ ಜ್ಯೂಸ್ ಸೆಂಟರ್ ನಡೆಸಿ ಜೀವನ ರೂಪಿಸಿಕೊಂಡಿರುವ ಶಿವು, ಕೋವಿಡ್ ಸಂದರ್ಭದಲ್ಲಿ ಒಂದೂವರೆ ವರ್ಷ ಜ್ಯೂಸ್ ಸೆಂಟರ್ ತೆರೆಯಲು ಅವಕಾಶ ನೀಡದ ಕಾರಣ ಮನೆಯಲ್ಲೇ ಇದ್ದರು. ಜ್ಯೂಸ್ ಸೆಂಟರ್ ತೆರೆದ ಬಳಿಕ ಕಳೆದ 3–4 ತಿಂಗಳ ಹಿಂದೆ ಆಯುರ್ವೇದ ವೈದ್ಯರೊಬ್ಬರು ಕಬ್ಬಿನ ಹಾಲು ಕುಡಿಯಲು ಬಂದಾಗ ನೀಡಿದ ಸಲಹೆಯನ್ನು ಪರಿಪಾಲಿಸಿ, ಇದೀಗ ಹೊಸ ಪ್ರಯೋಗ ಮಾಡಿ ಗ್ರಾಹಕರ ವಿಶ್ವಾಸ ಗಳಿಸಿಕೊಂಡಿದ್ದಾರೆ.

ಬದಲಾದ ವಾತಾವರಣ, ಹವಾಮಾನ ವೈಪರಿತ್ಯದಿಂದಾಗಿ ಸಾಕಷ್ಟು ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗಿದೆ. ಅದರಲ್ಲಿ ಗಂಟಲು ಸಂಬಂಧಿ ಸಮಸ್ಯೆ ಸಾಕಷ್ಟು ಜನರನ್ನು ಕಾಡತೊಡಗಿದೆ. ಈ ಹಿನ್ನೆಲೆಯಲ್ಲಿ ಕಬ್ಬಿನ ಹಾಲಿನೊಂದಿಗೆ ತುಳಸಿ ಬೆರೆಸಿ ಕುಡಿಯುವುದರಿಂದ ಗಂಟಲಿನ ನೋವು, ಗಂಟಲಿನ ಕೆರೆತ ಸೇರಿದಂತೆ ವಿವಿಧ ಆರೋಗ್ಯ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ. ಅಲ್ಲದೆ, ರೋಗ ನಿರೋಧಕ ಶಕ್ತಿ ಉಲ್ಬಣಗೊಳ್ಳಲು ತುಳಸಿ ಸಹಕಾರಿಯಾಗಿರುವುದರಿಂದ ವೈದ್ಯರು ನೀಡಿದ ಸಲಹೆ ಮೇರೆಗೆ ಕಬ್ಬಿನೊಂದಿಗೆ ತುಳಸಿ ಸೇರಿಸಿ ಅರೆದು ಕಬ್ಬಿನ ಹಾಲನ್ನು ಗ್ರಾಹಕರಿಗೆ ನೀಡುತ್ತಿದ್ದಾರೆ. ಇದರಿಂದ ಗ್ರಾಹಕರು ಹೊಸ ರುಚಿಯೊಂದಿಗೆ, ಆರೋಗ್ಯ ವರ್ಧಕ ಪಾನೀಯದ ರೂಪದಲ್ಲಿ ತುಳಿಸಿ ಮಿಶ್ರಿತ ಕಬ್ಬಿನ ಹಾಲನ್ನು ಸೇವಿಸಲು ಮುಂದಾಗಿದ್ದಾರೆ.

ಈ ಜ್ಯೂಸ್ ಸೆಂಟರ್‌ನಲ್ಲಿ ತುಳಸಿ ಮಾತ್ರವಲ್ಲದೆ, ಹಿರಳೆಕಾಯಿ, ನಿಂಬೆ ಹಣ್ಣನ್ನು ಕಬ್ಬಿನ ಜ್ಯೂಸ್‌ಗೆ ಮಿಶ್ರಣ ಮಾಡಿ ಕೊಡಲಾಗುತ್ತದೆ. ಗ್ರಾಹಕರು ಬಯಸಿದರೆ ಮಾತ್ರ ಹಿರಳೇಕಾಯಿ ಅಥವಾ ನಿಂಬೆ ಹಣ್ಣು ಮಿಶ್ರಣ ಮಾಡಿ ಕಬ್ಬನ್ನು ಅರೆಯಲಾಗುತ್ತದೆ. ಆರೋಗ್ಯ ಕಾಪಾಡಿಕೊಳ್ಳಲು ಕಾಳಜಿಯುಳ್ಳ ಹಲವು ಗ್ರಾಹಕರು, ಕಾಲೇಜು ವಿದ್ಯಾರ್ಥಿಗಳು, ವಿವಿಧ ಕಚೇರಿಯಲ್ಲಿ ಸೇವೆ ಸಲ್ಲಿಸುತ್ತಿರುವ ಉದ್ಯೋಗಿಗಳು, ಶಾಲಾ–ಕಾಲೇಜು ಅಧ್ಯಾಪಕರು, ಉಪನ್ಯಾಸಕರು ತುಳಸಿ ಮಿಶ್ರಿತ ಕಬ್ಬಿನ ಹಾಲನ್ನು ಸೇವಿಸಲು ಬಯಸಿ ಈ ಸೆಂಟರ್‌ಗೆ ಆಗಮಿಸುತ್ತಿರುವುದು ವಿಶೇಷ.

ಯಾವುದೇ ಹಣ್ಣು ಬಳಸಲ್ಲ

ಕೆಲವರು ಕಬ್ಬಿನ ಹಾಲಿನೊಂದಿಗೆ ವಿವಿಧ ಹಣ್ಣುಗಳ ರಸವನ್ನು ಮಿಶ್ರಣ ಮಾಡುವಂತೆ ಸಲಹೆ ನೀಡಿದ್ದಾರೆ. ಆದರೆ, ನಾನು ಹಣ್ಣು ಮಿಶ್ರಣ ಮಾಡುವ ಸಲಹೆಯನ್ನು ಸ್ವೀಕರಿಸಿಲ್ಲ. ಕಬ್ಬಿನ ಜ್ಯೂಸ್‌ನ ರುಚಿ ಸವಿಯಬೇಕಾದರೆ, ಬೇರೆ ಹಣ್ಣುಗಳ ರಸ ಮಿಶ್ರಣ ಮಾಡುವ ಅವಶ್ಯಕತೆ ಇಲ್ಲ. ಕಬ್ಬಿನ ಹಾಲಿನ ನೈಜ ರುಚಿಯನ್ನು ಬೇರೆ ಹಣ್ಣುಗಳು ಹೊಡೆದು ಹಾಕುತ್ತವೆ. ಹಾಗಾಗಿ ವೈದ್ಯರ ಸಲಹೆ ಮೇರೆಗೆ ತುಳಸಿ, ಹಿರಳೆಕಾಯಿ, ನಿಂಬೆಹಣ್ಣು ಹೊರತುಪಡಿಸಿ ಬೇರೆ ಯಾವುದೇ ವಸ್ತುಗಳನ್ನು ಬಳಸುವುದಿಲ್ಲ. ಪಾಲಹಳ್ಳಿಯಿಂದ ಪಿಂಡಿ ಲೆಕ್ಕದಲ್ಲಿ ಕಬ್ಬನ್ನು ತರುತ್ತೇವೆ. ತಾಜತನದಿಂದ ಇರುವ ತುಳಸಿಯನ್ನು ತಂದು ಕಬ್ಬು ಕರೆಯುವಾಗಲೇ ಒಂದು ಹಿಡಿ ತುಳಸಿ ಸೇರಿಸಿ ಅರೆಯುತ್ತೇವೆ. ತುಳಸಿ ಮಿಶ್ರಿತ ಕಬ್ಬಿನ ಹಾಲು ಕುಡಿಯುಲು ಗ್ರಾಹಕರು ಇಚ್ಛಿಸಿ ಬರುತ್ತಿದ್ದಾರೆ.

"ಶಿವು
ಚಾಮುಂಡೇಶ್ವರಿ ಕಬ್ಬಿನ ಜ್ಯೂಸ್ ಸೆಂಟರ್ ನಡೆಸುವ ಯುವಕ

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ ರೋಗಿಯ ಹಿಂದೆ ಓಡಿ ಹೋಗುತ್ತಿದ್ದರು.
ಜನ ಕೇಳಿದರು, ಏನಾಯ್ತು ಡಾಕ್ಟರೆ.
ಡಾಕ್ಟರ್: ಐದು ಸಲಾ ಆಯ್ತು... ಬಡ್ಡಿಮಗ
ತಲೆ ಆಪರೇಶನ್‌ಗೆ ಅಂತಾ ಬರ್ತಾನೆ,
ಕೂದಲು ಕತ್ತರಿಸಿದ ತಕ್ಷಣ ಓಡಿ, ಹೋಗ್ತಾನೆ...!

ಮೈಸೂರು ಮಿತ್ರ

ಸೋಮವಾರ, 6 ಮಾರ್ಚ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಜಗತ್ತಿನಲ್ಲಿ ಯಾರೂ ಯಾರನ್ನೂ ತಿದ್ದಲು ಸಾಧ್ಯವಿಲ್ಲ. ಒಂದು ವೇಳೆ ಯಾರನ್ನಾದರೂ ತಿದ್ದುತ್ತೇವೆ ಎಂದುಕೊಂಡರೆ ಅದು ನಮ್ಮ ಮೂರ್ಖತನ. ನಮ್ಮನ್ನು ನೋಡಿ ಬೇರೆಯವರು ತಿದ್ದಿಕೊಳ್ಳುವಂತೆ ನಾವು ಬದುಕಬೇಕು ಅಷ್ಟೇ.

– ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅನ್ನ ಇಕ್ಕಿ ಸಾಕು ಅನ್ನಿಸಬಹುದು,
ದುಡ್ಡು ಕೊಟ್ಟು ಸಾಕು ಅನ್ನಿಸೋಕಾಗಲ್ಲ.

ನಿಮ್ಮ ಪತ್ರಗಳು

ಪರೀಕ್ಷೆ ಎಂದರೆ ಭಯವೇಕೆ? ಸಂಭ್ರಮಿಸಿ...

ಮಾನ್ಯರೆ,

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳು ಸಮೀಪಿಸುತ್ತಿದ್ದು, ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಯಾವುದೇ ರೀತಿಯ ಆತಂಕ, ಉದ್ವೇಗ, ಭಯ, ಖಿನ್ನತೆಗೆ ಒಳಗಾಗಬಾರದು. ಪರೀಕ್ಷೆ ಎಂಬ ಗುಮ್ಮ ವಿದ್ಯಾರ್ಥಿಗಳನ್ನು ಕಾಡುತ್ತಿರುತ್ತದೆ, ಹಬ್ಬದ ರೀತಿಯಂತೆ ಪರೀಕ್ಷೆಯನ್ನು ಸಂಭ್ರಮಿಸಬೇಕು.

ಓದುವ ಸಂದರ್ಭದಲ್ಲಿ ಆಗಾಗ ವಿಶ್ರಾಂತಿಯನ್ನು ಪಡೆದು ಸಂಗೀತ ಕೇಳುವುದು, ಆಟ ಆಡುವುದು, ತಮಾಷೆಯ ಮಾತುಗಳು, ಅತ್ತಿತ್ತ ನಡೆದಾಡುವುದು, ಹಾಸ್ಯ ಭರಿತ ಲೇಖನಗಳನ್ನು ಓದುವುದರಿಂದ ಓದಿನಲ್ಲಿ ಹೆಚ್ಚಿನ ಆಸಕ್ತಿ ಉಂಟಾಗುತ್ತದೆ. ನಿರಂತರವಾಗಿ ಓದುತ್ತಿದ್ದರೆ ಬೋರ್ ಎನಿಸುತ್ತದೆ. ಓದಿನಲ್ಲಿ ಏಕಾಗ್ರತೆಯನ್ನು ವಹಿಸಬೇಕು, ಒಂದೊಂದು ವಿಷಯಕ್ಕೆ ಇಂತಿಷ್ಟು ಸಮಯವನ್ನು ನಿಗದಿ ಮಾಡಿಕೊಂಡು ಓದಬೇಕು, ಸರಿಯಾದ ಸಮಯಕ್ಕೆ ಊಟವನ್ನು ಮಾಡಬೇಕು, ಕನಿಷ್ಠ ಆರು ಗಂಟೆ ನಿದ್ದೆ ಮಾಡಲೇಬೇಕು. ಇಲ್ಲದಿದ್ದರೆ ಮೆದುಳಿನ ಕಾರ್ಯಕ್ಷಮತೆ ಕುಗ್ಗುತ್ತದೆ, ಬೇರೆಯವರು ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ ಎಂದು ಅವರ ಚಿಂತೆಯಲ್ಲಿರದೆ, ನಿಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಓದಿ ಅಂಕ ಗಳಿಸಬೇಕು, ಒಂದು ಪರೀಕ್ಷೆಯಲ್ಲಿ ಅಂಕಗಳು ಕಡಿಮೆ ಬಂದರೂ ಚಿಂತಿಸದೆ, ಮುಂದಿನ ಪರೀಕ್ಷೆಗೆ ಅಣಿಯಾಗಬೇಕು, ಇಲ್ಲದಿದ್ದರೆ ತೊಂದರೆ ಕಟ್ಟಿಟ್ಟ ಬುತ್ತಿ, ಬೆಳಗಿನ ಜಾವ ಓದುವಿಗೆ ಅತ್ಯಂತ ಪ್ರಾಶಸ್ತ್ಯ ಸಮಯವಾಗಿರುತ್ತದೆ, ಕಂಠಪಾಠ ಮಾಡಿ ಉತ್ತರಿಸುವ ವಿಧಾನ ಕೈಬಿಡಬೇಕು, ಪರೀಕ್ಷೆ ಬಂದೇ ಬಿಟ್ಟಿತು ಎಂದು ಧೃತಿಗೆಡದೆ, ಇರುವ ಸಮಯವನ್ನು ವ್ಯರ್ಥ ಮಾಡದೆ ಸದುಪಯೋಗ ಮಾಡಿಕೊಳ್ಳಬೇಕು, ಸಮಯದ ಸದ್ವಿನಿಯೋಗ ಮಾಡಿಕೊಳ್ಳುವುದರಲ್ಲಿ ವಿದ್ಯಾರ್ಥಿಗಳ ಭವಿಷ್ಯ ನಿರ್ಣಯವಾಗುತ್ತದೆ.

ಪ್ರಶ್ನೆ ಪತ್ರಿಕೆಯನ್ನು ನೋಡಿ ಭಯಭೀತರಾಗಬಾರದು, ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆಯನ್ನು ಹತ್ತು ನಿಮಿಷಗಳ ಕಾಲ ಚೆನ್ನಾಗಿ ಓದಬೇಕು, ಅನಂತರ ತಮಗೆ ಗೊತ್ತಿರುವ ಪ್ರಶ್ನೆಗಳಿಗೆ ಉತ್ತರವನ್ನು ಮೊದಲು ಬರೆಯಬೇಕು, ವಿದ್ಯಾರ್ಥಿಗಳ ಮೇಲೆ ಶಿಕ್ಷಕರು ಮತ್ತು ಪೋಷಕರು ಅತಿಯಾದ ಒತ್ತಡವನ್ನು ಹೇರಬಾರದು, ಓದುವುದಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಿಸಬೇಕು, ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಆಲ್ ದ ಬೆಸ್ಟ್..

– ಪರಶಿವಮೂರ್ತಿ ಎನ್.ಪಿ, ಶಿಕ್ಷಕರು, ನಂಜೀಪುರ, ಸರಗೂರು ತಾಲೂಕು.

ಸಿಪಿಕೆಗೆ 'ಜ್ಞಾನಪೀಠ' ಪ್ರಶಸ್ತಿ ಸಿಗಬೇಕು

ಮಾನ್ಯರೆ,

2020–21ನೇ ಸಾಲಿನ ಪ್ರತಿಷ್ಠಿತ 'ಪಂಪ ಪ್ರಶಸ್ತಿ'ಗೆ ಬಾಜನವಾಗಿರುವ 'ಸಿಪಿಕೆ' ಯವರಿಗೆ ಅಭಿನಂದನೆಗಳು. ಸರಳ ಸಜ್ಜನಿಕೆಯ ಸಾಕಾರ ಮೂರ್ತಿ, ಅಜಾತ ಶತ್ರು, ಕನ್ನಡಿಗರ ಹೆಮ್ಮೆಯ ಸಾಹಿತಿ. ಇವರ ಸಾಹಿತ್ಯ ಕೃಷಿಗೆ ಸಂದ ಬಹು ಮುಖ್ಯ ಪ್ರಶಸ್ತಿಗಳೆಂದರೆ, ಬಸವ ಸಾಹಿತ್ಯ ಪ್ರಶಸ್ತಿ, ಚಿತ್ರದುರ್ಗ ಬೃಹನ್ಮಠದ 'ವಿದ್ವತ್ ಶಿರೋಮಣಿ' ಪ್ರಶಸ್ತಿ, ಹನಿಗವನ ಹರಿಕಾರ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ 'ಜಾನಪದ ತಜ್ಞ' ಪ್ರಶಸ್ತಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ವಿಶ್ವ–ಮಾನವ ಪ್ರಶಸ್ತಿ ಚುಟುಕು ರತ್ನ ಪ್ರಶಸ್ತಿ, ಇನ್ನೂ ಹತ್ತಾರು ಪ್ರಶಸ್ತಿಗಳನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ.

ಕವಿಯಾಗಿ, ವಿಮರ್ಶಕರಾಗಿ, ಸಾಹಿತಿಯಾಗಿ ಈ ಇಳಿ ವಯಸ್ಸಿನಲ್ಲೂ ಒಂದಿಲ್ಲೊಂದು ದಿನ ಪತ್ರಿಕೆಗೆ ಲೇಖನ ಬರೆಯುವ ಇವರ ಉತ್ಸಾಹ ಯುವ ಬರಹಗಾರರಿಗೆ ಪ್ರೇರಕ ಶಕ್ತಿ, ಇವರಿಗೆ ಪ್ರತಿಷ್ಠಿತ 'ಜ್ಞಾನಪೀಠ' ಪ್ರಶಸ್ತಿ ಸಿಗುವಂತಾಗಬೇಕು.

– ಬೂಕನಕೆರೆ ವಿಜೇಂದ್ರ, ಮೈಸೂರು.

ವೇತನಕ್ಕಾಗಿ ಬಂಡೆ ಕುಟುಂಬ ಧರಣಿ ಮಾಡಬೇಕೆ?

ಮಾನ್ಯರೆ,

ಬೀಸೋ ದೊಣ್ಣೆ ತಪ್ಪಿಸಿಕೊಂಡರೆ ಸಾವಿರ ವರ್ಷ ಆಯಸ್ಸು ಎಂಬಂತೆ ಕೆಲ ಬಾರಿ ಸರ್ಕಾರ ಪರಿಸ್ಥಿತಿಯನ್ನು ನಿಯಂತ್ರಿಸುವ ಸಲುವಾಗಿ ವಿವಿಧ ರೀತಿಯ ಭರವಸೆಗಳನ್ನು ನೀಡುತ್ತದೆ. ಆದರೆ ಕೊಟ್ಟ ಭರವಸೆಗಳನ್ನೆಲ್ಲಾ ಈಡೇರಿಸುತ್ತಾರಾ ಎಂಬುದು ಕಾಡುವ ಪ್ರಶ್ನೆ? 2014 ಜ.8 ರಂದು ಕಲಬುರಗಿ ನಗರದ ಪಾತಕಿ ಮುನ್ನಾನನ್ನು ಹಿಡಿಯಲು ಹೋದಾಗ ಗುಂಡೇಟಿಗೆ ಬಲಿಯಾಗಿದ್ದ ಹುತಾತ್ಮ ಪಿಎಸ್‌ಐ ಮಲ್ಲಿಕಾರ್ಜುನ ಬಂಡೆ ಕುಟುಂಬ ವೇತನಕ್ಕಾಗಿ ಧರಣಿ ಮಾಡುವ ಪರಿಸ್ಥಿತಿ ಎದುರಾಗಿದೆ.ಮಲ್ಲಿಕಾರ್ಜುನ ಬಂಡೆ ನಿಧನರಾದ ಕೆಲವೇ ವರ್ಷಗಳಲ್ಲಿ ಅವರ ಪತ್ನಿ ಮಲ್ಲಮ್ಮ ಬಂಡೆ ಕೂಡಾ 2016 ರಲ್ಲಿ ಮೃತಪಟ್ಟಿದ್ದು, ಇದೀಗ ಅವರ ಇಬ್ಬರು ಅಪ್ರಾಪ್ತ ಮಕ್ಕಳನ್ನು ಕುಟುಂಬದವರು ನೋಡಿಕೊಳ್ಳುತ್ತಿದ್ದಾರೆ.

ಇನ್ನು ಬಂಡೆ ಹುತಾತ್ಮರಾದ ನಂತರ ಸರ್ಕಾರ ಪ್ರತಿ ತಿಂಗಳು ಅವರ ಮೂಲ ವೇತನವಾಗಿದ್ದ 32 ಸಾವಿರ ರೂಪಾಯಿ ಹಣವನ್ನು ಅವರ ಕುಟುಂಬದವರಿಗೆ ನೀಡುತ್ತಿತ್ತು. 2019ರ ನವಂಬರ್‌ನಿಂದ ಇಲ್ಲಿವರೆಗಿನ ವೇತನವನ್ನು ನೀಡಿಲ್ಲ. ಹಾಗಾಗಿ ಬಾಕಿ ಇರುವ ವೇತನ ಬಿಡುಗಡೆ ಮಾಡದೇ ಇದ್ದರೆ, ಧರಣಿ ನಡೆಸುವುದಾಗಿ ಕುಟುಂಬದವರು ಹೇಳಿದ್ದು, ಸಂಬಂಧಪಟ್ಟ ಸರ್ಕಾರದ ಅಧಿಕಾರಿಗಳು ಕೂಡಲೇ ಸ್ಪಂದಿಸಬೇಕು.

–ಆನಂದ ಜೇವೂರ್, ಕಲಬುರಗಿ,

ಪೊಲೀಸ್ ಆಯುಕ್ತರಲ್ಲಿ ಮನವಿ...

ಮಾನ್ಯರೆ,

ಕೆಲವು ದಿನಗಳ ಹಿಂದೆ ಮಧ್ಯಾಹ್ನ 3 ಗಂಟೆ ಸಮಯದಲ್ಲಿ ಮೈಸೂರಿನ ಮಾನಸೀ ನಗರದಲ್ಲಿ ಬಸ್ಸಿನಿಂದ ಇಳಿದು ನಮ್ಮ ಮನೆಗೆ ನಡೆದುಕೊಂಡು ಹೋಗುತ್ತಿದ್ದಾಗ, ಎಂಪ್ರೋ ಹೋಟೆಲ್ ಬಳಿ ಹಿಂದಿನಿಂದ ಬಂದ ಇಬ್ಬರು ಯುವಕರು ಅಡ್ರೆಸ್ ಕೇಳುವ ನೆಪದಲ್ಲಿ ನನ್ನ ಜೇಬಿನಲ್ಲಿದ್ದ ಸ್ಯಾಮ್ ಸಂಗ್ ಕಪ್ಪು ಬಣ್ಣ ಹೊದಿಕೆಯ ಮೊಬೈಲ್ ಅನ್ನು ಕಿತ್ತುಕೊಂಡು ಓಡಿಹೋದರು. ಈ ಸಂಬಂಧ ಆಲನಹಳ್ಳಿ ಠಾಣೆಗೆ ದೂರನ್ನು ನೀಡಲು ನಾನು ಹೋದಾಗ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಅವರು ಮಾನಸೀನಗರವು ಎಂಪ್ರೋ (M-PRO) ಹೋಟೆಲ್ ಆಚೆ ಇರುವುದರಿಂದ ಪ್ರಕರಣ ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಉದಯಗಿರಿ ಠಾಣೆಗೆ ಹೋಗಿ ದೂರನ್ನು ನೀಡುವಂತೆ ಸೂಚಿಸಿದರು. ಉದಯಗಿರಿ ಠಾಣೆಯು ಮಾನಸೀನಗರದಿಂದ 8 ಕಿ.ಮೀ.ದೂರದಲ್ಲಿದ್ದು, ಅಲ್ಲಿಗೆ ಹೋಗಿ–ಬರಲು ಯಾವುದೇ ಸೌಕರ್ಯವಿರುವುದಿಲ್ಲ ಹಾಗೂ ಹಿರಿಯ ನಾಗರಿಕರಾದ ನಾವು ಅಷ್ಟು ದೂರ ಹೋಗಿ ಬರಲು ಶಕ್ತರಿರುವುದಿಲ್ಲ. ಮಾನ್ಯರೇ ಎಮ್‌ಪ್ರೋ (M-PRO) ಮಾನಸೀನಗರದಲ್ಲಿ ಇರುವುದರಿಂದ ಹಾಗೂ ಮಾನಸೀನಗರಕ್ಕೆ ಬಡಾವಣೆಯ ವ್ಯಾಪ್ತಿಯಲ್ಲೇ ಇರುವುದರಿಂದ ಹಾಗೂ ಮಾನಸೀನಗರಕ್ಕೆ ಕೂದಲೆಳೆಯ ಅಂತರದಲ್ಲಿ ಆಲನಹಳ್ಳಿ ಪೊಲೀಸ್ ಠಾಣೆ ಇರುವುದರಿಂದ ಮಾನಸೀನಗರ ಬಡಾವಣೆಯ ನಿವಾಸಿಗಳಿಗೆ ಆಲನಹಳ್ಳಿ ಪೊಲೀಸ್ ಠಾಣೆಯ ಸೌಲಭ್ಯವನ್ನು ಪಡೆದುಕೊಳ್ಳಲು ಅನುಕೂಲವಾಗುವಂತೆ ಆಲನಹಳ್ಳಿ ಠಾಣೆಯ ವ್ಯಾಪ್ತಿಗೆ ಮಾನಸೀನಗರ ಬಡಾವಣೆಯನ್ನು ಒಳಪಡಿಸುವ ನಿರ್ಣಯ ಕೈಗೊಂಡು ಅನುಕೂಲ ಕಲ್ಪಿಸಿಕೊಡುವಂತೆ ಮನವಿ ಮಾಡುತ್ತೇನೆ.

–ಎನ್.ಆರ್. ವಿಜಯಕುಮಾರ್, ಹಿರಿಯ ನಾಗರಿಕರು, ಮಾನಸೀನಗರ



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866-77284

ಬೆರಗು

ಪುಸ್ತಕ ಜ್ಞಾನಕ್ಕಿಂತ ಲೋಕಜ್ಞಾನ ಮೇಲು!



> ಶಿಕ್ಷಣವೆಂದರೆ ಕೆಲಸ ಗಿಟ್ಟಿಸಲು ಅಗತ್ಯವಿರುವ ಸರ್ಟಿಫಿಕೇಟ್ ಕೊಡುವ ಒಂದು ವ್ಯವಸ್ಥೆ ಎಂದು ಅನೇಕರು ಭಾವಿಸಿದಂತಿದೆ. ಇಂಗ್ಲಿಷ್ ಭಾಷೆ ಸೇರಿದಂತೆ ಒಂದೆರಡು ಭಾಷೆಯನ್ನು ನಿರರ್ಗಳವಾಗಿ ಮಾತನಾಡುವ, ಬರೆಯುವ, ಓದುವ ಕಲೆ ಕಲಿತರೆ ಶಿಕ್ಷಣದ ಉದ್ದೇಶ ಪೂರ್ಣವಾಯಿತು ಎಂದು ತಪ್ಪು ತಿಳಿದವರು ಸಹ ಇದ್ದಾರೆ. ಶಿಕ್ಷಣ ಬದುಕುವ ಕಲೆಯನ್ನು ಕಲಿಸಬೇಕು. ಎಷ್ಟೋ ವಿದ್ಯಾವಂತರೆನಿಸಿಕೊಂಡವರು, ತಿಂಗಳಿಗೆ ಲಕ್ಷ ಸಂಬಳ ಪಡೆಯುವವರು 'ಬದುಕುವ ಕಲೆ'ಯನ್ನು ಕಲಿಯಲು ಸಂಘಸಂಸ್ಥೆಗಳಿಗೆ ಎಡತಾಕುತ್ತಿರುವುದು ಶಿಕ್ಷಣ ವ್ಯವಸ್ಥೆಯ ಸೋಲು ಎನ್ನಬಹುದು. ಸಣ್ಣ ಸೋಲು, ನಿರಾಸೆಗಳನ್ನು ಅರಗಿಸಿಕೊಳ್ಳಲಾಗದ ಮಟ್ಟಕ್ಕೆ ಇಂದಿನ ವಿದ್ಯಾವಂತರು ತಲುಪಿದ್ದಾರೆ. ಹೊಂದಾಣಿಕೆ ಬದುಕನ್ನು ಲೋಕಜ್ಞಾನ ಕಲಿಸುತ್ತದೆ. ಇಂದಿನ ವಿಚ್ಛೇದನಗಳು, ಆತ್ಮಹತ್ಯೆಗಳು, ಅನಾಚಾರಗಳು ಕೇವಲ ಅವಿದ್ಯಾವಂತರಿಂದ ಆಗುತ್ತಿಲ್ಲ, ಬದಲಾಗಿ ಸುಶಿಕ್ಷಿತರು ಎನಿಸಿಕೊಂಡವರಿಂದಲೇ ಆಗುತ್ತಿವೆ.

'ಲೋಕಜ್ಞಾನ ಎಂಬುದು ಒಂದು ಹೂವು, ಅದು ಎಲ್ಲರ ಹೂದೋಟದಲ್ಲಿಯೂ ಬೆಳೆಯುವುದಿಲ್ಲ' ಎಂದು ಮಹನೀಯರೊಬ್ಬರು ಹೇಳಿದ್ದಾರೆ. ಈ ಮಾತು ಮೇಲ್ನೋಟಕ್ಕೆ ಅಷ್ಟೊಂದು ಗಂಭೀರವಾದದ್ದು ಎಂದು ಅನಿಸುವುದಿಲ್ಲ. ಆದರೆ ಈ ಆಧುನಿಕ ಬದುಕಿನಲ್ಲಿ ಸರ್ವರೂ ಶಿಕ್ಷಣ ಪಡೆದು ಜ್ಞಾನ ಭಂಡಾರವನ್ನೇ ಹೊತ್ತು ತಿರುಗುತ್ತಿದ್ದರೂ, ತಮ್ಮ ದೈನಂದಿನ ಬದುಕಿನಲ್ಲಿ ಎದುರಾಗುವ ಅನಿರೀಕ್ಷಿತ ಸಂಗತಿಗಳನ್ನು ನಿರ್ವಹಿಸಲು ಅಶಕ್ತರಾಗುತ್ತಾರೆ, ಅತ್ಯಗತ್ಯವಾದ ಲೋಕಜ್ಞಾನದ ಕೊರತೆಯಿಂದ ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಲೋಕಜ್ಞಾನ ಎಂಬುದು ಶಾಲಾಕಾಲೇಜುಗಳ ಗೋಡೆಗಳ ನಡುವೆ ಕುಳಿತು ಅನೇಕ ಗ್ರಂಥಗಳನ್ನು ಪರಾಮರ್ಶಿಸಿ, ಬೋಧಿಸುವ ಉಪಾಧ್ಯಾಯರಿಂದ ಸುಲಭವಾಗಿ ಕಲಿತು ಬಿಡುವ ಸಂಗತಿಯಲ್ಲ. ಆ ಗೋಡೆಗಳ ಆಚೆಗೆ ಅಂದರೆ ಪ್ರಪಂಚವೆಂಬ ಮುಕ್ತ ಶಾಲೆಯಲ್ಲಿ ಪ್ರತಿದಿನವೂ ಕಲಿತು ಬದುಕಿನಲ್ಲಿ ಅನ್ವಯಿಸಿಕೊಳ್ಳಬೇಕಾದ ವಿಶೇಷವಾದ ಜ್ಞಾನವದು. ಸಾಂಪ್ರದಾಯಿಕ ಶಿಕ್ಷಣವನ್ನು ಪಡೆಯದ ಅನೇಕ ಪ್ರಾಣಿಪಕ್ಷಿಗಳು ಸಹ ತಮ್ಮ ಲೋಕಜ್ಞಾನವನ್ನು ತಮ್ಮ ಬದುಕಿಗೆ ಅಳವಡಿಸಿಕೊಳ್ಳುತ್ತಿವೆ. ಪ್ರತಿದಿನವೂ ಮುಕ್ತ ಶಾಲೆಯಲ್ಲಿ ಎಲ್ಲವನ್ನು ಕಲಿತು ಬದುಕಿಗೆ ಅಳವಡಿಸಿಕೊಂಡು ಸ್ವಚ್ಛಂದವಾಗಿ ಬದುಕುತ್ತಿವೆ. ಆದರೆ ಮನುಷ್ಯನಿಗೆ ವರವಾಗಬೇಕಿದ್ದ ಔಪಚಾರಿಕ ಶಿಕ್ಷಣವೇ ಇಂದು ಶಾಪವಾಗಿ ಪರಿಣಮಿಸಿದೆ ಎಂದರೆ ತಪ್ಪಿಲ್ಲ. ಆ ಕಾರಣಕ್ಕಾಗಿಯೇ ಆಧ್ಯಾತ್ಮಗುರು ಓಶೋ "ಪ್ರತಿಯೊಬ್ಬ ಮನುಷ್ಯನು ಬುದ್ಧಿವಂತನಾಗಿಯೇ ಹುಟ್ಟುತ್ತಾನೆ. ಆದರೆ ಶಾಲೆ, ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳು ಅವನನ್ನು ಮೂರ್ಖನನ್ನಾಗಿ ಮಾಡುತ್ತಿವೆ" ಎಂದು ಹೇಳಿದ್ದಾರೆ.

ಈ ಮಾತುಗಳನ್ನು ಕೇಳಿದಾಗ ಯಾರಿಗೂ ಆಶ್ಚರ್ಯವಾಗದೇ ಇರದು. ಏಕೆಂದರೆ ಸಾಂಪ್ರದಾಯಿಕ ಶಿಕ್ಷಣ ಎಂಬುದು ಸಾಮಾನ್ಯ ಮನುಷ್ಯನನ್ನು ಜ್ಞಾನಿಯನ್ನಾಗಿ ಮಾಡುವ ಒಂದು ವ್ಯವಸ್ಥೆ ಎಂದು ದೃಢವಾಗಿ ನಂಬಿರುವ ಈ ಕಾಲದಲ್ಲಿ ಈ ಮಾತು ವ್ಯತಿರಿಕ್ತವಾಗಿದೆ ಅನಿಸದೆ ಇರದು. ಆದರೆ ವಾಸ್ತವದಲ್ಲಿ ಈ ಮಾತಿನ ಮರ್ಮವನ್ನು ಅರಿಯುತ್ತಾ ಹೋದರೆ, ಅದು ಅಕ್ಷರಶಃ ಸತ್ಯ ಎನಿಸುತ್ತದೆ. ಇಂದಿನ ಶಿಕ್ಷಣ ವ್ಯವಸ್ಥೆಯು ಪುಸ್ತಕಗಳಿಂದ ಮಕ್ಕಳ ಮಸ್ತಕವನ್ನು ಮಾಹಿತಿ ಕಣಜವಾಗಿ ಮಾಡುತ್ತಿದೆಯೋ ಹೊರತು ಜೀವನಪಾಠವನ್ನು ಬೋಧಿಸುವ ವ್ಯವಸ್ಥೆಯಾಗಿಲ್ಲ. ಪಠ್ಯಕ್ರಮ ಅನುಸರಿಸಿ ಕಲಿತ ಪಾಠಗಳನ್ನು ಜೀವನಕ್ಕೆ ಅಳವಡಿಸಿಕೊಳ್ಳುವಲ್ಲಿ ಬಹುಪಾಲು ಎಲ್ಲರೂ ಸೋಲುತ್ತಿದ್ದಾರೆ. ಪ್ರಾಣಿಪಕ್ಷಿಗಳು 'ನೋಡಿ ಕಲಿ, ಮಾಡಿ ತಿಳಿ' ಎಂಬ ಪ್ರಕೃತಿದತ್ತವಾದ ನಿಯಮವನ್ನು ಅನುಸರಿಸುತ್ತಿದ್ದರೆ, ಮನುಷ್ಯ ಮಾತ್ರ ಓದಿ ಕಲಿ ಎಂಬ ತಾನೇ ರೂಪಿಸಿಕೊಂಡ ತತ್ವವನ್ನು ಅನುಸರಿಸುತ್ತಿದ್ದಾನೆ. ಎಷ್ಟೋ ಕಡೆ ಸೃಜನಶೀಲತೆಗೆ ಅವಕಾಶವೇ ಇರುವುದಿಲ್ಲ. ಶಾಲಾ–ಕಾಲೇಜುಗಳಿಂದ ಅಕ್ಷರಸ್ಥನಾಗಿ ಹೊರಗೆ ಬರುತ್ತಾನೆಯೇ ಹೊರತು ಜ್ಞಾನಿಯಾಗಿ ಅಲ್ಲ.

ಇದಕ್ಕೆ ಪೂರಕವಾದ ದೃಷ್ಟಾಂತವೊಂದು ಹೀಗಿದೆ. ಹೆಚ್ಚಿನ ವಿದ್ಯಾಭ್ಯಾಸ ಮಾಡಿ ಉನ್ನತ ಹುದ್ದೆಯಲ್ಲಿದ್ದ ಮಹಿಳಾ ಅಧಿಕಾರಿಯೊಬ್ಬರು ಅನಕ್ಷರಸ್ಥ ಮಹಿಳೆಯೊಬ್ಬಳನ್ನು ಮನೆಗೆಲಸಕ್ಕೆ ನಿಯೋಜಿಸಿಕೊಂಡಿರುತ್ತಾರೆ. ಆಕೆಗೆ ಅಡುಗೆ ಮಾಡುವ ಜವಾಬ್ದಾರಿಯೂ ಇರುತ್ತದೆ. ಒಮ್ಮೆ ಮನೆ ಯಜಮಾನಿ ಹೊಸದಾಗಿ ಕುಕ್ಕರ್ ಒಂದನ್ನು ಖರೀದಿಸಿ ತರುತ್ತಾರೆ. ಬಾಕ್ಸ್‌ನಿಂದ ಕುಕ್ಕರ್ ಜೊತೆಗೆ ಅದರೊಳಗೆ ಕಂಪನಿಯವರು ನೀಡಿರುವ ಮಾಹಿತಿ ಪುಸ್ತಕವನ್ನು ತೆಗೆದು, ಕುಕ್ಕರ್ ಅನ್ನು ಹೇಗೆ ಜೋಡಿಸಬೇಕೆಂಬುದನ್ನು ಆಕೆ ಓದುತ್ತಿರುತ್ತಾರೆ. ಅವರು ಓದು ಮುಗಿಸುವುದರೊಳಗೆ ಕೆಲಸದಾಕೆ ಕುಕ್ಕರ್ ಅನ್ನು ಜೋಡಿಸಿಡುತ್ತಾಳೆ. ಓದಲು ಬಾರದ ಕೆಲಸದಾಕೆಯ ನೈಪುಣ್ಯತೆಯನ್ನು ನೋಡಿ ಯಜಮಾನಿಗೆ ಆಶ್ಚರ್ಯವಾಗುತ್ತದೆ. ನಂತರ ಪುಸ್ತಕ ಜ್ಞಾನಕ್ಕಿಂತ ಲೋಕಜ್ಞಾನ ದೊಡ್ಡದು ಎಂದು ಯಜಮಾನಿಯ ಅರಿವಿಗೆ ಬರುತ್ತದೆ. ಇಂತಹ ಅನೇಕ ನಿದರ್ಶನಗಳನ್ನು ನಾವು–ನೀವು ನಿತ್ಯ ನೋಡುತ್ತಲೇ ಇರುತ್ತೇವೆ.

ಶಿಲಾಯುಗದಿಂದ ಸಿಲಿಕಾನ್ ಯುಗದವರೆಗೆ ಶಿಕ್ಷಣದ ರೀತಿ–ನೀತಿ ಎಂಬುದು ಬದಲಾಗುತ್ತಲೇ ಇದೆ. ಮೂರು ಶತಮಾನಗಳ ಹಿಂದೆ ಎಲ್ಲರೂ ಸಾಂಪ್ರದಾಯಿಕವಾಗಿ ಪಡೆಯಬಹುದಾದ ಶಾಲೆ–ಕಾಲೇಜು ಎಂಬ ಪಠ್ಯಕ್ರಮ ಆಧಾರಿತ ಶಿಕ್ಷಣ ವ್ಯವಸ್ಥೆ ಎಲ್ಲರಿಗೂ ಇರಲಿಲ್ಲ. ಆದರೆ ಪ್ರಕೃತಿಯೇ ಒಂದು ದೊಡ್ಡ ತೆರೆದ ಪುಸ್ತಕವಾಗಿತ್ತು, ಈ ಭೂಮಂಡಲವನ್ನೇ ವಿಶ್ವವಿದ್ಯಾನಿಲಯ ಎಂದು ಭಾವಿಸಿದ್ದರು. ತಮ್ಮ ಬದುಕಿಗೆ ಅವಶ್ಯವಾದ ಸಂಗತಿಗಳನ್ನು ಮಾತ್ರ ಗ್ರಹಿಸುತ್ತಾ, ಮೂಲಭೂತ ಸೌಲಭ್ಯಗಳನ್ನು ಹೊಂದಲು ತಮ್ಮ ಬುದ್ಧಿಶಕ್ತಿಯನ್ನು ಬಳಸುತ್ತಿದ್ದರು. ಹೊಟ್ಟೆ ತುಂಬ ಉಣ್ಣಲು, ಮೈತುಂಬ ಬಟ್ಟೆಯನ್ನು ತೊಡಲು ಬೇಕಾದ ಪ್ರಯತ್ನಗಳನ್ನು ಮಾಡುತ್ತಿದ್ದರು. ದೊಡ್ಡ ಜ್ಞಾನಿಯಾಗಿರದಿದ್ದರೂ, ಅಗತ್ಯ ಕೌಶಲ್ಯಗಳನ್ನು ಮೈಗೂಡಿಸಿಕೊಂಡು ಸಾಮಾನ್ಯ ಜ್ಞಾನವನ್ನು ಹೊಂದಿರುತ್ತಿದ್ದರು. ಆದರೆ ಕಾಲಾನಂತರ ಬದುಕಿನ ಕ್ರಮ, ಗತಿಯನ್ನು ಬದಲಿಸಿಕೊಂಡು ಜೀವಿಸಲು ಪ್ರಾರಂಭಿಸಿದರು. ತಮ್ಮ ಅನುಭವಗಳನ್ನು ಲಭ್ಯವಿರುವ ಮಾಧ್ಯಮದಲ್ಲಿ ದಾಖಲಿಸುತ್ತಾ ಮುಂದಿನ ಪೀಳಿಗೆಗೆ ಒಂದು ಪೂರ್ವಯೋಜಿತ ಪಾಠವನ್ನು ಸಿದ್ಧಪಡಿಸಿ, ಅವರ ಬದುಕನ್ನು ಸುಲಭವಾಗುವಂತೆ ಮಾಡಿದರು. ಅದರ ಪರಿಣಾಮವೇ ಸಾಂಪ್ರದಾಯಿಕ ಶಿಕ್ಷಣ ಎಂಬುದು. ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಜ್ಞಾನಾರ್ಜನೆಗೆ ಶಾಲೆಯೇ ಸೂಕ್ತವಾದ ಸ್ಥಳ ಎಂದು ಭಾವಿಸಿದಂತಿದೆ. ಹೊರ ಜಗತ್ತಿನಲ್ಲಿ ಕಲಿಯಬಹುದಾದ ಅನೇಕ ಸಂಗತಿಗಳಿದ್ದರೂ ಅವುಗಳಿಂದ ದೂರ ಉಳಿಯುತ್ತಿರುವುದು ವಿಪರ್ಯಾಸ.

ಇಂದಿನ ಬದುಕಿನ ಶೈಲಿಗೆ ಅಗತ್ಯವಾದ ಕೌಶಲ್ಯಗಳನ್ನು ಮನುಷ್ಯ ಕಲಿಯುತ್ತಿದ್ದಾನೆ. ಆದರೆ ನಿಸರ್ಗದತ್ತವಾಗಿ ಮನುಷ್ಯನಿಗೆ ಕೆಲವು ಕೌಶಲ್ಯಗಳು, ಸಾಮರ್ಥ್ಯಗಳು ಮೈಗೂಡಿರುತ್ತವೆ. ಬಹುಪಾಲು ಜನ ಜೀವನದಲ್ಲಿ ಒಮ್ಮೆಯೂ ಆ ಕೌಶಲಗಳನ್ನು ಪ್ರಯತ್ನಿಸದೇ ಇರುವುದು ವಿಪರ್ಯಾಸ. ನಾಯಿಮರಿಯೊಂದು ಅಚಾನಕ್ಕಾಗಿ ನೀರಿಗೆ ಬಿದ್ದರೆ ಈಜಿಕೊಂಡು ಬರುತ್ತದೆ, ಹಾಗೆ ಹಸು, ಎಮ್ಮೆಗಳ ಕರುಗಳು ಸಹ ಕೆರೆ/ನದಿ ನೀರಿನಲ್ಲಿ ಈಜಿಕೊಂಡು ಬರುತ್ತವೆ. ಅವುಗಳು ಯಾವುದೇ ತರಬೇತಿಯನ್ನು ತಮ್ಮ ಹಿರಿಯರಿಂದ ಪಡೆದಿರುವುದಿಲ್ಲ. ಆದರೆ ಈಜುವ ತರಬೇತಿ ಪಡೆಯದ ಯುವಕನೊಬ್ಬ ಕೆರೆ/ನದಿ ನೀರಿಗೆ ಬಿದ್ದರೆ ಅಲ್ಲಿಂದ ಈಜಿ ಹೊರಬರಲಾಗದೆ ಮುಳುಗಿ ಹೋಗುತ್ತಾನೆ. ಇದೇಕೆ ಹೀಗೆ ಎಂದು ಆಶ್ಚರ್ಯವಾಗುತ್ತದೆ ಅಲ್ಲವೇ? ಒಂದು ವರ್ಷದ ಮಗುವೊಂದನ್ನು ನೀರಿನಲ್ಲಿ ಬಿಡಿ ಅದು ಸಹಜವಾಗಿ ಕೈಕಾಲು ಆಡಿಸುತ್ತಾ ನೀರಿನಲ್ಲಿ ಮುಳುಗದ ಹಾಗೆ ಪ್ರಯತ್ನಿಸಿ ಈಜುತ್ತದೆ. ನಂತರ ಅದು ಅಭ್ಯಾಸವಾದರೆ ಈಜುವುದರಲ್ಲಿ ಪರಿಣತಿಯನ್ನೇ ಪಡೆಯುತ್ತದೆ. ಆದರೆ ಮುಳುಗಿಬಿಡುವ ಭಯದ ಕಾರಣಕ್ಕೆ ಮಕ್ಕಳನ್ನು ನೀರಿಗೆ ಇಳಿಯಲು ಬಿಡುವುದಿಲ್ಲ. ಅವರಿಗೆ ತಮ್ಮ ಸಾಮರ್ಥ್ಯವನ್ನು ವಿಸ್ತರಿಸಿಕೊಳ್ಳುವ, ಕೌಶಲ್ಯವನ್ನು ವೃದ್ಧಿಸಿಕೊಳ್ಳುವ ಅವಕಾಶವಿದ್ದರೂ ಅದರಿಂದ ದೂರ ಉಳಿಸಿ ಬಿಡುತ್ತಾರೆ. ಇದು ಮರ ಹತ್ತುವುದು, ಬೆಟ್ಟ ಹತ್ತುವುದು... ಇತ್ಯಾದಿ ಹತ್ತಾರು ಸಂಗತಿಗಳಿಗೂ ಅನ್ವಯಿಸುತ್ತದೆ. ಇವುಗಳು ಇಂದಿನ ಆಧುನಿಕ ಜಗತ್ತಿನ ಬದುಕಿಗೆ ಅವಶ್ಯವಿರದಿರಬಹುದು. ಆದರೆ ನೈಸರ್ಗಿಕವಾಗಿ ಮನುಷ್ಯನ ಒಳಗೆ ಅಡಗಿರುವ ಅನೇಕ ಸಾಮರ್ಥ್ಯಗಳಿಗೆ ಅವಕಾಶವೇ ದೊರಕದೆ ಮರೆಯಾಗಿ ಹೋಗುತ್ತಿವೆ.

ಶಾಲಾ–ಕಾಲೇಜುಗಳಲ್ಲಿ ನಾಲ್ಕಾರು ವಿಷಯಗಳನ್ನು ಕಲಿತರೆ, ಅದರಿಂದಾಚೆ ಕಲಿಯಲು ಸಾವಿರ ವಿಷಯಗಳಿರುತ್ತವೆ. ಹಿರಿಯರು ಆ ಕಾರಣಕ್ಕಾಗಿಯೇ "ದೇಶ ಸುತ್ತು, ಕೋಶ ಓದು" ಎಂಬ ಮಾತನ್ನು ಹೇಳಿರುವುದು. ಶಾಲೆಯಲ್ಲಿ ಮಾತ್ರ ಕಲಿಯಬೇಕು ಎಂಬುದು ತಪ್ಪು ತಿಳುವಳಿಕೆಯಾಗಿದೆ. ಶಾಲೆಗೆ ಹೋಗದೆ ಅನೇಕ ವಿಷಯಗಳಲ್ಲಿ ಪರಿಣತಿ ಹೊಂದಿರುವ ಅನೇಕ ಸಾಧಕರನ್ನು ನಾವು ಕಾಣಬಹುದು. ಹಳ್ಳಿಗಳಲ್ಲಿ ಅನೇಕರು ಜನಪದಗೀತೆಗಳನ್ನು ಓದಿ ಕಲಿಯದೆ, ಮೌಖಿಕವಾಗಿ ಕಲಿತು, ಹತ್ತಾರು ಗಂಟೆಗಳ ಕಾಲ ತಪ್ಪಿಲ್ಲದೆ ಹಾಡುವವರು ಇಂದಿಗೂ ಇದ್ದಾರೆ. ಭಾರತೀಯ ಇತಿಹಾಸವನ್ನು ಗಮನಿಸಿದಲ್ಲಿ ಅನೇಕ ಸೋಜಿಗದ ಸಂಗತಿಗಳು ಹೊರಬರುತ್ತವೆ. ಸಾವಿರಾರು ವರ್ಷಗಳ ಹಿಂದೆ ನಿರ್ಮಿಸಿರುವ ಗುಡಿಗೋಪುರಗಳನ್ನು ಗಮನಿಸಿದಲ್ಲಿ ಆಶ್ಚರ್ಯವಾಗುತ್ತದೆ. ಗಣಿತ ಹಾಗೂ ವಾಸ್ತುಶಿಲ್ಪ ಸಾವಿರಾರು ವರ್ಷಗಳ ಹಿಂದೆಯೇ ಎಷ್ಟು ಕರಾರುವಕ್ಕಾಗಿ ಇತ್ತು ಎಂದು ತಿಳಿಯಬಹುದು. ಇಂದು ಆಧುನಿಕ ತಂತ್ರಜ್ಞಾನ ಬಳಸಿ ನಿರ್ಮಿಸಿದ ಕೆಲವು ಕಟ್ಟಡ, ಸೇತುವೆ, ಭವನಗಳು ಹತ್ತಾರು ವರ್ಷಗಳಲ್ಲಿಯೇ ಕುಸಿಯುತ್ತಿದ್ದರೂ, ಅಂದಿನ ಲೆಕ್ಕಾಚಾರ ಇಂದಿಗೂ ತಪ್ಪಿಲ್ಲ. ಅವರೆಲ್ಲರೂ ನಾಲ್ಕುಗೋಡೆಗಳ ಮಧ್ಯೆ ಕಲಿತ ಶಿಕ್ಷಣವನ್ನು ತಮ್ಮ ಕೌಶಲ್ಯದಲ್ಲಿ ತೋರಿಲ್ಲ. ತಮ್ಮ ಲೋಕಜ್ಞಾನವನ್ನು ನಿರೂಪಿಸಿದ್ದಾರೆ.

ಶಿಕ್ಷಣವೆಂದರೆ ಕೆಲಸ ಹಿಡಿಯಲು ಅಗತ್ಯವಿರುವ ಸರ್ಟಿಫಿಕೇಟ್ ಕೊಡುವ ಒಂದು ವ್ಯವಸ್ಥೆ ಎಂದು ಅನೇಕರು ಭಾವಿಸಿದಂತಿದೆ. ಇಂಗ್ಲಿಷ್ ಭಾಷೆ ಸೇರಿದಂತೆ ಒಂದೆರಡು ಭಾಷೆಯನ್ನು ನಿರರ್ಗಳವಾಗಿ ಮಾತನಾಡುವ, ಬರೆಯುವ, ಓದುವ ಕಲೆ ಕಲಿತರೆ ಶಿಕ್ಷಣದ ಉದ್ದೇಶ ಪೂರ್ಣವಾಯಿತು ಎಂದು ತಪ್ಪು ತಿಳಿದವರು ಸಹ ಇದ್ದಾರೆ. ಶಿಕ್ಷಣ ಬದುಕುವ ಕಲೆಯನ್ನು ಕಲಿಸಬೇಕು. ಎಷ್ಟೋ ವಿದ್ಯಾವಂತರೆನಿಸಿಕೊಂಡವರು, ತಿಂಗಳಿಗೆ ಲಕ್ಷ ಸಂಬಳ ಪಡೆಯುವವರು 'ಬದುಕುವ ಕಲೆ'ಯನ್ನು ಕಲಿಯಲು ಸಂಘಸಂಸ್ಥೆಗಳಿಗೆ ಎಡತಾಕುತ್ತಿರುವುದು ಶಿಕ್ಷಣ ವ್ಯವಸ್ಥೆಯ ಸೋಲು ಎನ್ನಬಹುದು. ಸಣ್ಣ ಸೋಲು, ನಿರಾಸೆಗಳನ್ನು ಅರಗಿಸಿಕೊಳ್ಳಲಾಗದ ಮಟ್ಟಕ್ಕೆ ಇಂದಿನ ವಿದ್ಯಾವಂತರು ತಲುಪಿದ್ದಾರೆ. ಹೊಂದಾಣಿಕೆ ಬದುಕನ್ನು ಲೋಕಜ್ಞಾನ ಕಲಿಸುತ್ತದೆ. ಇಂದಿನ ವಿಚ್ಛೇದನಗಳು, ಆತ್ಮಹತ್ಯೆಗಳು, ಅನಾಚಾರಗಳು ಕೇವಲ ಅವಿದ್ಯಾವಂತರಿಂದ ಆಗುತ್ತಿಲ್ಲ, ಬದಲಾಗಿ ಸುಶಿಕ್ಷಿತರು ಎನಿಸಿಕೊಂಡವರಿಂದಲೇ ಆಗುತ್ತಿವೆ. ಪುಸ್ತಕದಿಂದ ಕಲಿತ ತತ್ವಾದರ್ಶಗಳು, ಅನೇಕ ನೈತಿಕ ಸಂಗತಿಗಳು ಪರೀಕ್ಷೆಯಲ್ಲಿ ಸಿದ್ಧ ಉತ್ತರ ಬರೆಯಲು ಮಾತ್ರ, ಅವು ಬದುಕಿಗೆ ಸಂಬಂಧಿಸಿದವುಗಳಲ್ಲ ಎಂದು ಮಕ್ಕಳ ಮನಸ್ಸಿನಲ್ಲಿ ಮನೆಮಾಡಿದೆ. ಬದುಕಿಗೆ ಬೇಕಾದ ಶೇ.80 ವಿಷಯಗಳು ಲೋಕಜ್ಞಾನ ದಿಂದಲೇ ಅರಿಯಬೇಕಾಗುತ್ತದೆ. ಪ್ರಕೃತಿ ಎಂಬ ಶಾಲೆಯಲ್ಲಿ ಕಲಿಯಲು ವಯಸ್ಸಿನ ಮಿತಿಯಿಲ್ಲ.

ಸಿದ್ಧಸೂತ್ರಗಳನ್ನು ಕಲಿತು ಬದುಕನ್ನು ನಡೆಸಲು ಸಾಧ್ಯವಿಲ್ಲ. ಬದುಕು ನಿತ್ಯವೂ ವಿಸ್ಮಯಗಳ ಮಾಯಾಲೋಕ ಅನೇಕ ಅನಿರೀಕ್ಷಿತ ತಿರುವುಗಳನ್ನು ಹೊಂದಿದ ರಸ್ತೆ. ಬದುಕಿನ ಯಾತ್ರೆಗೆ ಬೇಕಾಗಿರುವುದು ಅದರ ನಕ್ಷೆಯಲ್ಲ. ಯಾತ್ರೆಯಲ್ಲಿ ಎದುರಾಗುವ ಎಡರುತೊಡರುಗಳನ್ನು ಎದುರಿಸಿ ಮುನ್ನುಗ್ಗುವ ಛಲ ಹಾಗೂ ಕೌಶಲ. ಅದು ಸಿಗುವುದು ಲೋಕಜ್ಞಾನದಿಂದ ಮಾತ್ರ. ತರಗತಿ ಪರೀಕ್ಷೆಯಲ್ಲಿ ಪಾಸಾಗುವವರು ಹೆಚ್ಚು. ಬದುಕೆಂಬ ಪರೀಕ್ಷೆಯಲ್ಲಿ ಫೇಲಾಗುವವರು ಹೆಚ್ಚು. ಇಂದಿನ ಪೀಳಿಗೆಯ ಮಕ್ಕಳಿಗೆ ಲೋಕಜ್ಞಾನದಿಂದ ಸಿಗುವ ಸಾಮಾನ್ಯ ಜ್ಞಾನದ ಮಹತ್ವ ತಿಳಿಸುವ ಅಗತ್ಯವಿದೆ. ಕೇವಲ ಅವರನ್ನು ಕುದುರೆಗೆ ಕಟ್ಟುವ ಕಣ್ಣಾಪಿನಂತೆ ಶಾಲೆಯಲ್ಲಿ ಮಾತ್ರ ಶಿಕ್ಷಣ ದೊರೆಯುತ್ತದೆ ಎಂದು ಹೇಳುವ ಅಗತ್ಯವಿಲ್ಲ. ಪುಸ್ತಕದ ಜ್ಞಾನವು ಅಕ್ಷರ ಜ್ಞಾನ ನೀಡಿದರೆ ಅನುಭವ ಜ್ಞಾನಕ್ಕೆ ಲೋಕಜ್ಞಾನವೇ ಅವಶ್ಯ. ಏನಂತೀರಿ?

ಪದ ತಾಂಬೂಲ : ಗೆಲುವನ್ನು ಸಂಭ್ರಮಿಸಲು ಪುಸ್ತಕಜ್ಞಾನ ಸಾಕು ಸೋಲನ್ನು ಸಹಿಸಿ ಮತ್ತೆ ಗೆಲ್ಲಲು ಲೋಕಜ್ಞಾನವೇ ಬೇಕು

ಇವಿಎಂ, ವಿವಿ ಪ್ಯಾಟ್ ಕಾರ್ಯ ನಿರ್ವಹಣೆ ಸಂಬಂಧ ಅಧಿಕಾರಿಗಳಿಗೆ ತರಬೇತಿ

ಮೈಸೂರು, ಮಾ.5(ಆರ್‌ಕೆ)– ಕರ್ನಾಟಕ ವಿಧಾನಸಭೆ ಸಾರ್ವತ್ರಿಕ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ವಿವಿ ಪ್ಯಾಟ್ ಮತ್ತು ಇವಿಎಂಗಳ ಕಾರ್ಯ ನಿರ್ವಹಣೆ ಕುರಿತಂತೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಇಂದು ಅಧಿಕಾರಿ ಹಾಗೂ ಸಿಬ್ಬಂದಿಗೆ ತರಬೇತಿ ನೀಡಿದರು.



ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ವಿಧಾನಸಭಾ ಕ್ಷೇತ್ರವಾರು ನೇಮಕಗೊಂಡಿರುವ ಚುನಾವಣಾಧಿಕಾರಿಗಳು, ಸಹಾಯಕ ಚುನಾವಣಾಧಿಕಾರಿಗಳು ಹಾಗೂ ಮಾಸ್ಟರ್ ಟ್ರೈನರ್‌ಗಳಿಗೆ ಇವಿಎಂ ಮತ್ತು ವಿವಿ ಪ್ಯಾಟ್ ಉಪಕರಣಗಳ ಬಗ್ಗೆ ಕಾರ್ಯ ನಿರ್ವಹಣೆ, ಅನುಸರಿಸಬೇಕಾದ ಕ್ರಮಗಳು, ಮತದಾನದ ವೇಳೆ ಗಮನಿಸಬೇಕಾದ ಅಂಶಗಳ ಬಗ್ಗೆ ಮಾಹಿತಿ ನೀಡಿದ ಅವರು, ಮತ ಚಲಾವಣೆ ಬಗ್ಗೆ ಸಾರ್ವಜನಿಕರಿಗೂ ಅರಿವು ಮೂಡಿಸಿ ಗೊಂದಲವಾಗದಂತೆ ಕ್ರಮ ವಹಿಸಬೇಕೆಂದು ಅವರು ಸೂಚಿಸಿದರು.

ಭಾರತ ಚುನಾವಣಾ ಆಯೋಗವು ಆಗಿಂದಾಗ್ಗೆ ಹೊರಡಿಸುವ ಸುತ್ತೋಲೆ, ಅಧಿಸೂಚನೆಗಳನ್ನು ಗಮನಿಸಿ ಜವಾಬ್ದಾರಿಯುತವಾಗಿ ಯಾವುದೇ ಲೋಪವಾಗದಂತೆ ಚುನಾವಣಾ ಕರ್ತವ್ಯ ನಿರ್ವಹಿಸಬೇಕು. ಮತಗಟ್ಟೆಗಳಿಗೆ ಮೂಲ ಸೌಲಭ್ಯ ಒದಗಿಸಲಾಗಿರುವುದನ್ನು ದೃಢಪಡಿಸಿಕೊಂಡು ಸೆಕ್ಟರ್ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು ಎಂದು ಡಾ.ಕೆ.ವಿ. ರಾಜೇಂದ್ರ ಸಲಹೆ ನೀಡಿದರು.

ಮತದಾರ ಪಟ್ಟಿಯಲ್ಲಿ ದೋಷವಿರದಂತೆ ಎಚ್ಚರವಹಿಸಿ, ಯಾವೊಬ್ಬ ಅರ್ಹ ಮತದಾರ ತಮ್ಮ ಹಕ್ಕು ಚಲಾವಣೆಯಿಂದ ವಂಚಿತರಾಗದಂತೆ ನೋಡಿಕೊಳ್ಳುವುದು ಅತೀ ಮುಖ್ಯವಾಗಿದ್ದು, ಮಾ.20 ರೊಳಗಾಗಿ ಎಲ್ಲರೂ ಚುನಾವಣಾ ತರಬೇತಿ ಪಡೆದು ಸಿದ್ಧರಾಗಬೇಕೆಂದು ತಿಳಿಸಿದ ಅವರು, ಮತದಾರರಿಗೆ ಇವಿಎಂ ಮತ್ತು ವಿವಿ ಪ್ಯಾಟ್ ಬಳಸಿ ಮತ ಚಲಾಯಿಸುವ ಕುರಿತಂತೆ ವ್ಯಾಪಕ ಪ್ರಚಾರ ನೀಡಿ ಜಾಗೃತಿ ಮೂಡಿಸಬೇಕೆಂದು ಸೂಚನೆ ನೀಡಿದರು.

ಅಪರ ಜಿಲ್ಲಾಧಿಕಾರಿ ಕವಿತಾ ರಾಜಾರಾಮ್, ಉಪ ವಿಭಾಗಾಧಿಕಾರಿ ಕಮಲಾಬಾಯಿ, ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಸೇರಿದಂತೆ ಹಲವರು ಸಭೆಯಲ್ಲಿ ಪಾಲ್ಗೊಂಡಿದ್ದರು. ಇದೇ ವೇಳೆ ರಾವಂದೂರು ಸರ್ಕಾರಿ ಪಿಯು ಕಾಲೇಜು ಉಪನ್ಯಾಸಕ ರವಿ ಎಲೆಕ್ಟ್ರಾನಿಕ್ ಮತಯಂತ್ರ ಹಾಗೂ ವಿವಿ ಪ್ಯಾಟ್ ನಿರ್ವಹಣೆ ಕುರಿತಂತೆ ಪ್ರಾತ್ಯಕ್ಷಿಕೆ ನೀಡಿದರು.

ಇಂದು 52ನೇ ರಾಷ್ಟ್ರೀಯ ಸುರಕ್ಷತಾ ದಿನಾಚರಣೆ

ಮೈಸೂರು, ಮಾ.5– ಮಾ.6 ರಂದು 52ನೇ ರಾಷ್ಟ್ರೀಯ ಸುರಕ್ಷತಾ ದಿನಾಚರಣೆ ಅಂಗವಾಗಿ ಕರ್ನಾಟಕ ಕಲಾಮಂದಿರದಲ್ಲಿ ಬೆಳಗ್ಗೆ 10 ಗಂಟೆಗೆ ಸಾರ್ವಜನಿಕ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಭಾಗವಹಿಸಲಿದ್ದು, ಅಧ್ಯಕ್ಷತೆಯನ್ನು ಇಂಡಿಯಾ ಲೀಡರ್ ಕಮಿನ್ಸ್ ಮೇರಿಟರ್‌ನ ಅಧ್ಯಕ್ಷರು ಮತ್ತು ಕಾರ್ಯ ನಿರ್ವಹಣಾ ಅಧಿಕಾರಿ ಡಾ. ಎನ್.ಮುತ್ತುಕುಮಾರ್ ವಹಿಸಲಿದ್ದಾರೆ.

52ನೇ ರಾಷ್ಟ್ರೀಯ ಸುರಕ್ಷತಾ ದಿನಾಚರಣೆಯ ಪ್ರಯುಕ್ತ ಪಥ ಸಂಚಲನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಸುರಕ್ಷತಾ ನಡಿಗೆಯನ್ನು ಅರಮನೆ ಮುಂಭಾಗದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಬೆಳಗ್ಗೆ 8 ಗಂಟೆಗೆ ಪೊಲೀಸ್ ಆಯುಕ್ತ ಬಿ.ರಮೇಶ್ ಉದ್ಘಾಟಿಸಲಿದ್ದಾರೆ.

ಅತಿಥಿಗಳಾಗಿ ಎಟಿ&ಎಸ್ ಇಂಡಿಯಾ ಪ್ರೈ.ಲಿ.ನ ವ್ಯವಸ್ಥಾಪಕ ನಿರ್ದೇಶಕ ಸಂತೋಷ್ ಗುಂಡಾಪಿ, ಎಜೆ ಸ್ಟೇಷನರಿ ಪ್ರೈ.ಲಿನ ಶಶಿರಂಜನ್, ಎ.ಐ.ಟಿ.ಯು.ಸಿಯಾ ಅಧ್ಯಕ್ಷ ಹೆಚ್.ಆರ್. ಶೇಷಾದ್ರಿ ಹಾಗೂ ಪ್ರಮುಖರು ಭಾಗವಹಿಸಲಿದ್ದಾರೆ ಎಂದು ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷೆ ಮತ್ತು ಸ್ವಾಸ್ಥ್ಯ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ನಾಯಕ ಸಮುದಾಯಕ್ಕೆ ಅವಕಾಶ ನೀಡಲು ಮನವಿ

ಮೈಸೂರು,ಮಾ.5(ಎಂಟಿವೈ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ನಾಯಕ ಸಮುದಾಯದ ಅಭ್ಯರ್ಥಿಯನ್ನು ಕಣಕ್ಕಿಳಿಸುವಂತೆ ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಅಧ್ಯಕ್ಷ ದ್ಯಾವಪ್ಪನಾಯಕ ಮನವಿ ಮಾಡಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಭಾಗದಲ್ಲಿ ನಾಯಕ ಸಮುದಾಯಕ್ಕೆ ಸೇರಿದ 14 ರಿಂದ 15ಲಕ್ಷ ಜನರಿದ್ದಾರೆ. ಆದರೆ ನಾಯಕ ಸಮುದಾಯಕ್ಕೆ ಸೇರಿದ ಕೇವಲ ಓರ್ವ ಶಾಸಕರಿದ್ದಾರೆ. ಮೈಸೂರು ವಿಭಾಗದಲ್ಲಿ 7–8 ಕ್ಷೇತ್ರದಲ್ಲಿ ಯಾವುದೇ ಅಭ್ಯರ್ಥಿ ಗೆಲ್ಲಲು ನಾಯಕ ಸಮುದಾಯ ನಿರ್ಣಾಯಕ ಪಾತ್ರ ವಹಿಸಲಿದೆ. ಈ ಹಿಂದೆ ನಾಯಕ ಸಮುದಾಯದ ನಾಲ್ವರು ಶಾಸಕರಾಗಿ ಆಯ್ಕೆಯಾಗುತ್ತಿದ್ದರು. ಆದರೆ ಈಗ ಕೇವಲ ಒಂದು ಸ್ಥಾನಕ್ಕೆ ಕುಸಿದಿದೆ. ನಮ್ಮ ಸಮುದಾಯಕ್ಕೆ ರಾಜಕೀಯ ಪ್ರಾತಿನಿಧ್ಯತೆ ಕ್ಷೀಣಿಸುತ್ತಿದೆ. ಈ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ನಾಯಕ ಸಮುದಾಯದ ಅಭ್ಯರ್ಥಿಯನ್ನೇ ಕಣಕ್ಕಿಳಿಸಬೇಕು ಎಂದು ಒತ್ತಾಯಿಸಿದರು.

ಸಾಮಾಜಿಕ ನ್ಯಾಯದ ಹರಿಕಾರ ಹಾಗೂ ಶೋಷಿತ ಸಮುದಾಯದ ನಾಯಕರಾದ ಸಿದ್ದರಾಮಯ್ಯ ಅವರು ನಮ್ಮ ಸಮುದಾಯಕ್ಕೆ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಸ್ಪರ್ಧಿಸಲು ಅವಕಾಶ ನೀಡುವುದರ ಮೂಲಕ ರಾಜಕೀಯವಾಗಿ ಅನ್ಯಾಯಕ್ಕೊಳಗಾಗಿರುವ ಹಾಗೂ ವಂಚಿತರಾಗಿರುವ ನಮ್ಮ ಸಮುದಾಯಕ್ಕೆ ಅವಕಾಶ ನೀಡಿ ರಾಜಕೀಯ ನೆಲೆಯನ್ನು ಕಲ್ಪಿಸಿಕೊಡಬೇಕು. ಕಾಂಗ್ರೆಸ್‌ನಲ್ಲಿ ಸಕ್ರಿಯವಾಗಿರುವ ಸಮುದಾಯದ ಮುಖಂಡ ಹಾಗೂ ನಿವೃತ್ತ ಬ್ಯಾಂಕ್ ಅಧಿಕಾರಿಯಾಗಿರುವ ಸಿದ್ದರಾಜು ಅವರು ಜನಸೇವೆಯಲ್ಲಿ ತೊಡಗಿಸಿಕೊಂಡು ಜನಪ್ರಿಯರಾಗಿದ್ದಾರೆ. ಇವರನ್ನು ಚಾಮುಂಡೇಶ್ವರಿ ಕ್ಷೇತ್ರದಿಂದ ಅಭ್ಯರ್ಥಿಯಾಗಿ ಕಣಕ್ಕಿಳಿಸುವಂತೆ ಕೋರಿದರು.

ಸುದ್ದಿಗೋಷ್ಠಿಯಲ್ಲಿ ಟಿಕೆಟ್ ಆಕಾಂಕ್ಷಿ ಸಿದ್ದರಾಜು, ಸಮುದಾಯದ ಮುಖಂಡರಾದ ಮಂಜುನಾಥ್, ರಮ್ಮನಹಳ್ಳಿ ನಾಗರಾಜು, ಎಸ್.ಸಿದ್ದಯ್ಯ ಇದ್ದರು.

ರೈತರು ಉದ್ಯಮಿಗಳಾಗುವತ್ತ ಚಿಂತನೆ ನಡೆಸಬೇಕು

ಉಪ ಕೃಷಿ ನಿರ್ದೇಶಕ ಡಾ.ಜಿ.ಹೆಚ್.ಯೋಗೇಶ್ ಸಲಹೆ

ಮೈಸೂರು, ಮಾ.5– ರೈತರು ಉತ್ಪಾದಿಸಿದ ಉತ್ಪನ್ನಗಳನ್ನು ಮೌಲ್ಯವರ್ಧನೆಗೊಳಿಸಿ, ಪ್ಯಾಕಿಂಗ್ ಬ್ರ್ಯಾಂಡಿಂಗ್ ಮಾಡುವ ಮೂಲಕ ಹೆಚ್ಚಿನ ಆದಾಯಗಳಿಸಲು ವಿಫುಲವಾದ ಅವಕಾಶಗಳಿವೆ ಎಂದು ಉಪ ಕೃಷಿ ನಿರ್ದೇಶಕ ಡಾ.ಜಿ.ಹೆಚ್. ಯೋಗೇಶ್ ಹೇಳಿದರು.

ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದಿಂದ ಮಾ.1 ರಿಂದ 3 ರವರೆಗೆ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಕ್ರಮದ ಉದ್ಘಾಟನೆ ಮಾಡಿ ಮಾತನಾಡಿದ ಅವರು, ರೈತರು ಉದ್ಯಮಿಗಳಾಗುವತ್ತ ಚಿಂತನೆ ನಡೆಸಬೇಕು. ರೈತರು ತಾವು ಬೆಳೆದ ಉತ್ಪನ್ನಗಳನ್ನು ಸಂಸ್ಕರಿಸಿ, ಪ್ಯಾಕಿಂಗ್, ಬ್ರ್ಯಾಂಡಿಂಗ್ ಮಾಡಲು PMFME ಯೋಜನೆಯಲ್ಲಿ ಶೇ.50 ರ ಸಹಾಯಧನ ನೀಡಿ ಸರ್ಕಾರವು ಪ್ರೋತ್ಸಾಹಿಸುತ್ತಿದೆ. ರೈತರು ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದ ಭಾಗವಾಗಿ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಅಭಿವೃದ್ಧಿಪಡಿಸಿರುವ ತಾಂತ್ರಿಕತೆಗಳನ್ನು ಮಂಡ್ಯ ವಲಯದ ಕೃಷಿ ಸಂಶೋಧನಾ ಕೇಂದ್ರದ ವಿಜ್ಞಾನಿ ಡಾ.ಚಂದ್ರಕಲಾ ತಿಳಿಸಿಕೊಟ್ಟರು.

ಮತ್ತೊಂದು ಅಧಿವೇಶನದಲ್ಲಿ CFTRI ವಿಜ್ಞಾನಿ ಡಾ.ಉಷಾ ಧರ್ಮರಾಜನ್ ಮಾತನಾಡುತ್ತಾ ರೈತರು ಕಚ್ಚಾ ಉತ್ಪನ್ನಗಳನ್ನು ಮಾರಾಟ ಮಾಡಿದರೆ ಆದಾಯ ಕಡಿಮೆ, ಅವುಗಳನ್ನು ಸಂಸ್ಕರಿಸಿ ಮಾರಾಟ ಮಾಡಲು CFTRI ವತಿಯಿಂದ ನೂರಾರು ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲಾಗಿದೆ. ಈ ತಂತ್ರಜ್ಞಾನಗಳನ್ನು ಬಳಸಿ ರೈತರು ಉತ್ಪನ್ನಗಳನ್ನು ಸಂಸ್ಕರಿಸಿ ಮಾರಾಟ ಮಾಡುವ ಮೂಲಕ ತಮ್ಮ ಆದಾಯವನ್ನು ದ್ವಿಗುಣಗೊಳಿಸಿಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ರೈತರಾಗಿ ಹಲವು ರೀತಿಯ ಪ್ರಯತ್ನಗಳಿಂದ ಹೆಚ್ಚಿನ ಲಾಭ ಗಳಿಸುತ್ತಿರುವ ಗುಂಡ್ಲುಪೇಟೆಯ ನಾಗಾರ್ಜುನ, ಹುನಮನಹಳ್ಳಿಯ ಇಂದಿರಮ್ಮ ಮತ್ತು ಮಂಡ್ಯದ ನಿರಂಜನ್ ತಮ್ಮ ಅನುಭವಗಳನ್ನು ಹಂಚಿಕೊಳ್ಳುವುದರ ಜೊತೆಗೆ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ–ಸಂಸ್ಕರಣೆ ಮಾರುಕಟ್ಟೆಯಲ್ಲಿನ ಸವಾಲುಗಳು ಮತ್ತು ಪರಿಹಾರೋಪಾಯಗಳನ್ನು ತಿಳಿಸಿದರು.

ಎರಡನೇ ದಿನದ ಅಧಿವೇಶನದಲ್ಲಿ ಕೃಷಿ ತಜ್ಞೆ ಡಾ.ಚೈತ್ರ ಭರತ್ ಮಾತನಾಡುತ್ತಾ ಗ್ರಾಹಕರ ಬೇಡಿಕೆಗನುಗುಣವಾಗಿ ಜಾಣತನದ ಮಾರುಕಟ್ಟೆ, ಆನ್‌ಲೈನ್ ಮಾರುಕಟ್ಟೆ, ನೇರ ಮಾರಾಟಗಳಲ್ಲಿರುವ ಅವಕಾಶಗಳು, ಸವಾಲುಗಳು ಮತ್ತು ಮುಂಜಾಗ್ರತೆಗಳ ಬಗ್ಗೆ ತಿಳಿಸಿದರು.

ನಾಗನಹಳ್ಳಿ ವಿಸ್ತರಣಾ ಶಿಕ್ಷಣಾ ಘಟಕದ ವಿಜ್ಞಾನಿ ಡಾ.ನಾಗಮಣಿ ಸಿರಿಧಾನ್ಯಗಳಲ್ಲಿ ಸಂಸ್ಕರಣೆ ಮತ್ತು ಮೌಲ್ಯವರ್ಧನೆಗಿರುವ ಅವಕಾಶಗಳ ಕುರಿತು ಉಪನ್ಯಾಸ ನೀಡಿದರು.

ತರಬೇತಿ ಕಾರ್ಯಕ್ರಮದ ಮೂರನೇ ದಿನದಲ್ಲಿ ಜಯಪುರ ಹೋಬಳಿಯ ಗೋಪಾಲಪುರ ಗ್ರಾಮದ ಪ್ರಗತಿಪರ ರೈತ ದಿಲೀಪ್ ತಮ್ಮ ಜಮೀನಿನಲ್ಲಿ ಕ್ಷೇತ್ರ ಭೇಟಿ ಮಾಡಿಸುವ ಮೂಲಕ ಹೈನುಗಾರಿಕೆ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ನೇರ ಮಾರುಕಟ್ಟೆ ಕುರಿತು ತಮ್ಮ ಅನುಭವಗಳನ್ನು ಹಂಚಿಕೊಂಡರು.

ಮತ್ತೊಬ್ಬ ಪ್ರಗತಿಪರ ರೈತ ಹುಲ್ಲಹಳ್ಳಿ ಹೋಬಳಿ ಚಂಪೋಲಿ ಎಸ್ಟೇಟ್‌ನ ತಂಕಜನ್ ತಮ್ಮ ಜಮೀನಿನಲ್ಲಿ ಅಳವಡಿಸಿಕೊಂಡಿರುವ ಕಡಿಮೆ ಖರ್ಚಿನ ಬಂಡವಾಳದ ನೈಸರ್ಗಿಕ ಮತ್ತು ಸಾವಯವ ಕೃಷಿ ಪದ್ಧತಿಗಳನ್ನು ತಿಳಿಸಿಕೊಟ್ಟರು. ಕೋಕೋ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ, ಪ್ಯಾಕಿಂಗ್, ಬ್ರ್ಯಾಂಡಿಂಗ್ ಮತ್ತು ನೇರ ಆನ್‌ಲೈನ್ ಮಾರುಕಟ್ಟೆ ಮೂಲಕ ಲಾಭಗಳಿಕೆ ಕುರಿತು ತಮ್ಮ ಅನುಭವ ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ಗ್ರಾಮಗಳಿಂದ 25 ಜನ ರೈತರು ಸ್ವ–ಇಚ್ಛೆಯಿಂದ ನೋಂದಾಯಿಸಿಕೊಂಡು ಸಕ್ರಿಯವಾಗಿ ಭಾಗವಹಿಸಿದ್ದರು. ಮೂರು ದಿನ ರೈತರಿಗೆ ಉಚಿತ ಊಟ ಮತ್ತು ವಸತಿ ವ್ಯವಸ್ಥೆಯನ್ನು ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದಿಂದ ಕಲ್ಪಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಸಹಾಯಕ ಕೃಷಿ ನಿರ್ದೇಶಕಿ ಮಮತಾ, ವಜ್ರೇಶ್ವರಿ, ಕೃಷಿ ಅಧಿಕಾರಿಗಳಾದ ರಾಜಶೇಖರ್, ಗಂಗನರಸಿಂಹಯ್ಯ ಮತ್ತು ಶಿಲ್ಪ ಉಪಸ್ಥಿತರಿದ್ದರು.

ಮೈಸೂರು ಮಿತ್ರ 43 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮಾ.12, ಮಂಡ್ಯದಲ್ಲಿ 'ನಮೋ' ರೋಡ್ ಶೋ

ಐಬಿ ವೃತ್ತದಿಂದ ನಂದಾ ಥಿಯೇಟರ್‌ವರೆಗೆ ರೋಡ್ ಶೋ, ಅಧಿಕಾರಿಗಳ ಪರಿಶೀಲನೆ



ಮಂಡ್ಯ, ಮಾ.5– ಬೆಂಗಳೂರು–ಮೈಸೂರು ದಶಪಥ ರಸ್ತೆ ಉದ್ಘಾಟನೆಗೆ ಪ್ರಧಾನಿ ನರೇಂದ್ರ ಮೋದಿ ಮಾ.12 ರಂದು ಇದೇ ಪ್ರಥಮ ಬಾರಿಗೆ ಸಕ್ಕರೆ ನಾಡು ಮಂಡ್ಯಕ್ಕೆ ಆಗಮಿಸುತ್ತಿದ್ದು, ಸಕಲ ಸಿದ್ಧತೆಗಳು ಭರದಿಂದ ಸಾಗಿದೆ. ಆದರೆ ತೂಗುಯ್ಯಾಲೆಯಲ್ಲಿದ್ದ ಮೋದಿ ರೋಡ್ ಶೋ ಇದೀಗ ನಿಗದಿಯಾಗಿದ್ದು, ಮಂಡ್ಯ ನಗರದಲ್ಲಿ ಮೋದಿ ಒಂದೂವರೆ ಕಿಲೋ ಮೀಟರ್ ರೋಡ್ ಶೋ ನಡೆಸಲಿದ್ದಾರೆ.

ನಗರದ ಪ್ರವಾಸಿ ಮಂದಿರದ ವೃತ್ತ (ಹರಿಪ್ರಿಯಾ ಹೋಟೆಲ್)ದಿಂದ ಹಳೇ ನಂದಾ ಥಿಯೇಟರ್‌ವರೆಗೆ ಸುಮಾರು ಒಂದೂವರೆ ಕಿಲೋ ಮೀಟರ್‌ವರೆಗೆ ಮೋದಿ ರೋಡ್ ಶೋ ನಡೆಸಲಿದ್ದು, ಬಳಿಕ ರಸ್ತೆ ಉದ್ಘಾಟನಾ ಕಾರ್ಯಕ್ರಮಕ್ಕೆ ಗೆಜ್ಜಲಗೆರೆಗೆ ತೆರಳಲಿದ್ದಾರೆ. ಈ ಹಿನ್ನೆಲೆಯಲ್ಲಿ ರಸ್ತೆಯ ಶುಚಿತ್ವ, ದುರಸ್ತಿ ಕುರಿತು ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲಕೃಷ್ಣ ಅಧಿಕಾರಿಗಳೊಂದಿಗೆ ಪರಿಶೀಲಿಸಿದರು. ಬಳಿಕ ನಾಳೆಯಿಂದ ಎಲ್ಲಾ ಕೆಲಸ ಪ್ರಾರಂಭಿಸುವಂತೆ ಎಂದು ಸೂಚಿಸಿದರು.

ರೋಡ್ ಶೋ ವಿವರ: ಹಳೇ ಬೆಂಗಳೂರು–ಮೈಸೂರು ರಸ್ತೆಯ ಪ್ರವಾಸಿ ಮಂದಿರದಿಂದ ರೋಡ್ ಶೋ ಪ್ರಾರಂಭವಾಗಿ, ನಗರದ ಕೇಂದ್ರ ಬಸ್ ನಿಲ್ದಾಣ, ಸಂಜಯ ವೃತ್ತ ಮಾರ್ಗವಾಗಿ ಮಹಾವೀರ ವೃತ್ತ, ಹಳೇ ಎಂವಿಜಿ ಬೇಕರಿ ಮುಂಭಾಗ ಸೇರಿದಂತೆ ನಂದಾ ಚಿತ್ರಮಂದಿರದ ಬಳಿ ಸುಮಾರು ಒಂದೂವರೆ ಕಿಲೋಮೀಟರ್ ರೋಡ್ ಶೋ ಮುಕ್ತಾಯವಾಗಲಿದೆ.

ಮೊದಲು ಎರಡು ಕಿಮೀ ನಿಗದಿಯಾಗಿತ್ತು

ಈ ಮೊದಲು ಪ್ರಧಾನಿ ಮೋದಿ ರೋಡ್ ಶೋ ಕಲ್ಲಹಳ್ಳಿಯಿಂದ ಫ್ಯಾಕ್ಟರಿ ವೃತ್ತದವರೆಗೆ ನಿಗದಿಯಾಗಿತ್ತು. ಆದರೆ ಭದ್ರತಾ ಕಾರಣದಿಂದ ಎಸ್‌ಪಿಜಿ ಅನುಮತಿ ನೀಡದ ಹಿನ್ನೆಲೆಯಲ್ಲಿ ಒಂದೂವರೆ ಕಿಲೋಮೀಟರ್‌ಗೆ ರೋಡ್ ಶೋ ನಿಗದಿ ಮಾಡಿ ಐಬಿ ವೃತ್ತದಿಂದ ನಂದಾ ಥಿಯೇಟರ್‌ವರೆಗೆ ನಿಗದಿ ಮಾಡಲಾಗಿದೆ.

ಮೋದಿ ರೂಟ್ ಮ್ಯಾಪ್: ಮಾ.12 ರಂದು ಪ್ರಧಾನಿ ಮೋದಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣ ಅಥವಾ ಬೆಂಗಳೂರಿನ ಯಲಹಂಕ ವಾಯುನೆಲೆಗೆ ನವದೆಹಲಿಯಿಂದ ವಿಶೇಷ ವಿಮಾನದ ಮೂಲಕ ಆಗಮಿಸಲಿದ್ದು, ಅಲ್ಲಿಂದ ಮಂಡ್ಯ ನಗರದ ಪಿಇಎಸ್ ಕಾಲೇಜು ಆವರಣದಲ್ಲಿರುವ ಕೆಎಸ್‌ಸಿಎ ಕ್ರಿಕೆಟ್ ಕ್ರೀಡಾಂಗಣಕ್ಕೆ ವಿಶೇಷ ಹೆಲಿಕಾಪ್ಟರ್ ಮೂಲಕ ಆಗಮಿಸಲಿದ್ದಾರೆ. ಬಳಿಕ ಕಾರಿನಲ್ಲಿ ಪಿಇಎಸ್ ಕಾಲೇಜು ರಸ್ತೆಯಲ್ಲಿ ಹಳೇ ಬೆಂಗಳೂರು– ಮೈಸೂರು ರಸ್ತೆಗೆ ಆಗಮಿಸಲಿದ್ದು, ಐಬಿ ಮುಂಭಾಗದಿಂದ ರೋಡ್ ಶೋ ಆರಂಭವಾಗಲಿದೆ.

ಶನಿವಾರವೇ ಎಸ್‌ಪಿಜಿ ತೆಕ್ಕೆಗೆ ರಸ್ತೆ: ರೋಡ್ ಶೋ ಹಿನ್ನೆಲೆಯಲ್ಲಿ ಎಸ್‌ಪಿಜಿ ಮಾ.11ರ ಶನಿವಾರವೇ ಮೋದಿ ರೋಡ್ ಶೋ ಸಾಗುವ ರಸ್ತೆಯನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳುವ ಸಾಧ್ಯತೆ ಇದ್ದು, ಸೋಮವಾರದಿಂದಲೇ ಸಿದ್ಧತೆಗಳು ಕಾರ್ಯಾರಂಭವಾಗಲಿದೆ. ಮಂಡ್ಯ ಪೊಲೀಸ್ ಇಲಾಖೆ ಜನ ಸಂಚರಿಸಲು ಬದಲಿ ಸಂಚಾರ ವ್ಯವಸ್ಥೆ ಯಾವ ರೀತಿ ಮಾಡುವರು ಎಂಬುದನ್ನು ಕಾದು ನೋಡಬೇಕಿದೆ.

ಇದೇ ರಸ್ತೆಯಲ್ಲಿ ನಡೆದಿದ್ದ ರಾಹುಲ್ ರೋಡ್ ಶೋ: 2013ರಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಇದೇ ರಸ್ತೆಯಲ್ಲೇ ಮೈಸೂರಿನಿಂದ ಮಂಡ್ಯದವರೆಗೆ ರೋಡ್ ಶೋ ನಡೆಸಿದ್ದರು. ಆಗ ಎಸ್‌ಪಿಜಿ ಭದ್ರತೆ ಹೊಂದಿದ್ದ ರಾಹುಲ್‌ಗಾಂಧಿ ಅವರ ರೋಡ್ ಶೋಗಾಗಿ ಒಂದು ದಿನದ ಮುಂಚೆಯೇ ರಸ್ತೆಯನ್ನು ಪೊಲೀಸರು ಬಂದ್ ಮಾಡಿಸಿದ್ದರು. ಇದೀಗ ಅದಕ್ಕಿಂತಲೂ ಹೆಚ್ಚಿನ ಭದ್ರತೆ ಒದಗಿಸುವ ಸಾಧ್ಯತೆ ಇದೆ.

ಜೆಡಿಎಸ್ ಟಿಕೆಟ್‌ಗಾಗಿ ಕೊನೆವರೆಗೂ ಕಾಯುವೆ

ಟಿಕೆಟ್ ಸಿಗದಿದ್ದರೆ ಬಂಡಾಯ ಸ್ಪರ್ಧೆ ಖಚಿತ: ಜಿಪಂ ಮಾಜಿ ಅಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್



ಮಂಡ್ಯ, ಮಾ.5– ಕಳೆದ 30 ವರ್ಷದಿಂದ ಜೆಡಿಎಸ್ ಪಕ್ಷ ಕಟ್ಟಿ ಬೆಳೆಸಿರುವ ನಾನು ಮುಂಬರುವ ಚುನಾವಣೆಯ ಶ್ರೀರಂಗಪಟ್ಟಣ ಕ್ಷೇತ್ರದ ಜೆಡಿಎಸ್ ಟಿಕೆಟ್‌ಗಾಗಿ ಕೊನೆವರೆಗೂ ಕಾಯುತ್ತೇನೆ. ಒಂದು ವೇಳೆ ಟಿಕೆಟ್ ಸಿಗದಿದ್ದರೆ ಬಂಡಾಯ ಸ್ಪರ್ಧೆ ಖಚಿತ ಎಂದು ಜಿಪಂ ಮಾಜಿ ಅಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್ ತಿಳಿಸಿದರು.

ಮಂಡ್ಯ ಸಮೀಪದ ಕೊಡಿಯಾಲ ಗ್ರಾಮದ ಶ್ರೀಸಿದ್ದೇಶ್ವರ ಸಮುದಾಯ ಭವನದಲ್ಲಿ ಭಾನುವಾರ ಶ್ರೀರಂಗಪಟ್ಟಣ ತಾಲೂಕಿನ ಅರಕೆರೆ ಹೋಬಳಿ ಮಟ್ಟದ ಸಭೆಯಲ್ಲಿ ತಗ್ಗಹಳ್ಳಿ ವೆಂಕಟೇಶ್ ಬೆಂಬಲಿಗರು ಹಾಗೂ ಹಿತೈಷಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಮಾಜಿ ಪ್ರಧಾನಿ ದೇವೇಗೌಡ, ಮಾಜಿ ಸಿಎಂ ಕುಮಾರಸ್ವಾಮಿ ಆಶೀರ್ವಾದದಿಂದ ಜಿಪಂ, ತಾಪಂ, ಗ್ರಾಪಂ ಸೇರಿ 6 ಚುನಾವಣೆಗಳಲ್ಲಿ ಗೆದ್ದು ಜನಸೇವೆ ಮಾಡಿದ್ದೇನೆ. ನನಗೆ ರಾಜಕೀಯ ಹಿನ್ನೆಲೆ ಇಲ್ಲ. ಕ್ಷೇತ್ರದ ಜನರು, ನಿಷ್ಠಾವಂತ ಜೆಡಿಎಸ್ ಕಾರ್ಯಕರ್ತರು ನನಗೆ ಬೆಂಬಲವಾಗಿ ನಿಂತರು ಎಂದರು.

ಹಲವು ಬಾರಿ ಜೆಡಿಎಸ್ ನಾಯಕರಲ್ಲಿ ಮನವಿ ಮಾಡಿ ಪಕ್ಷ ಸಂಘಟನೆಗೆ ಸೂಕ್ತ ಅವಕಾಶ ಕೋರಿದ್ದೆ. ಅಲ್ಲದೇ, 2 ಬಾರಿ ವಿಧಾನ ಪರಿಷತ್ ಚುನಾವಣೆಗಳಲ್ಲಿ ಅವಕಾಶದಿಂದ ವಂಚಿತನಾದೆ. 2018ರ ವಿಧಾನಸಭಾ ಚುನಾವಣೆಯಲ್ಲಿ ಕೊನೆ ಕ್ಷಣದವರೆಗೂ ಟಿಕೆಟ್‌ಗಾಗಿ ಹೋರಾಟ ಮಾಡಿದೆ. ಆದರೆ, ನಾಯಕರು ಸಮಾಧಾನ ಮಾಡಿ ಪಕ್ಷ ನಿಷ್ಠೆ ಇಲ್ಲದವರಿಗೆ ಟಿಕೆಟ್ ನೀಡಿದರು ಎಂದರು.

ಕಳೆದ ಕೆಲ ದಿನಗಳ ಹಿಂದೆ ಆರತಿ ಉಕ್ಕಡದಲ್ಲಿ ನಡೆದ ನಿಷ್ಠಾವಂತರ ಸಭೆಯಲ್ಲಿ ಜನರೇ ಖರ್ಚು ಮಾಡಿ ಸಭೆ ಆಯೋಜಿಸಿದ್ದರು. ಸಂತೆಕಸಲಗೆರೆ ಭೂಮಿ ಸಿದ್ದೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದ ಸಭೆ ಹಾಗೂ ಕೊಡಿಯಾಲದಲ್ಲಿ ಕೂಡ ನಡೆದ ಸಭೆಗೂ ಜನರೇ ಖರ್ಚು, ವೆಚ್ಚ ಭರಿಸಿದ್ದಾರೆ. ಕಲುಷಿತಗೊಂಡಿರುವ ರಾಜಕೀಯ ವ್ಯವಸ್ಥೆ ನಡುವೆ ನನ್ನ ಮೇಲೆ ಅಭಿಮಾನಿಗಳು, ಜನರು ಇಟ್ಟಿರುವ ಪ್ರೀತಿಗೆ ಚಿರಋಣಿ ಎಂದರು.

ಹಣ ಬಲವುಳ್ಳ ಕ್ಷೇತ್ರದ ಶಾಸಕ ರವೀಂದ್ರ ಶ್ರೀಕಂಠಯ್ಯ ಹಾಗೂ ಮಾಜಿ ಶಾಸಕ ರಮೇಶ್‌ಬಾಬು ಅವರು ನನ್ನ ಸ್ಪರ್ಧೆಯಿಂದ ವಿಚಲಿತರಾಗಿ ಇಲ್ಲಸಲ್ಲದ ಅಪಪ್ರಚಾರ ಮಾಡುತ್ತಿದ್ದಾರೆ. ಪಕ್ಷದ ಕಾರ್ಯಕರ್ತರು ಹಾಗೂ ಮತದಾರರು ಅಪಪ್ರಚಾರಗಳಿಗೆ ಕಿವಿಗೊಡಬಾರದು. ಶ್ರೀರಂಗಪಟ್ಟಣದಲ್ಲಿ ಅರಕೆರೆಯ ಈ 2 ಕುಟುಂಬಗಳೇ ಹಲವಾರು ವರ್ಷಗಳಿಂದ ರಾಜಕಾರಣ ಮಾಡಿಕೊಂಡು ಶಾಸಕರಾಗಿ ಆಡಳಿತ ಮಾಡಿದ್ದಾರೆ. ಆದರೆ, ಕ್ಷೇತ್ರ ನಿರೀಕ್ಷಿಸಿದಷ್ಟು ಪ್ರಗತಿ ಸಾಧಿಸಿಲ್ಲ. ಹೀಗಾಗಿ ಜನರು ಬದಲಾವಣೆ ಬಯಸಿದ್ದಾರೆ. ಜನರ ನಡುವೆ ಇದ್ದು ಹೋರಾಟ ನಡೆಸಿಕೊಂಡು ಬಂದಿರುವ ನನ್ನ ಬಗ್ಗೆ ಮತದಾರರು ಒಲವು ವ್ಯಕ್ತಪಡಿಸುತ್ತಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭ ಬೆಂಬಲಿಗರಾದ ಹೆಚ್.ಸಿ.ಮಂಜುನಾಥ್, ಸಿದ್ದರಾಜು, ಪುಟ್ಟೇಗೌಡ, ಜವರೇಗೌಡ, ಸುರೇಶ್ ಸೇರಿದಂತೆ ಮತ್ತಿತರರಿದ್ದರು.

ಸಹೋದರಿ ಮೇಲಿನ ದೌರ್ಜನ್ಯ ಪ್ರಶ್ನಿಸಿದಕ್ಕೆ ಮಾರಕಾಸ್ತ್ರಗಳಿಂದ ಹಲ್ಲೆ

ಇಬ್ಬರು ಸಹೋದರರು, ತಂಗಿಗೆ ಗಾಯ, ಬಾವ ಬಂಧನ, ಮೂವರಿಗಾಗಿ ಹುಡುಕಾಟ

ಕೆ.ಆರ್.ಪೇಟೆ, ಮಾ.5– ಸಹೋದರಿ ಮೇಲಿನ ದೌರ್ಜನ್ಯ ಪ್ರಶ್ನಿಸಿದ ಸಹೋದರರ ಮೇಲೆ ಬಾವ ಮತ್ತವರ ಕುಟುಂಬದವರು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿರುವ ಘಟನೆ ತಾಲೂಕಿನ ಬೊಮ್ಮನಾಯಕನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಬೊಮ್ಮನಾಯಕನಹಳ್ಳಿ ಗ್ರಾಮದ ಆಶಾರಾಣಿ, ಆಕೆಯ ಸಹೋದರರಾದ ಬಸವರಾಜು ಮತ್ತು ರಾಘವೇಂದ್ರ ಹಲ್ಲೆಗೊಳಗಾಗಿ ಆಸ್ಪತ್ರೆಗೆ ದಾಖಲಾದವರಾಗಿದ್ದು, ಇವರ ಮೇಲೆ ಆಶಾರಾಣಿ ಪತಿ ಲೋಕೇಶ್, ಈತನ ತಂದೆ ಮಾದೇಗೌಡ, ತಾಯಿ ಬೋರಮ್ಮ, ಸಹೋದರ ಯೋಗೇಶ್ ಹಲ್ಲೆ ನಡೆಸಿದ ಆರೋಪಿಗಳು.

ವಿವರ: ಗಾಯಗೊಂಡಿರುವ ಸಹೋದರರು ತಮ್ಮ ತಂಗಿ ಆಶಾರಾಣಿಯನ್ನು ಮಾದೇಗೌಡರ ಪುತ್ರ ಲೋಕೇಶನಿಗೆ ಸಾಕಷ್ಟು ವರದಕ್ಷಿಣೆ ನೀಡಿ ವಿವಾಹ ಮಾಡಿಕೊಟ್ಟಿದ್ದು, ಈ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಆದರೆ ಲೋಕೇಶ ಮದ್ಯಪಾನ ಮಾಡಿ ಬಂದು ಆಶಾರಾಣಿ ಮೇಲೆ ಹಲ್ಲೆ ನಡೆಸುತ್ತಿದ್ದ. ಮೊನ್ನೆ ಗ್ರಾಮದಲ್ಲಿ ನಡೆದ ಗ್ರಾಮದೇವತೆ ಹಬ್ಬದ ದಿನ ಆಶಾರಾಣಿ ಮೇಲೆ ಹಲ್ಲೆ ನಡೆಸಿ ಮನೆಯಿಂದ ಹೊರಗಡೆ ನಿಲ್ಲಿಸಿದ್ದರು. ಇದನ್ನು ಪ್ರಶ್ನಿಸಿದ ಆಶಾರಾಣಿ ಸಹೋದರರಾದ ಬಸವರಾಜು ಮತ್ತು ರಾಘವೇಂದ್ರನ ಮೇಲೆ ಆರೋಪಿಗಳಾದ ಲೋಕೇಶ, ಮಾದೇಗೌಡ, ಯೋಗೇಶ್, ಬೋರಮ್ಮ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದಾರೆ. ಇದರಿಂದ ಬಸವರಾಜು ಮತ್ತು ರಾಘವೇಂದ್ರ ತಲೆಗೆ ಗಂಭೀರ ಗಾಯಗಳಾಗಿವೆ. ಇವರಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ವೈದ್ಯರ ಸಲಹೆ ಮೇರೆಗೆ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆ ಕುರಿತು ಗಾಯಾಳು ಸಹೋದರರ ತಾಯಿ ಪ್ರೇಮ ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ನಾಲ್ವರು ಆರೋಪಿಗಳ ಪೈಕಿ ಲೋಕೇಶ್‌ನನ್ನು ಬಂಧಿಸಿ ನ್ಯಾಯಾಧೀಶರ ಆದೇಶದ ಮೇರೆಗೆ ಮಂಡ್ಯ ಜೈಲಿಗೆ ಕಳುಹಿಸಿದ್ದಾರೆ. ಉಳಿದ ಆರೋಪಿಗಳಾದ ಮಾದೇಗೌಡ, ಬೋರಮ್ಮ, ಯೋಗೇಶ್ ತಲೆಮರೆಸಿಕೊಂಡಿದ್ದು, ಪೊಲೀಸರು ಹುಡುಕಾಟ ನಡೆಸಿದ್ದಾರೆ.

ಗ್ರಾಮಸ್ಥರಿಂದ ಠಾಣೆಗೆ ಮುತ್ತಿಗೆ: ಗ್ರಾಮದಲ್ಲಿ ಮಾರಕಾಸ್ತ್ರಗಳಿಂದ ಹಲವು ಕುಟುಂಬಗಳ ಮೇಲೆ ಹಲ್ಲೆ ನಡೆಸಿ ಕೊಲೆ ಬೆದರಿಕೆ ಹಾಕುವ ಪ್ರವೃತ್ತಿ ಬೆಳೆಸಿಕೊಂಡು ಬೊಮ್ಮನಾಯಕನಹಳ್ಳಿ ಗ್ರಾಮದ ಪಾಳೇಗಾರರಂತೆ ವರ್ತಿಸುತ್ತಾ ಗ್ರಾಮದಲ್ಲಿ ಅಶಾಂತಿ ಸೃಷ್ಟಿಸುತ್ತಿರುವ ಆರೋಪಿಗಳಾದ ಲೋಕೇಶ್, ಮಾದೇಗೌಡ, ಬೋರಮ್ಮ, ಯೋಗೇಶ್ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು. ಈ ಮೂಲಕ ಗ್ರಾಮದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಬೇಕು ಎಂದು ಗ್ರಾಮದ ಹಲವು ಮಂದಿ ಪಟ್ಟಣ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ಒತ್ತಾಯಿಸಿದರು.

ಶ್ರೀಮಂತವಾಗಿರುವ ಭಾರತೀಯ ಭಾಷೆಗಳನ್ನು ಅಧ್ಯಯನ ಮಾಡಿ

ವಿಚಾರ ಸಂಕಿರಣದಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು



ಮೇಲುಕೋಟೆ, ಮಾ.5– ಭಾರತೀಯ ಭಾಷೆಗಳೆಲ್ಲವೂ ಶ್ರೀಮಂತವಾಗಿದ್ದು, ಭಾರತೀಯರಾಗಿ ಎಲ್ಲಾ ಭಾಷೆಗಳನ್ನು ಅಧ್ಯಯನ ಮಾಡಬೇಕು ಎಂದು ಶಾಸಕ ಸಿ.ಎಸ್.ಪುಟ್ಟರಾಜು ತಿಳಿಸಿದರು.

ಮೇಲುಕೋಟೆಯ ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನಾ ಸಂಸತ್‌ನಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಸಂಸ್ಕೃತ ಹಾಗೂ ಕನ್ನಡ ಭಾಷೆಗಳಿಗಿರುವ ಸಾಮ್ಯತೆ ಮತ್ತು ಮಹತ್ವ ಕುರಿತ 2 ದಿನಗಳ ರಾಜ್ಯಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಸಂಸ್ಕೃತ ಮತ್ತು ಕನ್ನಡ ಪ್ರಾಚೀನ ಭಾಷೆಗಳಾಗಿದ್ದು, ಭಾರತದ ಭಾಗವಾಗಿವೆ. ಸಂಸ್ಕೃತ ದೇವನಾಗರಿಯಾಗಿದ್ದು, ಅಲ್ಲಿನ ಉಪಯುಕ್ತ ಮಾಹಿತಿಗಳು ಕನ್ನಡದಲ್ಲಿ ಪ್ರಕಾಶನಗೊಂಡಿವೆ. ಈ ನಿಟ್ಟಿನಲ್ಲಿ ಮೇಲುಕೋಟೆಯ ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನ ಸಂಸತ್‌ನಲ್ಲಿ ಸಾಕಷ್ಟು ಕಾರ್ಯ ಆಗಿದ್ದು, ಹಲವಾರು ಕನ್ನಡ ಅವತರಣಿಕೆಗಳು ಲೋಕಾರ್ಪಣೆಯಾಗಿವೆ ಎಂದರು.

ಮೇಲುಕೋಟೆಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ 32 ಕೋಟಿ ರೂ. ವೆಚ್ಚದಲ್ಲಿ 108 ಕೊಳಗಳು ಮತ್ತು ಕಲ್ಯಾಣಿ ಜೀರ್ಣೋದ್ಧಾರ ಕಾರ್ಯ ಆರಂಭವಾಗಿದೆ. ಮೊದಲ ಹಂತದಲ್ಲಿ ಸಂಸ್ಕೃತ ಸಂಶೋಧನಾ ಸಂಸ್ಥೆ ಆವರಣದಲ್ಲಿರುವ ಕೊಳಗಳನ್ನು ಜೀರ್ಣೋದ್ಧಾರ ಮಾಡುವ ಕಾಮಗಾರಿ ಆರಂಭಿಸಲಾಗಿದೆ. ಮೇಲುಕೋಟೆ ವೈರಮುಡಿ ಬ್ರಹ್ಮೋತ್ಸವವನ್ನು ವೈಭವದಿಂದ ಆಚರಿಸುವ ಸಂಬಂಧ ಮಾ.9 ರಂದು ಅಧಿಕಾರಿಗಳ ಪೂರ್ವಭಾವಿ ಸಭೆ ನಡೆಸಲು ಸೂಚಿಸಿದ್ದೇನೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಸಂಸ್ಕೃತ ವಿವಿ ಕುಲಪತಿ ಪ್ರೊ.ವಿ.ಗಿರೀಶ್‌ಚಂದ್ರ ಮಾತನಾಡಿ, ಕನ್ನಡ ಮತ್ತು ಸಂಸ್ಕೃತ ಅತ್ಯಂತ ಪುರಾತನ ಭಾಷೆಯಾಗಿವೆ. ಎರಡೂ ಭಾಷೆಗಳಲ್ಲಿ ಒಂದೇ ರೀತಿಯ ಪದಗಳ ಬಳಕೆ ಕಾಣಬಹುದು. ಭಾಷೆಗಳು ಪರಸ್ಪರ ಅಧ್ಯಯನ, ಬೆಳವಣಿಗೆ ಮತ್ತು ಅಭಿವೃದ್ಧಿಗೆ ಪೂರಕವಾಗಿರಬೇಕು. ಈ ನಿಟ್ಟಿನಲ್ಲಿ ಸರ್ಕಾರದ ಎರಡೂ ಸಂಸ್ಥೆಗಳ ಸಹಯೋಗದಲ್ಲಿ ನಡೆಯುತ್ತಿರುವ ವಿಚಾರ ಸಂಕಿರಣ ಮಹತ್ವದಾಗಿದೆ ಎಂದರು

ಇದೇ ವೇಳೆ ಹಂಪಿ ವಿವಿ ನಾಡೋಜ ಪ್ರಶಸ್ತಿಗೆ ಭಾಜನರಾದ ಡಾ.ಭಾಷ್ಯಂ ಸ್ವಾಮೀಜಿ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ವೀರಶೈವ ಮುಖಂಡ ಮಲ್ಲೇಶ್, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ, ಭರಾರಾಸಂಸಂ ಕುಲಸಚಿವ ಎಸ್.ಕುಮಾರ್ ಇದ್ದರು.

ನೇಮಕ



ಮೈಸೂರು, ಮಾ.5– ದಲಿತ ಸೇನೆಯ ಮೈಸೂರು ಜಿಲ್ಲಾಧ್ಯಕ್ಷರಾಗಿ ನಾಯ್ಡುನಗರ 2ನೇ ಹಂತದ ಎಂ. ಆನಂದರಾಜ್ ಅವರನ್ನು ನೇಮಕ ಮಾಡಿ ಸೇನೆಯ ರಾಜ್ಯಾಧ್ಯಕ್ಷ ಎಂ.ಎಸ್. ಜಗನ್ನಾಥ್ ಆದೇಶ ಹೊರಡಿಸಿದ್ದಾರೆ.

ಒಂದನೇ ಪುಟದಿಂದ

ಸಿವೇಜ್ ಫಾರಂ ಸೇರಿ ಐದು ಕಡೆ ಬೆಂಕಿ



ಸಿವೇಜ್ ಫಾರಂನಲ್ಲಿ ಅಗ್ನಿಶಾಮಕ ದಳ ಬೆಂಕಿ ನಂದಿಸುತ್ತಿರುವುದನ್ನು ವೀಕ್ಷಿಸುತ್ತಿರುವ ಶಾಸಕ ಎಸ್.ಎ.ರಾಮದಾಸ್.

ಪದಾರ್ಥಗಳು ನಾಶವಾಗಿದೆ. ಟೈರ್‌ಗಳಿಗೆ ಹೊತ್ತಿಕೊಂಡ ಬೆಂಕಿಯ ಕೆನ್ನಾಲಿಗೆ ಪಕ್ಕದಲ್ಲಿಯೇ ಇದ್ದ ಮಾಜಿ ಶಾಸಕ ವಾಸು ಅವರ ಒಡೆತನದ ಟಿಷ್ಯೂ ಕಾರ್ಖಾನೆಯ ಆವರಣಕ್ಕೆ ಹೊತ್ತಿಕೊಂಡಿತು. ವಿಷಯ ತಿಳಿಯುತ್ತಿದ್ದಂತೆ ತಕ್ಷಣ ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿಗಳು ರೈಲ್ವೇ ಹಳಿಯೂ ಪಕ್ಕದಲ್ಲಿರುವುದನ್ನು ಗಮನಿಸಿ, ರೈಲ್ವೆ ಅಧಿಕಾರಿಗಳ ಗಮನಕ್ಕೆ ವಿಷಯವನ್ನು ತಿಳಿಸಿದರು. ಇಲ್ಲದಿದ್ದರೆ, ಈ ಮಾರ್ಗದಲ್ಲಿ ಸಂಚರಿಸುವ ರೈಲಿಗೂ ಬೆಂಕಿ ತಗುಲಿ ಭಾರೀ ಅನಾಹುತವಾಗುತಿತು. ಹಾಗೇ ಕಾರ್ಖಾನೆ ಪಕ್ಕದಲ್ಲಿಯೇ ಜಯದೇವ ನಗರ ಬಡಾವಣೆ, ಜೆಎಸ್‌ಎಸ್ ಅರ್ಬನ್ ಹಾತ್ ಹಾಗೂ ಶಾಹಿ ಗಾರ್ಮೆಂಟ್ ಸಹ ಇದ್ದು, ಅಗ್ನಿಶಾಮಕ ದಳದ ಸಿಬ್ಬಂದಿ ಸಮಯಕ್ಕೆ ಬಂದು ಬೆಂಕಿ ನಂದಿಸಿದ ಪರಿಣಾಮ ಭಾರೀ ಅನಾಹುತ ತಪ್ಪಿದೆ. ವಿಷಯ ತಿಳಿಯುತ್ತಿದ್ದಂತೆ ವಾಸು ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಕಾರ್ಖಾನೆ ಹಾಗೂ ಸುತ್ತಮುತ್ತ ಆವರಿಸಿದ ಭಾರೀ ಬೆಂಕಿಯನ್ನು ನಂದಿಸಲು ಅಗ್ನಿಶಾಮಕ ಸಿಬ್ಬಂದಿಗಳು ಆರು ಅಗ್ನಿಶಾಮಕ ವಾಹನಗಳನ್ನು ಬಳಸಿಕೊಂಡು ಸುಮಾರು ಮೂರು ಗಂಟೆಗೂ ಅಧಿಕ ಸಮಯ ಹರಸಾಹಸ ಪಟ್ಟು ಬೆಂಕಿಯನ್ನು ನಂದಿಸಿದರು.

ಸೀವೇಜ್ ಫಾರಂ: ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಸೀವೇಜ್ ಫಾರಂ ಆವರಣದಲ್ಲಿ ಪ್ಲಾಸ್ಟಿಕ್ ರಾಶಿಗೆ ಬೆಂಕಿ ಹೊತ್ತಿಕೊಂಡಿದ್ದು, ಶಾಸಕ ರಾಮದಾಸ್ ಸ್ಥಳದಲ್ಲಿಯೇ ಮೊಕ್ಕಾಂ ಹೂಡಿ ಬೆಂಕಿ ನಂದಿಸುವ ಕಾರ್ಯಾಚರಣೆಯನ್ನು ಪರಿಶೀಲಿಸಿದರು.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಸುಮಾರು 9.30ರಿಂದ 10 ಗಂಟೆಯ ಸಂದರ್ಭದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಇಲ್ಲಿರುವ ಪ್ಲಾಸ್ಟಿಕ್ ರಾಶಿಗೆ ಬೆಂಕಿ ತಗುಲಿರುವುದರಿಂದ ಬೆಂಕಿಯನ್ನು ನಂದಿಸಲು ಕಷ್ಟಕರವಾಗಿದ್ದು, ಅಗ್ನಿಶಾಮಕ ದಳದ ಸಿಬ್ಬಂದಿಗಳು 4 ಫೈರ್ ಇಂಜಿನ್ ಮತ್ತು ಜೆಟ್‌ಗಳನ್ನು ಬಳಸಿಕೊಂಡು ಬೆಂಕಿ ನಂದಿಸಲು ಮುಂದಾಗಿದ್ದಾರೆ. ಬೆಂಕಿಯ ತೀವ್ರತೆ ನೋಡುತ್ತಿದ್ದರೆ, ಕಾರ್ಯಾಚರಣೆ ಇನ್ನು ನಾಲ್ಕು ಗಂಟೆಗೂ ಅಧಿಕ ಸಮಯ ನಡೆಯಲಿದೆ. ವಿಷಯ ತಿಳಿಯುತ್ತಿದ್ದಂತೆ ನಾನು ಸ್ಥಳಕ್ಕೆ ಆಗಮಿಸಿದ್ದು, ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದೇನೆ ಎಂದರು. ಪತ್ರಿಕೆ ಅಚ್ಚಿಗೆ ಹೋಗುವ ವೇಳೆಯಲ್ಲೂ ಸೀವೇಜ್ ಫಾರಂನಲ್ಲಿ ಬೆಂಕಿ ನಂದಿಸುವ ಕಾರ್ಯಾಚರಣೆ ಮುಂದುವರೆದಿತ್ತು. ಇದೇ ರೀತಿ ಕಿಡಿಗೇಡಿಗಳು ಹಂಚಿದ ಬೆಂಕಿಗೆ ನಗರದ ಹೆಬ್ಬಾಳ್ ಕೈಗಾರಿಕಾ ಪ್ರದೇಶದಲ್ಲಿರುವ ಕುಸುಮ ಪ್ಯಾಕೇಜ್ ಕಾರ್ಖಾನೆ, ಮೈಪಾಲ್ ಕಾರ್ಖಾನೆಯ ಬಳಿಯೂ ಭಾರೀ ಪ್ರಮಾಣದ ಬೆಂಕಿ ಕಾಣಿಸಿಕೊಂಡ ಪರಿಣಾಮ ಸುಮಾರು 18ಕ್ಕೂ ಹೆಚ್ಚು ಅಗ್ನಿಶಾಮಕ ದಳದ ವಾಹನಗಳನ್ನು ಬಳಸಿಕೊಂಡು ಅಗ್ನಿಶಾಮಕ ದಳ ಸಿಬ್ಬಂದಿಗಳು ಯಶಸ್ವಿಯಾಗಿ ಬೆಂಕಿಯನ್ನು ನಂದಿಸಿದ್ದಾರೆ.

ಮಾ.24ರಿಂದ ರಾಜ್ಯಾದ್ಯಂತ ಕೆಎಸ್‌ಆರ್‌ಟಿಸಿ ಬಸ್ಸುಗಳ ಸಂಚಾರ ಸ್ಥಗಿತ

ಬೇಡಿಕೆ ಈಡೇರಿಸಲು ಕೆಎಸ್‌ಆರ್‌ಟಿಸಿ ಸಮಾನ ಮನಸ್ಕರ ವೇದಿಕೆ ಆಗ್ರಹ



ಮೈಸೂರು, ಮಾ.5(ಎಸ್‌ಪಿಎನ್)– ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕೆಎಸ್‌ಆರ್‌ಟಿಸಿ ಸಮಾನ ಮನಸ್ಕರ ವೇದಿಕೆ ವತಿಯಿಂದ ಮಾ.24 ರಿಂದ ರಾಜ್ಯಾದ್ಯಂತ ನಾಲ್ಕು ನಿಗಮಗಳ ಬಸ್ ಸಂಚಾರವನ್ನು ಸಂಪೂರ್ಣ ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ವೇದಿಕೆಯ ಸದಸ್ಯ ಹಾಗೂ ಕೆಎಸ್‌ಆರ್‌ಟಿಸಿ ನೌಕರರ ಕೂಟದ ಮೈಸೂರು ಘಟಕದ ಸಂಚಾಲಕ ಸಿ.ಡಿ.ವಿಶ್ವನಾಥ್ ತಿಳಿಸಿದರು.

ಬೇಡಿಕೆ ಸಂಬಂಧ ಮಾ.1ರಿಂದ 4ರವರೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಸಾವಿರಾರು ಸಾರಿಗೆ ನೌಕರರು ಜಮಾಯಿಸಿ ಶಾಂತಿಯುತ ಪ್ರತಿಭಟನೆ ನಡೆಸಿದ್ದರಾದರೂ ಸರ್ಕಾರ ನಮ್ಮ ಬೇಡಿಕೆಗೆ ಸ್ಪಂದಿಸದ ಕಾರಣ. ಅದೇ ವೇದಿಕೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿತ್ತು ಎಂದು ತಿಳಿಸಿದರು.

ಸಮಾನ ಮನಸ್ಕರ ವೇದಿಕೆ ಪದಾಧಿಕಾರಿಗಳ ಸಮ್ಮುಖದಲ್ಲಿ ಫ್ರೀಡಂಪಾರ್ಕ್‌ನಲ್ಲಿ ಶನಿವಾರ ಸಂಜೆ ತೆಗೆದುಕೊಂಡ ತೀರ್ಮಾನದಂತೆ ಕಾರ್ಮಿಕ ಇಲಾಖೆ ಆಯುಕ್ತರಿಗೆ ಸೋಮವಾರ (ಮಾ.6) ವೇತನ ಹೆಚ್ಚಳ, ಕೆಎಸ್‌ಆರ್‌ಟಿಸಿ ಯೂನಿಯನ್‌ಗಳಿಗೆ ಚುನಾವಣೆ ನಡೆಸುವಂತೆ ಒತ್ತಾಯಿಸಿ, ಮನವಿ ಸಲ್ಲಿಸಲಾಗುವುದು ಎಂದು ಅವರು ತಮ್ಮನ್ನು ಸಂಪರ್ಕಿಸಿದ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಯಾವುದೇ ಪ್ರಯೋಜನವಾಗಿಲ್ಲ: ನಮ್ಮ ಸಮಸ್ಯೆ ಬಗೆಹರಿಸುವಂತೆ 2020ರ ಡಿಸೆಂಬರ್‌ನಲ್ಲಿ ಮೂರು ದಿವಸ, ನಂತರ 2021ರ ಏಪ್ರಿಲ್‌ನಲ್ಲಿ 15 ದಿವಸ ಹಾಗೂ ಸೈಕಲ್ ಜಾಥಾ, ಬೆಳಗಾವಿ ಸುವರ್ಣ ಸೌಧದ ಮುಂಭಾಗ ಪ್ರತಿಭಟನೆ, ಕಲ್ಬುರ್ಗಿ, ಕೋಲಾರ, ದಾವಣಗೆರೆಯಲ್ಲಿ ಬೃಹತ್ ಸಮಾವೇಶ ನಡೆಸಿ ಮನವಿ ಮಾಡಿದರೂ ಸರ್ಕಾರ ನಮ್ಮ ಮನವಿಗೆ ಸ್ಪಂದಿಸುತ್ತಿಲ್ಲ ಎಂದು ಆಕ್ರೋಶ ಹೊರಹಾಕಿದರು.

ಬಸ್ ಸಂಚಾರ ಸ್ಥಗಿತ: ಪ್ರತಿಭಟನೆಯ ಹಿನ್ನೆಲೆಯಲ್ಲಿ ಮಾ.24ರಿಂದ ರಾಜ್ಯಾದ್ಯಂತ ಕೆಎಸ್‌ಆರ್‌ಟಿಸಿ ಬಸ್ಸುಗಳ ಸಂಚಾರ ಸಂಪೂರ್ಣ ಸ್ಥಗಿತಗೊಳಿಸಲಾಗುವುದು. ನಮ್ಮ ಬೇಡಿಕೆ ಈಡೇರದ ಹೊರತು ಯಾವುದೇ ಕಾರಣಕ್ಕೂ ಬಸ್ಸುಗಳ ಸಂಚಾರವನ್ನೂ ಆರಂಭಿಸದಿರಲು ತೀರ್ಮಾನಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ಬಸ್ಸುಗಳ ಸಂಚಾರ ಸ್ಥಗಿತಗೊಳ್ಳುವುದರಿಂದ ಸಂಚಾರ ಅಸ್ತವ್ಯಸ್ತಗೊಂಡು ಪ್ರಮಾಣಿಕರು ಪರದಾಡುವ ಸ್ಥಿತಿ ನಿರ್ಮಾಣವಾಗುವ ಸಾಧ್ಯತೆ ಇದೆ.

ನೃತ್ಯಾಲಯ ಟ್ರಸ್ಟ್‌ನಿಂದ ವಿವಿಧ ಕ್ಷೇತ್ರ ಸಾಧಕರಿಗೆ ಸನ್ಮಾನ



ಮೈಸೂರು, ಮಾ.5(ಎಸ್‌ಪಿಎನ್)– ವಿವಿಧ ಕಲಾ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಡಾ.ರಮಾ ವಿ.ಬೆನ್ನೂರು(ಸಾಹಿತ್ಯ) ಭರತನಾಟ್ಯದಿಂದ ವಿದುಷಿ ಲಕ್ಷ್ಮೀ ಕುಮಾರ್, ಗಮಕ ಕ್ಷೇತ್ರದಿಂದ ವಿದುಷಿ ಧರಿತ್ರಿ ಆನಂದರಾವ್ ಅವರನ್ನು ಬೆಂಗಳೂರು ಅನನ್ಯ ಜಿಎಂಎಲ್ ಸಾಂಸ್ಕೃತಿಕ ಅಕಾಡೆಮಿಯ ವ್ಯವಸ್ಥಾಪಕ ಟ್ರಸ್ಟಿ ಡಾ.ಆರ್.ವಿ.ರಾಘವೇಂದ್ರ ಶನಿವಾರ ಆತ್ಮೀಯವಾಗಿ ಸನ್ಮಾನಿಸಿದರು.

ಮೈಸೂರು ಕುವೆಂಪುನಗರ ಆದಿಚುಂಚನಗಿರಿ ರಸ್ತೆಯ ಗಾನಭಾರತೀ ಸಭಾಂಗಣದಲ್ಲಿ ನೃತ್ಯಾಲಯ ಟ್ರಸ್ಟ್ ಮತ್ತು ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯದ ಸಹಕಾರದೊಂದಿಗೆ ಆಯೋಜಿಸಿದ್ದ 'ನಲಿವಿನ ಪಯಣ–44' ಹರಿದಾಸ ಸಾಹಿತ್ಯ ಸಂಗೀತ ನೃತ್ಯ ವೈಭವದ ಎರಡು ದಿನಗಳ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಿದರು.

ನಂತರ ಮಾತನಾಡಿದ ಅವರು, ಭಾರತ ವೈವಿಧ್ಯಮಯ ಕಲೆ, ಪರಂಪರೆ ಹೊಂದಿರುವ ದೇಶ. ಇಲ್ಲಿನ ಕಲೆಗಳಾದ ಸಂಗೀತ, ನೃತ್ಯ, ಚಿತ್ರಕಲೆ ಸೇರಿದಂತೆ ಇತರೆ ಕಲೆಗಳ ಬಗ್ಗೆ ಮಕ್ಕಳಲ್ಲಿ ಆಸಕ್ತಿ ಮೂಡಿಸಬೇಕು. ಆ ಕೆಲಸವನ್ನು ಮೈಸೂರು ಅನೇಕ ಸಂಘ–ಸಂಸ್ಥೆಗಳು ನಿರತವಾಗಿವೆ. ಈ ಸಾಲಿನಲ್ಲಿ ನೃತ್ಯಾಲಯ ಟ್ರಸ್ಟ್ ಮೊದಲ ಸ್ಥಾನದಲ್ಲಿದೆ ಎಂದರೆ ತಪ್ಪಾಗಲಾರದು ಎಂದರು. ಚಿಕ್ಕ ವಯಸ್ಸಿನ ಮಕ್ಕಳು ತಾವು ಇಷ್ಟಪಟ್ಟ ಆಟ–ಪಾಠ ಕಲಿಯಲು ಸ್ವತಂತ್ರರು. ಇದರ ನಡುವೆಯೂ ಶಾಸ್ತ್ರೀಯ ಸಂಗೀತ ಮತ್ತು ಭರತ ನಾಟ್ಯ ಕಲಿಕೆಗೆ ನೃತ್ಯಾಲಯ ಟ್ರಸ್ಟ್ ಸದಸ್ಯರು ಹೆಚ್ಚಿನ ಆಸಕ್ತಿವಹಿಸುತ್ತಿರುವುದು ಮೆಚ್ಚುಗೆಯ ಸಂಗತಿ. ಸಂಗೀತ, ಕಲೆ, ನಾಟಕ ಇತರೆ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಮಕ್ಕಳು ಮೊದಲೆರಡು ವರ್ಷ ಕಲಿಕೆಯಲ್ಲಿ ಆಸಕ್ತಿ ತೋರುತ್ತಾರೆ. ಕ್ರಮೇಣ ಬೇರೆ ಬೇರೆ ಕಾರಣಕ್ಕಾಗಿ ಕಲಿಕೆಯಿಂದ ಹಿಂದೆ ಸರಿಯುತ್ತಿರುವುದು ಬೇಸರದ ಸಂಗತಿ ಎಂದು ತಿಳಿಸಿದರು.

ಈ ವೇಳೆ ನೃತ್ಯಾಲಯ ಟ್ರಸ್ಟ್‌ನ ಅಧ್ಯಕ್ಷ ಡಾ.ತುಳಸಿ ರಾಮಚಂದ್ರ, ಉಪಾಧ್ಯಕ್ಷ ಪ್ರೀತಿ ಶ್ರೀಕಾಂತ್, ಕಾರ್ಯದರ್ಶಿ ಸತೀಶ್ ಸುಬ್ರಹ್ಮಣ್ಯ, ಖಜಾಂಚಿ ಉಷಾ ಪಂಚನಂದನ್ ಸೇರಿದಂತೆ ಇತರರಿದ್ದರು.

'ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ' ಕುರಿತು ವಿದ್ಯಾರ್ಥಿಗಳು ಅಧ್ಯಯನ ನಡೆಸಬೇಕು

ಕಲ್ಬುರ್ಗಿ ವಿವಿ ವಿಶ್ರಾಂತ ಕುಲಪತಿ ಪ್ರೊ.ಎಸ್.ಆರ್.ನಿರಂಜನ್ ಅಭಿಮತ



ಮೈಸೂರು, ಮಾ.5(ಎಸ್‌ಪಿಎನ್)–ಈಗಾಗಲೇ ಜಾರಿಗೊಂಡಿರುವ 'ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ'(2006) ಕುರಿತು ಸ್ನಾತಕೋತ್ತರ ವಿದ್ಯಾರ್ಥಿಗಳು ಸಾಧಕ–ಬಾದಕಗಳ ಕುರಿತು ಸಮಗ್ರ ಅಧ್ಯಯನ ನಡೆಸಬೇಕು ಎಂದು ಕಲ್ಬುರ್ಗಿ ವಿವಿಯ ವಿಶ್ರಾಂತ ಕುಲಪತಿ ಪ್ರೊ.ಎಸ್.ಆರ್.ನಿರಂಜನ್ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ಸಸ್ಯಶಾಸ್ತ್ರ ಅಧ್ಯಯನ ವಿಭಾಗ ಮತ್ತು ಎಐಸಿಟಿಇ ತರಬೇತಿ ಮತ್ತು ಕಲಿಕಾ(ಎಟಿಎಎಲ್) ಅಕಾಡೆಮಿ ಸಹಯೋಗದೊಂದಿಗ ಆಯೋಜಿಸಿದ್ದ 'ಜೀವ ವೈವಿಧ್ಯ ಸಂರಕ್ಷಣೆ ಮತ್ತು ಕೃಷಿ ಬೆಳೆಗಳ ರಕ್ಷಣೆಗಾಗಿ ಹೊಸ ತಂತ್ರಗಳು' ಕುರಿತು ಆಯೋಜಿಸಿದ್ದ ವಿಚಾರ ಗೋಷ್ಠಿಯ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ನಮ್ಮ ದೇಶದ ಕಟ್ಟಕಡೆಯ ವ್ಯಕ್ತಿಯು ಹಸಿವಿನಿಂದ ಬಳಬಾರದು ಎಂಬ ಆಶಯದೊಂದಿಗೆ ಕೇಂದ್ರ ಸರ್ಕಾರ, ಅನೇಕ ತಜ್ಞರ ಸಲಹೆ ಪಡೆದು 2006ರಲ್ಲಿ 'ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ'ಯನ್ನು ಜಾರಿಗೊಳಿಸಿತು. ಅದೇ ರೀತಿ ಆರ್ಥಿಕವಾಗಿ ಹಿಂದುಳಿದ ವರ್ಗದ ಮಕ್ಕಳು ಪ್ರಾಥಮಿಕ ಶಿಕ್ಷಣದಿಂದ ವಂಚಿತವಾಗಬಾರದು ಎಂಬ ಸದುದ್ದೇಶದಿಂದ 'ರಾಷ್ಟ್ರೀಯ ಕಡ್ಡಾಯ ಶಿಕ್ಷಣ ನೀತಿ'ಯನ್ನು ಜಾರಿಗೊಳಿಸಿತು. ಈ ನೀತಿಗಳು ನಮ್ಮ ದೇಶ ಜಿಡಿಪಿ ಬೆಳವಣಿಗೆಗೆ ಹಾಗೂ ಸಂಶೋಧನಾವಲಯದ ಯೋಚನಾ ಲಹರಿಯನ್ನು ಬದಲಿಸುವ ಕುರಿತು ಗಮನಾರ್ಹ ಬೆಳವಣಿಗೆಗೆ ನಾಂಧಿಯಾಯಿತು ಎಂದರು.

ಅಂತೆಯೇ ಆಹಾರ ಕ್ಷೇತ್ರದಲ್ಲಿ ಗಮನಾರ್ಹ ಬದಲಾವಣೆಗೂ ಒತ್ತು ನೀಡುವ ಅಂಶವೂ 'ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ'ಯಲ್ಲಿ ಸೇರಿಕೊಂಡಿದೆ. ಇಂತಹ ಮಹತ್ವ ಕಾಯ್ದೆ ಕುರಿತು ಕೃಷಿ, ಆರೋಗ್ಯ, ವಿಜ್ಞಾನ ಹಾಗೂ ಮಾನವಿಕ ವಿಭಾಗದ ವಿವಿಧ ವಿಷಯಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಅಧ್ಯಯನಕ್ಕೆ ಮುಂದಾಗಬೇಕು ಎಂದು ಸಲಹೆ ನೀಡಿದರಲ್ಲದೆ, ಇಂತಹ ಮೌಲಿಕ ಚರ್ಚೆಗಳ ಮೂಲಕ ಬೌದ್ಧಿಕ ವಲಯ ಅಭಿವೃದ್ಧಿಗೂ ಹೆಚ್ಚಿನ ಆದ್ಯತೆ ಸಿಗುತ್ತದೆ ಎಂದು ಹೇಳಿದರು.

ಉನ್ನತ ಶಿಕ್ಷಣದಲ್ಲಿ ಜೈವಿಕ ತಂತ್ರಜ್ಞಾನದ ಅಭಿವೃದ್ಧಿ ಕರಿತು ಚರ್ಚೆ ಮುಂದಾದರೆ, ಇದು ಈ ದೇಶದ ಜಿಡಿಪಿ ಹಾಗೂ ದೇಶದ ಪ್ರಗತಿಗೆ, ಸಂಶೋಧನಾವಲಯದತ್ತ ನೋಟ ಬೀರುತ್ತದೆ. ಅಂತೆಯೇ ವಾಣಿಜ್ಯ ಮತ್ತು ಕೈಗಾರಿಕೋದ್ಯಮಿಗಳು ಇದರತ್ತ ಗಮನಹರಿಸುತ್ತಾರೆ. ಈ ಕಾಯ್ದೆ ಜಾರಿಯಿಂದ ರಾಷ್ಟ್ರೀಯ ತೋಟಗಾರಿಕೆ, ಕೃಷಿ, ಜೈವಿಕ ತಂತ್ರಜ್ಞಾನ ವಿಭಾಗದಲ್ಲಿ ಹೊಸ ವಿವಿಗಳ ಸ್ಥಾಪನೆಗೆ ನಾಂದಿಯಾಯಿತು. ಅಂದರೆ, ಈ ವಿವಿಗಳ ಮೂಲಕ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಸಾಕಷ್ಟು ಉತ್ತೇಜನ ನೀಡುತ್ತಿದೆ ಎಂದರ್ಥ ಎಂದರು.

ಅಲ್ಲದೆ ಕೃಷಿ ಕ್ಷೇತ್ರದಲ್ಲಿ ಹೊಸ ಹೊಸ ಆವಿಷ್ಕಾರಗಳು ನಡೆದರೆ, ನಮ್ಮ ದೇಶದ ಬಡ ರೈತನಿಗೆ ಆಗುವ ಏನು ಪ್ರಯೋಜನ ಎಂದು ಕೆಲವರು ಚಿಂತಕರು, ಸಾರ್ವಜನಿಕ ಚರ್ಚೆ ಹುಟ್ಟುಹಾಕುತ್ತಾರೆ. ಈ ಅಂಶಗಳು ಸಂಸತ್‌ನಲ್ಲಿ, ಸಾರ್ವಜನಿಕ ವೇದಿಕೆಗಳಲ್ಲಿ ಜನಪ್ರತಿನಿಧಿಗಳು ಚರ್ಚಿಸಲು ಆರಂಭಿಸಿದರೆ, ದೇಶದ ವ್ಯವಹಾರ ಕ್ಷೇತ್ರ, ಜಿಡಿಪಿ, ಸಂಶೋಧನಾ ಕ್ಷೇತ್ರ ಗಮನಹರಿಸಲು ಸಾಧ್ಯವಾಗುತ್ತಿದೆ ಎಂದರು.

ಈ ವೇಳೆ ಮೈಸೂರು ವಿವಿ ಪ್ರಭಾರ ಕುಲಪತಿ ಪ್ರೊ.ಮುಜಾಫರ್ ಅಸಾದಿ, ಪ್ರೊ.ಎಂ.ವೈ.ಶ್ರೀವತ್ಸ, ಪ್ರೊ.ಹೆಚ್.ಟಿ.ಬಸವರಾಜಪ್ಪ, ಪ್ರೊ.ಕೆ.ಎನ್.ಅಮೃತೇಶ್, ಪ್ರೊ.ನಳಿನಿ ಸೇರಿದಂತೆ ಇತರೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಶನಿ ಮಹಾ ಶಾಂತಿ

ಮೈಸೂರು, ಮಾ.5– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಮಾ.7ರಂದು ಹೋಳಿ ಹುಣ್ಣಿಮೆ ಪ್ರಯುಕ್ತ ಕರ್ಕಾಟಕ, ತುಲಾ, ಮಕರ, ಕುಂಭ, ಮೀನ ರಾಶಿಯವರಿಗೆ ಶನಿಮಹಾಶಾಂತಿ ಹಾಗೂ ಬಾದಾ ನಿವಾರಕ ಮಹಾ ಸುದರ್ಶನ ಹೋಮ ಉತ್ತಮ ಆರೋಗ್ಯ ಕ್ಕೆ ಮಹಾ ಮೃತ್ಯುಂಜಯ ಹೋಮ ಮತ್ತು ಶ್ರೀ ಸತ್ಯನಾರಾಯಣ ಪೂಜೆ ಏರ್ಪಡಿಸಲಾಗಿದೆ. ಪ್ರತಿಯೊಬ್ಬರಿಗೂ ಪ್ರತ್ಯೇಕವಾಗಿ ಸಂಕಲ್ಪ ಮಾಡಿಸಲಾಗುತ್ತದೆ. ಬೆಳಿಗ್ಗೆ 10.30ಕ್ಕೆ ಆರಂಭ, 12.30ಗೆ ಮಹಾ ಪೂರ್ಣಾಹುತಿ. ಹೆಚ್ಚಿನ ವಿವರಗಳಿಗೆ ಮೈ ಕುಮಾರ್ ಜಾತಕ ವಿಮರ್ಶಕರು 9845183399 9845183392 ಸಂಪರ್ಕಿಸಬಹುದು



ಕೊಡಗು ಜಿಲ್ಲೆಯ ಕೆಲವೆಡೆ ಕಾಡ್ಗಿಚ್ಚು

ನಾಪೋಕ್ಲು, ವಾಟೇಕಾಡು, ದುಬಾರೆ ಕಾಡಿನಲ್ಲಿ ಅರಣ್ಯ ಪ್ರದೇಶ, ಕುರುಚಲು ಕಾಡು ಭಸ್ಮ

ನಾಪೋಕ್ಲು/ಕುಶಾಲನಗರ, ಮಾ.5– ಜಿಲ್ಲೆಯ ಕೆಲವು ಭಾಗಗಳಲ್ಲಿ ಕಾಡ್ಗಿಚ್ಚು ಕಾಣಿಸಿಕೊಂಡಿದ್ದು, ಅಲ್ಲಲ್ಲಿ ಅರಣ್ಯ ಪ್ರದೇಶ ಮತ್ತು ಕುರುಚಲು ಕಾಡು ಭಸ್ಮವಾಗಿದ್ದು, ಅಪಾರ ಪ್ರಮಾಣದ ಹಾನಿ ಸಂಭವಿಸಿದೆ. ಆದರೆ ವನ್ಯಜೀವಿಗಳಿಗೆ ಯಾವುದೇ ರೀತಿಯ ಪ್ರಾಣಹಾನಿ ಆಗಿಲ್ಲ ಎಂದು ಅರಣ್ಯ ಇಲಾಖೆ ಮೂಲಗಳು ಸ್ಪಷ್ಟಪಡಿಸಿದೆ



ನಾಪೋಕ್ಲು: ಸಮೀಪದ ಕಕ್ಕಬ್ಬೆ ವ್ಯಾಪ್ತಿಯ ಇಗ್ಗುತಪ್ಪ ಬೆಟ್ಟದಲ್ಲಿ ಕಾಣಿಸಿಕೊಂಡಿದ್ದ ಬೆಂಕಿ ವ್ಯಾಪಕವಾಗಿ ಹಬ್ಬಿದ್ದು, ಭಾನುವಾರ ತಹಬದಿಗೆ ತರಲಾಯಿತು. ಶುಕ್ರವಾರ ಸಂಜೆ ಹೊತ್ತಿಗೆ ಮಲ್ಮ ಬೆಟ್ಟ ಶ್ರೇಣಿಯಲ್ಲಿ ಉರಿಯುತ್ತಿದ್ದ ಬೆಂಕಿ ರಾತ್ರಿ ಹೊತ್ತಿಗೆ ಸುತ್ತಮುತ್ತಲ ಪ್ರದೇಶಗಳಿಗೆ ಹರಡಿದ್ದು, ನೂರಾರು ಎಕರೆ ಪ್ರದೇಶ ಬೆಂಕಿಗೆ ಆಹುತಿಯಾಗಿದೆ.

ಭಾಗಮಂಡಲ ವಲಯ ಅರಣ್ಯಾಧಿಕಾರಿ ಇಲಾಖೆ ಸಿಬ್ಬಂದಿಯೊಂದಿಗೆ ಬೆಂಕಿ ನಂದಿಸಲು ಶ್ರಮಿಸಿದರು. ಭಾನುವಾರ ಬೆಂಕಿ ನಿಯಂತ್ರಣಕ್ಕೆ ಬಂತು. ಭಾಗಮಂಡಲ ವಲಯ ಅರಣ್ಯಾಧಿಕಾರಿ ರವೀಂದ್ರ. ಟಿ.ಯ೦ ಮತ್ತು ಸಿಬ್ಬಂದಿಗಳು ಶ್ರಮಿಸಿ ಬೆಂಕಿಯನ್ನು ತಹಬದಿಗೆ ತಂದರು.

ವಾಟೆಕಾಡಿನಲ್ಲಿ ಬೆಂಕಿ: ಸಮೀಪದ ವಾಟೆಕಾಡು ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಅಲ್ಲಿನ ನಿವಾಸಿ ಮುಕ್ಕಾಟಿರ ವಿನು ಬೆಳ್ಯಪ್ಪ ಅವರ ಅಡಿಕೆ ತೋಟ ಹಾಗೂ ಕಾಫಿ ತೋಟ ಬೆಂಕಿಗೆ ಆಹುತಿಯಾಗಿ ನಷ್ಟ ಸಂಭವಿಸಿದೆ. ಅಗ್ನಿಶಾಮಕ ಪಡೆಯ ಸಿಬ್ಬಂದಿ ಸ್ಥಳೀಯರ ನೆರವಿನೊಂದಿಗೆ ಬೆಂಕಿ ನಂದಿಸಲಾಯಿತು.

ಕುಶಾಲನಗರ: ತಾಲೂಕಿನ ನಂಜರಾಯಪಟ್ಟಣ ಬಳಿಯ ಪ್ರವಾಸಿ ತಾಣ ದುಬಾರೆ ಸಾಕಾನೆ ಶಿಬಿರದ ಅರಣ್ಯ ಪ್ರದೇಶದಲ್ಲಿ ಶನಿವಾರ ಕಾಡ್ಗಿಚ್ಚು ಕಾಣಿಸಿಕೊಂಡು ಬೆಂಕಿಯ ಕೆನ್ನಾಲಿಗೆಗೆ ಹತ್ತಾರು ಎಕರೆ ಪ್ರದೇಶ ಸುಟ್ಟು ಹೋಗಿದೆ. ದುಬಾರೆ ಶಿಬಿರದಿಂದ ಸುಮಾರು 6 ಕಿಲೋಮೀಟರ್ ದೂರದಲ್ಲಿ ಕಾಣಿಸಿಕೊಂಡಿದ್ದ ಬೆಂಕಿ ಶರವೇಗದಲ್ಲಿ ಹರಡಿದ ಪರಿಣಾಮ ಹತ್ತಾರು ಎಕರೆ ಅರಣ್ಯ ಪ್ರದೇಶ ಸುಟ್ಟು ಹೋಗಿದೆ. ಅರಣ್ಯ ಸಿಬ್ಬಂದಿಗಳು ಹಾಗೂ ಅಗ್ನಿಶಾಮಕ ದಳ ಸಿಬ್ಬಂದಿಗಳು ನಿರಂತರ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ದುಬಾರೆ ಅರಣ್ಯದಲ್ಲಿ ನಿನ್ನೆ ಕಾಡ್ಗಿಚ್ಚು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಇಂದು ದುಬಾರೆ ಆನೆ ಶಿಬಿರಕ್ಕೆ ಪ್ರವಾಸಿಗರ ಪ್ರವೇಶ ನಿಷೇಧಿಸಲಾಗಿದೆ.ದೂರದ ಊರಿಂದ ದುಬಾರೆ ಆನೆ ಶಿಬಿರಕ್ಕೆ ಆಗಮಿಸಿದ ಪ್ರವಾಸಿಗರಿಗೆ ನಿರಾಶೆ ಉಂಟಾಯಿತು. ಆನೆ ಶಿಬಿರ ತಾತ್ಕಾಲಿಕ ಬಂದ್ ಮಾಡಲಾಗಿದೆ ಎಂದು ವಲಯ ಅರಣ್ಯಾಧಿಕಾರಿ ಶಿವರಾಮ್ ತಿಳಿಸಿದ್ದಾರೆ.

ಕೊಡವ ಮಹಿಳೆಯರ ಸಬಲೀಕರಣಕ್ಕಾಗಿ ಒತ್ತಾಯಿಸಿ ಮಾ.8ಕ್ಕೆ ಸಿಎನ್‌ಸಿ ಪ್ರತಿಭಟನೆ

ಮಡಿಕೇರಿ, ಮಾ.5– ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ದಿನವಾದ ಮಾ.8ರಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಕೊಡವ ಮಹಿಳೆಯರ ಸಬಲೀಕರಣಕ್ಕಾಗಿ ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ ಹಕ್ಕೊತ್ತಾಯಗಳನ್ನು ಮಂಡಿಸಲಾಗುವುದು ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು ಬುಧವಾರ ಬೆಳಗೆ 10.30 ಗಂಟೆಗೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಕೊಡವ ಮಹಿಳೆಯರ ಪರವಾಗಿ ಹಕ್ಕೊತ್ತಾಯಗಳನ್ನು ಮಂಡಿಸಿ ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಲಾಗುವುದು ಎಂದು ಹೇಳಿದ್ದಾರೆ. ಅತ್ಯಂತ ಸೂಕ್ಷ್ಮ ಕೊಡವ ಬುಡಕಟ್ಟು ಜನಾಂಗದ ಮಹಿಳೆಯರಿಗೆ ಸಂವಿಧಾನದತ್ತವಾದ ಹಕ್ಕುಗಳನ್ನು ನೀಡಬೇಕು. ಸ್ವಾಯತ್ತ ಕೊಡವ ಲ್ಯಾಂಡ್ ಘೋಷಿಸಬೇಕು, ನೆಲ, ಜಲ, ಭಾಷೆ, ಸಂಸ್ಕೃತಿ, ಪರಂಪರೆ, ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯದೊಂದಿಗೆ ಸಾಂವಿಧಾನಿಕ ಭದ್ರತೆಯನ್ನು ಖಾತ್ರಿಪಡಿಸಬೇಕು. ಆಂತರಿಕ ರಾಜಕೀಯ ಸ್ವ–ನಿರ್ಣಯದ ಹಕ್ಕುಗಳನ್ನು ನೀಡಬೇಕು. ಕೊಡವರ ಜನ್ಮಸಿದ್ಧ ಹಕ್ಕಾಗಿರುವ ಕೋವಿ ಹೊಂದುವ ವಿನಾಯಿತಿಯನ್ನು ಶಾಶ್ವತಗೊಳಿಸಬೇಕು. ಆ ಮೂಲಕ ಆಡಳಿತ ವ್ಯವಸ್ಥೆಗಳು ಕೊಡವ ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡಬೇಕೆಂದು ಒತ್ತಾಯಿಸುವುದಾಗಿ ನಾಚಪ್ಪ ತಿಳಿಸಿದ್ದಾರೆ.

ನಾಳೆಯಿಂದ ಭಗವತಿ ದೇವಸ್ಥಾನದ ವಾರ್ಷಿಕ ಉತ್ಸವ

ಗೋಣಿಕೊಪ್ಪ, ಮಾ.5– ಚಿಕ್ಕಮುಂಡೂರು ಗ್ರಾಮದ ಭಗವತಿ ದೇವಸ್ಥಾನದ ವಾರ್ಷಿಕ ಉತ್ಸವ ಮಾ.7 ರಿಂದ ಮಾರ್ಚ್ 11 ವರೆಗೆ ನಡೆಯಲಿದೆ ಎಂದು ದೇವಸ್ಥಾನದ ಆಡಳಿತ ಮಂಡಳಿ ಪ್ರಕಟಣೆ ತಿಳಿಸಿದೆ.

ಮಾ.6 ರಂದು ಕೊಡಿಮರ ನಿಲ್ಲಿಸುವುದರ ಮೂಲಕ ಉತ್ಸವಕ್ಕೆ ಚಾಲನೆ ಸಿಗಲಿದೆ. 7 ರಂದು ಬೆಳಗ್ಗೆ 7 ಗಂಟೆಗೆ ಗಣಹೋಮ, ತತ್ವಕಲಶ, ಧ್ವಜರೋಹಣ, ಪ್ರತಿಷ್ಠಾ ಹೋಮ, ಮಹಾಪೂಜೆ ನಡೆಯಲಿದೆ. ಮಾ.8ರಂದು ಬೆಳಗ್ಗೆ 6 ಗಂಟೆಯಿಂದ ಕಲಶ ಪೂಜೆ, ದುರ್ಗಾಹೋಮ, ಮಹಾಪೂಜೆ, ಸಂಜೆ ತೂಚಂಬಲಿ, ಆದಿಬಳಕು ನಡೆಯಲಿದೆ. ಮಾ.9 ರಂದು ಬೆಳಗ್ಗೆ 5 ಗಂಟೆಯಿಂದ ಇರುಬಳಕು, ನೃತ್ಯಬಲಿ, ಮಧ್ಯಾಹ್ನ ಹರಕೆ ಬಳಕು, ಸಂಕಲ್ಪ, ಸ್ವಯಂವರ, ಪಾರ್ವತಿ ಹೋಮ ನಡೆಯಲಿದೆ.

ಮಾ.10 ರಂದು ಬೆಳಗ್ಗೆ 5 ಗಂಟೆಗೆ ನೆರಪುಕಟ್ಟು, ಆಶ್ಲೇಷಬಲಿ, ನಾಗತಂಬಿಲ, ತೆಂಗಿನಕಾಯಿಗೆ ಗುಂಡು, ಸಂಜೆ 4 ಗಂಟೆಗೆ ಎತ್ತು ಹೋರಾಟ, ದೇವರ ನೆರಪುಬಲಿ, ಅಯ್ಯಪ್ಪ ದೇವರ ಬೇಟೆ, ದೇವಸ್ಥಾನದಲ್ಲಿ ದೇವರ ನೃತ್ಯ ಬಲಿ ನಡೆಯಲಿದೆ. ಮಾ.11 ರಂದು ಬೆಳಗ್ಗೆ 7 ಗಂಟೆಗೆ ಕವಾಟೋದ್ಘಾಟನೆ, ಎಳನೀರು ಅಭಿಷೇಕ, ಮಹಾಪೂಜೆ, ಸಂಜೆ 5 ಗಂಟೆಗೆ ದೇವರು ಅವಭೃತ ಸ್ಥಾನಕ್ಕೆ ಹೊರಡುವುದು. 6.45ರಿಂದ ದೇವರ ಅವಭೃತ ಸ್ಥಾನ ಪೂಜೆ ಮತ್ತು ಮಹಾಪೂಜೆಗಳು ನಡೆಯಲಿದೆ.



ಒಂದೇ ಬುಡದಲ್ಲಿ ಐದು ಮೊಟ್ಟೆಗೋಸ್!

ಗುಡ್ಡೆಹೊಸೂರು, ಮಾ.5– ಇಲ್ಲಿನ ಕಾವೇರಿ ತರಕಾರಿ ಅಂಗಡಿಯಲ್ಲಿ ವ್ಯಾಪಾರಕ್ಕಾಗಿ ಖರೀದಿ ಸಿದ್ದ ತರಕಾರಿಯಲ್ಲಿ ಒಂದೇ ಗೆಡ್ಡೆಯಲ್ಲಿ ಐದು ಗೆಡ್ಡೆಗಳಿರುವ ಕೋಸುಗಳು ಪತ್ತೆಯಾಗಿದ್ದು ವಿಶೇಷವಾಗಿದೆ.

ಕಾರು ಪಲ್ಟಿ: ಹಲವರಿಗೆ ಗಾಯ



ನಾಪೋಕ್ಲು, ಮಾ.5– ಪಾದಚಾರಿಯೊಬ್ಬರಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲೆತ್ನಿಸಿದ ವೇಳೆ ಕಾರೊಂದು ಪಲ್ಟಿಯಾದ ಪರಿಣಾಮ ಹಲವರು ಗಾಯಗೊಂಡಿರುವ ಘಟನೆ ಇಲ್ಲಿಗೆ ಸಮೀಪದ ಬೊಳಿಬಾಣೆ ಎಂಬಲ್ಲಿ ಸಂಭವಿಸಿದೆ. ಕೊಳಕೇರಿಯ ಕಾರೊಂದರಲ್ಲಿ ಕೆಲವರು ಪ್ರಯಾಣಿಸುತ್ತಿದ್ದರು ಎನ್ನಲಾಗಿದೆ. ಈ ವೇಳೆ ಪಾದಚಾರಿಯೊಬ್ಬರು ಅಡ್ಡ ಬಂದಿದ್ದಾರೆ. ಅವರಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಯತ್ನಿಸಿದಾಗ ಈ ಘಟನೆ ಸಂಭವಿಸಿದೆ. ಎಲ್ಲರೂ ಸಣ್ಣಪುಟ್ಟ ಗಾಯಗಳಾಗಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ನ್ಯಾಯಾಧೀಶರು, ವಕೀಲರು ನಾಣ್ಯದ ಎರಡು ಮುಖಗಳಿದ್ದಂತೆ

ನ್ಯಾಯಮೂರ್ತಿ ದಿ. ಚಿಣ್ಣಪ್ಪ ಸ್ಮರಣಾರ್ಥ ಉಪನ್ಯಾಸ



ವಿರಾಜಪೇಟೆ, ಮಾ.5– ನ್ಯಾಯಾಧೀಶರು, ವಕೀಲರು ಮತ್ತು ನ್ಯಾಯಾಂಗ ಸಿಬ್ಬಂದಿಗಳು ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸಿದಾಗ ಮಾತ್ರ ಜನಸಾಮಾನ್ಯರಿಗೆ ನ್ಯಾಯ ದೊರಕಿಸಲು ಸಾಧ್ಯ ಎಂದು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಎ.ಎಸ್.ಬೋಪಣ್ಣ ತಿಳಿಸಿದ್ದಾರೆ.

ವಿರಾಜಪೇಟೆ ವಕೀಲರ ಸಂಘದ ಆಶ್ರಯದಲ್ಲಿ ತ್ರಿವೇಣಿ ಶಾಲಾ ಜಿಮ್ಮಿ ಕಲಾ ವೇದಿಕೆ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ನ್ಯಾಯಮೂರ್ತಿ ದಿವಂಗತ ಎಂ.ಪಿ.ಚಿಣ್ಣಪ್ಪ ಅವರ ಸ್ಮರಣಾರ್ಥ ಉಪನ್ಯಾಸದಲ್ಲಿ ನ್ಯಾಯ ವಿತರಣೆಯಲ್ಲಿ ನ್ಯಾಯಾಧೀಶರು ಮತ್ತು ನ್ಯಾಯಾವಾದಿಗಳ ಪಾತ್ರ ಎಂಬ ವಿಷಯದ ಬಗ್ಗೆ ಮಾತನಾಡುತ್ತಿದ್ದ ಅವರು ದಿವಂಗತ ಎಂ.ಪಿ.ಚಿಣ್ಣಪ್ಪ ಅವರು ಕೊಡಗಿನ ಜಿಲ್ಲಾ ನ್ಯಾಯಾಧೀಶರಾಗಿ ನೇರವಾಗಿ ಉಚ್ಚ ನ್ಯಾಯಾಲದಿಂದ ನೇಮಕವಾದ ಪ್ರಥಮ ವ್ಯಕ್ತಿ, ಅವರ ಶ್ರಮ, ಸರಳತೆ, ಶಿಸ್ತು ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯುತ್ತದೆ ಎಂದರು.

ಅವರ ನೆನಪಿನಾರ್ಥ ನಡೆಯುತ್ತಿರುವ ಉಪನ್ಯಾಸದಲ್ಲಿ ಭಾಗಿಯಾಗಿರುವುದು ನನ್ನ ಭಾಗ್ಯ ಎಂದ ನ್ಯಾಯಮೂರ್ತಿ ಎ.ಎಸ್.ಬೋಪಣ್ಣ ಅವರು, ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ನಮ್ಮ ಪ್ರಜಾಪ್ರಭುತ್ವದ ಸ್ಥಂಭಗಳು. ನ್ಯಾಯಾಧೀಶರು ಮತ್ತು ವಕೀಲರು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ನ್ಯಾಯಾಂಗ ಗೌರವವನ್ನು ಕಾಪಾಡುವ ಹೊಣೆ ತನ್ನಲ್ಲಿರುವುದರಿಂದಲೇ ವಕೀಲರನ್ನು ನ್ಯಾಯಾಲಯದ ಅಧಿಕಾರಿ ಎಂದು ಗುರುತಿಸಿ ವ್ಯವಹರಿಸುತ್ತೇವೆ ಎಂದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಪ್ರಸನ್ನ ಬಿ.ವರಾಲೆ ಅವರು ಮಾತನಾಡಿ, ವಿರಾಜಪೇಟೆ ವಕೀಲರ ಸಂಘದಿಂದ ನ್ಯಾಯಾಧೀಶರಾದ ದಿವಂಗತ ಎಂ.ಪಿ.ಚಿಣ್ಣಪ್ಪ ಅವರ ಸ್ಮರಣಾರ್ಥ ಉಪನ್ಯಾಸ ಆಯೋಜಿಸಿ ರುವುದು ಉತ್ತಮ ಕಾರ್ಯ. ಚಿಣ್ಣಪ್ಪ ಅವರ ಮಕ್ಕಳು ತಂದೆಯಂತೆ ಉತ್ತಮ ಗುಣವಂತರಾಗಿದ್ದಾರೆ ಎಂದರಲ್ಲದೆ ವಕೀಲರ ಸಂಘ ಉತ್ತಮ ಪ್ರತಿಭೆಗಳನ್ನು ಗುರುತಿಸಿ ಸನ್ಮಾನಿಸಿ ಗೌರವಿಸುತ್ತಿರುವುದು ಶ್ಲಾಘನೀಯ ಎಂದರು.

ಉಚ್ಚ ನ್ಯಾಯಾಲಯದ ನ್ಯಾಯಾಧೀಶ ಎಂ.ಜಿ.ಶುಕೂರೆ ಕಮಾಲ್ ಮಾತನಾಡಿ, ನ್ಯಾಯಾಧೀಶರಾದ ದಿವಂಗತ ಎಂ.ಪಿ. ಚಿಣ್ಣಪ್ಪ ಅವರು ಉತ್ತುಂಗ ಸ್ಥಾನಕ್ಕೇರಿದ್ದರು. ಅವರ ಆದರ್ಶಗಳನ್ನು ನಾವೆಲ್ಲರೂ ಪಾಲಿಸುವಂತಾಗಬೇಕು. ವಿರಾಜಪೇಟೆಯಲ್ಲಿ ಇಂದು ಭೂಮಿಪೂಜೆ ನೆರವೇರಿಸಿರುವ ನ್ಯಾಯಾಲಯ ಸಂಕೀರ್ಣಕ್ಕೆ ಸರಕಾರ ನೆರವು ನೀಡುವ ಮೂಲಕ ಅದಷ್ಟು ಬೇಗ ಕಾಮಗಾರಿ ಮುಗಿಯುವಂತಾಗಿ ಸಾರ್ವಜನಿಕರಿಗೆ ನೂತನ ನ್ಯಾಯಾಲಯದಿಂದ ನ್ಯಾಯ ದೊರಕುವಂತಾಗಲಿ ಎಂದರು. ರಾಜ್ಯ ಉಚ್ಚ ನ್ಯಾಯಾಲಯ ಹಾಗೂ ಕೊಡಗು ಆಡಳಿತಾತ್ಮಕ ನ್ಯಾಯಾಧೀಶರಾದ ವಿ.ಶ್ರೀಶಾನಂದ ಸಭೆಯನ್ನುದ್ದೇಶಿಸಿ ಮಾತನಾಡಿದರು. ವಿರಾಜಪೇಟೆ ವಕೀಲರ ಸಂಘದ ಅಧ್ಯಕ್ಷ ಐ.ಆರ್.ಪ್ರಮೋದ್ ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಸಿ.ಎಂ. ಪೂಣಚ್ಚ, ಉಚ್ಚ ನ್ಯಾಯಾಲಯದ ಮಹಾ ವಿಲೇಖನಾಧಿಕಾರಿ ಕೆಎಸ್.ಭರತ್ ಕುಮಾರ್, ಜಿಲ್ಲಾ ನ್ಯಾಯಾಧೀಶ ಎಂ.ಭೃಂಗೇಶ್, ಕಾವೇರಿ ಚಿಣ್ಣಪ್ಪ, ವಕೀಲರ ಸಂಘದ ಉಪಾಧ್ಯಕ್ಷ ಬಿ.ಎನ್. ಸುಬ್ಬಯ್ಯ, ಕೋಲಾರದ ನಮ್ರತಾ ಅವರುಗಳು ಉಪಸ್ಥಿತರಿದ್ದರು.

ಹಿರಿಯ ವಕೀಲ ಬಿ.ಬಿ.ಮಾದಪ್ಪ ಹಾಗೂ ಉಚ್ಚ ನ್ಯಾಯಾಲಯದ ಕೆ.ಎಸ್.ಭರತ್‌ಕುಮಾರ್ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ನ್ಯಾಯಾಧೀಶ ದಿವಂಗತ ಚಿಣ್ಣಪ್ಪ ಅವರ ಪುತ್ರರಾದ ಎಂ.ಚಿಂತನ್ ಚಿಣ್ಣಪ್ಪ, ಎಂ.ಧ್ಯಾನ್ ಚಿಣ್ಣಪ್ಪ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು, ತಮ್ಮ ತಂದೆಯನ್ನು ಸ್ಮರಿಸಿ ಮಾತನಾಡಿದರು. ವಕೀಲರ ಸಂಘದ ಕಾರ್ಯದರ್ಶಿ ಎಂ.ಕೆ.ದಿನೇಶ್ ಸ್ವಾಗತಿಸಿದರು, ವಕೀಲರಾದ ಅನುಪಮ ಕಿಶೋರ್ ಪ್ರಾರ್ಥಿಸಿದರು, ವಿ.ಜಿ.ರಾಕೇಶ್ ಮತ್ತು ಬಿ.ಬಿ. ಮಾದಪ್ಪ ನಿರೂಪಿಸಿದರೆ, ಜಂಟಿ ಕಾರ್ಯದರ್ಶಿ ಪ್ರೀತಮ್ ವಂದಿಸಿದರು.

ಕಾರು–ಟಾಟಾ ಏಸ್ ಡಿಕ್ಕಿ: ಓರ್ವ ಸಾವು



ಬೇಗೂರು(ಗುಂಡ್ಲುಪೇಟೆ), ಮಾ.5– ಸಮೀಪದ ಗರಗನಹಳ್ಳಿ – ಬೆಂಡಗಳ್ಳಿ ಗೇಟ್ ರಾಷ್ಟ್ರೀಯ ಹೆದ್ದಾರಿ (766) ಸಮೀಪ ಇರುವ ಪೆಟ್ರೋಲ್ ಬಂಕ್ ಬಳಿ ಟಾಟಾ ಏಸ್ ಹಾಗೂ ಕಾರಿನ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಕಾರಿನಲ್ಲಿದ್ದ ವ್ಯಕ್ತಿಯೊಬ್ಬರು ಸ್ಥಳದಲ್ಲೇ ಸಾವಿಗೀಡಾಗಿದ್ದು, ಮೂವರು ಗಾಯಗೊಂಡಿರುವ ಘಟನೆ ನಡೆದಿದೆ.

ಕುಲಗಾಣ ಗ್ರಾಮದಿಂದ ಗುಂಡ್ಲು ಪೇಟೆಯ ತರಕಾರಿ ಮಾರುಕಟ್ಟೆಗೆ ತರಕಾರಿಗಳನ್ನು ತುಂಬಿಕೊಂಡು ತೆರಳುತ್ತಿದ್ದ ಟಾಟಾ ಏಸ್ ವಾಹನಕ್ಕೆ ಕೇರಳದಿಂದ ಮೈಸೂರಿನ ಕಡೆಗೆ ತೆರಳುತ್ತಿದ್ದ ಕಾರು ಡಿಕ್ಕಿ ಹೊಡೆಯಿತು ಎನ್ನಲಾಗಿದೆ. ಪರಿಣಾಮ ಕಾರಿನಲ್ಲಿದ್ದ ಯಶಸ್ (30) ಸ್ಥಳದಲ್ಲೇ ಸಾವಿಗೀಡಾಗಿದ್ದು, ಸಚಿನ್(25) ಮತ್ತು ಟಾಟಾ ಏಸ್‌ನಲ್ಲಿದ್ದ ಅಪ್ಪು(28) ಹಾಗೂ ದಾಸನಾಯಕ(35) ಎಂಬುವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ಬೇಗೂರಿನ ಸರ್ಕಾರಿ ಆಸ್ಪತ್ರೆಗೆ ಸಾಗಿಸಿ ಪ್ರಥಮ ಚಿಕಿತ್ಸೆ ನಂತರ ಮೈಸೂರಿಗೆ ದಾಖಲು ಮಾಡಲಾಗಿದೆ.

ಸಾಮೂಹಿಕ ವಿವಾಹ ಮುಂದೂಡಿಕೆ

ಚಾಮರಾಜನಗರ, ಮಾ.5– ತಾಲೂಕಿನ ಹರವೆ ಗ್ರಾಮದ ವಿರಕ್ತ ಮಠದ ವತಿಯಿಂದ ಭಾನುವಾರ (ಮಾ.12) ರಂದು ನಡೆಯಬೇಕಿದ್ದ ವೀರಶೈವ ಲಿಂಗಾಯತ ವಧೂ–ವರರ ಸಾಮೂಹಿಕ ವಿವಾಹವನ್ನು ಕಾರಣಾಂತರಗಳಿಂದ ಮುಂದೂಡಲಾಗಿದೆ ಎಂದು ಹರವೆ ವಿರಕ್ತ ಮಠದ ಮಠಾಧೀಶರಾದ ಸರ್ಪಭೂಷಣ ಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾಮರಾಜನಗರ ಜಿಲ್ಲೆಯಲ್ಲಿ ಜೆಡಿಎಸ್ ಪರ್ವ ಆರಂಭ

ಸಂತೇಮರಹಳ್ಳಿಯಲ್ಲಿ ಜೆಡಿಎಸ್ ಬೃಹತ್ ಕಾರ್ಯಕರ್ತರ ಸಮಾವೇಶದಲ್ಲಿ ಮಂಜುನಾಥ್



ಚಾಮರಾಜನಗರ, ಮಾ.5– ಜಿಲ್ಲೆಯಲ್ಲಿ ಜೆಡಿಎಸ್ ಪರ್ವ ಆರಂಭವಾಗಿದ್ದು, ಜಿಲ್ಲೆಯು ಜೆಡಿಎಸ್ ಭದ್ರಕೋಟೆಯಾಗುವ ಜೊತೆಗೆ ಕುಮಾರಣ್ಣ ಮುಖ್ಯಮಂತ್ರಿಯಾಗಲಿದ್ದಾರೆ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಮಂಜುನಾಥ ತಿಳಿಸಿದರು.

ತಾಲೂಕಿನ ಸಂತೇಮರಹಳ್ಳಿಯ ಕುದೇರು ರಸ್ತೆಯಲ್ಲಿ ಭಾನುವಾರ ನಡೆದ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಕಾರ್ಯಕರ್ತರ ಬೃಹತ್ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪಂಚರತ್ನ ಯೋಜನೆಗಳನ್ನು ಜಾರಿ ಮಾಡಲು ಹಾಗೂ ರೈತರ ಸಾಲ ಮನ್ನಾ ಹಾಗೂ ಸ್ತ್ರೀಶಕ್ತಿ ಸಂಘಗಳ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡುವ ಉದ್ದೇಶವನ್ನು ನಮ್ಮ ಪಕ್ಷ ಹೊಂದಿದೆ. ಕುಮಾರಣ್ಣ ಮುಂದಿನ ಮುಖ್ಯಮಂತ್ರಿಯಾಗಲು ನಮ್ಮ ಜಿಲ್ಲೆಯಲ್ಲಿ ಹೆಚ್ಚಿನ ಬೆಂಬಲ ದೊರೆಯಬೇಕು. ನಾಲ್ಕು ಕ್ಷೇತ್ರಗಳಲ್ಲಿ ಜೆಡಿಎಸ್ ಪಕ್ಷವನ್ನು ಗೆಲ್ಲಿಸುವ ಮೂಲಕ ಕುಮಾರಣ್ಣ ಅವರ ಕೈ ಬಲಪಡಿಸಬೇಕು ಎಂದು ಮನವಿ ಮಾಡಿದರು. ಜೆಡಿಎಸ್ ರಾಜ್ಯ ಕಾರ್ಯದರ್ಶಿ ಬಾಗಳಿ ರೇವಣ್ಣ ಮಾತನಾಡಿ, ಕೇವಲ 15 ದಿನಗಳ ಅವಧಿಯಲ್ಲಿ ಜೆಡಿಎಸ್ ಪಕ್ಷವನ್ನು ಸೇರ್ಪಡೆಯಾದ ಮಂಜುನಾಥ್ ಅವರು ಕಳೆದ ಚುನಾವಣೆಯಲ್ಲಿ 45 ಸಾವಿರ ಮತಗಳನ್ನು ಪಡೆಯುವ ಮೂಲಕ ಜೆಡಿಎಸ್ ಶಕ್ತಿಯನ್ನು ವೃದ್ಧಿಸುತ್ತಿದ್ದರು. ಸೋತರು ಸಹ ಧೃತಿಗೇಡದೇ ಜಿಲ್ಲೆಯಲ್ಲಿ ಪಕ್ಷ ಸಂಘಟನೆಗೆ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ಈಗಾಗಲೇ ರಾಜ್ಯ ಜನರು ಕಾಂಗ್ರೆಸ್, ಬಿಜೆಪಿ ಆಡಳಿತವನ್ನು ನೋಡಿ ಬೇಸತ್ತಿದ್ದು, ಪ್ರಾದೇಶಿಕ ಪಕ್ಷವಾದ ಜೆಡಿಎಸ್‌ನಿಂದ ಮಾತ್ರ ಅಭಿವೃದ್ಧಿ ಸಾಧ್ಯ ಎಂಬುದನ್ನು ಮನಗಂಡ ಮತದಾರರು 2023ರ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿಸಿದ್ದಾರೆ ಎಂದರು.

ಕಳೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲದೊಂದಿಗೆ ಬಿಎಸ್ಪಿಯಿಂದ ಗೆದ್ದ ಶಾಸಕ ಎನ್. ಮಹೇಶ್, ಕ್ಷೇತ್ರದ ಜನರಿಗೆ ಅಪಮಾನ ಮಾಡಿ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಕುಮಾರಣ್ಣ ಸರ್ಕಾರ ಪತನಕ್ಕೆ ಕಾರಣ ಮಹೇಶ್ ಅವರನ್ನು ಈ ಬಾರಿ ಸೋಲಿಸಿ ನಮ್ಮ ಪಕ್ಷದ ಸಂಭಾವ್ಯ ಅಭ್ಯರ್ಥಿ ವಾಲೆ ಮಹಾದೇವು ಅವರನ್ನು ಗೆಲ್ಲಿಸಬೇಕೆಂದು ಮನವಿ ಮಾಡಿದರು.

ಕೊಳ್ಳೇಗಾಲ ಜೆಡಿಎಸ್ ಸಂಭಾವ್ಯ ಅಭ್ಯರ್ಥಿ ವಾಲೆ ಮಹಾದೇವು ಮಾತನಾಡಿ, ಕ್ಷೇತ್ರದ ಜನರ ಒತ್ತಾಸೆಯ ಮೇರೆಗೆ ರಾಜಕೀಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ್ದೇನೆ. ಜೆಡಿಎಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡುತ್ತಿದ್ದೇನೆ. ಈ ಬಾರಿ ಚುನಾವಣೆಯಲ್ಲಿ ನನಗೊಂದು ಅವಕಾಶ ಮಾಡಿಕೊಟ್ಟು ತಮ್ಮ ಸೇವೆ ಮಾಡುವ ಭಾಗ್ಯವನ್ನು ಕರುಣಿಸಿ ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ರಾಜ್ಯ ಕಾರ್ಯದರ್ಶಿ ರಾಜು, ಮುಖಂಡರಾದ ಶಿವಮಲ್ಲು, ಶಿವಮೂರ್ತಿ, ತಾಲೂಕು ಅಧ್ಯಕ್ಷ ಸೈಯದ್ ಅಕ್ರಮ್, ಮಹಿಳಾ ಘಟಕದ ಅಧ್ಯಕ್ಷೆ ದೊಡ್ಡರಾಯಪೇಟೆ ಉಷಾ, ಪುಟ್ಟಸ್ವಾಮಿ, ಸಿದ್ದಯ್ಯ ಇತರರು ಹಾಜರಿದ್ದರು.

ರೋಟರಿಯಿಂದ ಉಚಿತ ಕಣ್ಣಿನ ತಪಾಸಣಾ ಶಿಬಿರ

ಸುಮಾರು 340 ಮಂದಿ ತಪಾಸಣೆ, 100 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆ



ಚಾಮರಾಜನಗರ, ಮಾ.5– ರೋಟರಿ ಸಂಸ್ಥೆ ವತಿಯಿಂದ ನಗರದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಯಶಸ್ವಿಯಾಗಿ ನಡೆಯಿತು.

ನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ರೋಟರಿ ಭವನದಲ್ಲಿ ಪ್ರತಿ ತಿಂಗಳ ಮೊದಲನೆಯ ಭಾನುವಾರ ರಾಷ್ಟ್ರೀಯ ಅಂಧತ್ವ ನಿಯಂತ್ರಣ ಮತ್ತು, ನಮ್ಮ ರೋಟರಿಸಂಸ್ಥೆ, ಅರವಿಂದ ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣೆ ಶಿಬಿರದಲ್ಲಿ 340 ಮಂದಿ ತಪಾಸಣೆ ಮಾಡಿಸಿಕೊಂಡರು. 100 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆಯಾಗಿದ್ದು, ಅವರನ್ನು ಬುಧವಾರ ಕೊಯಂಬತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಶಿಬಿರದಲ್ಲಿ ವ್ಯವಸ್ಥೆ ಮಾಡಲಾಯಿತು.

ರೋಟರಿ ಅಧ್ಯಕ್ಷ ಕೆ.ಎಂ.ಮಹದೇವ ಸ್ವಾಮಿ ಮಾತನಾಡಿ, ಕಣ್ಣಿನ ದೃಷ್ಟಿ ಎಲ್ಲರಿಗೂ ಮಹತ್ವದ್ದು, ಅದರಲ್ಲೂ ವಿಶೇಷವಾಗಿ ವಯೋವೃದ್ಧರೇ ಹೆಚ್ಚಿನ ಸಂಖ್ಯೆಯಲ್ಲಿ ಕಣ್ಣಿನ ಪೊರೆಗೆ ತುತ್ತಾಗುತ್ತಿದ್ದಾರೆ. ಆರ್ಥಿಕವಾಗಿ ದುರ್ಬಲರಾಗಿದ್ದು, ದಿನನಿತ್ಯ ಜೀವನದಲ್ಲಿ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಅವರಿಗೆ ಅನುಕೂಲ ಕಲ್ಪಿಸಲು ರೋಟರಿ ಸಂಸ್ಥೆಯು ಈ ಚಿತ್ರ ಕಣ್ಣಿನ ತಪಾಸಣಾ ಶಿಬಿರವನ್ನು ಆಯೋಜಿಸುತ್ತ ಬಂದಿದೆ. ಚಾಮರಾಜನಗರ ತಾಲೂಕು ಆಲೂರು ಗ್ರಾಮದ ಶೀಲಾ ಮತ್ತು ಬಂಗಾರು ದಂಪತಿಗಳ ಮಕ್ಕಳಿಬ್ಬರಿಗೂ ಅಂಧತ್ವ ಕಾಡುತ್ತಿದ್ದು, ಪುತ್ರನಾದ ಮಹದೇವ ಸ್ವಾಮಿ 24 ವರ್ಷ ಮಗಳು ಚೈತ್ರ 18 ವರ್ಷ ಇವರ ಅಂಧತ್ವದ ಬಗ್ಗೆ ಮಾಹಿತಿ ದೊರೆತು ಅವರನ್ನು ನಮ್ಮ ರೋಟರಿ ಸಂಸ್ಥೆ ಕಣ್ಣಿನ ತಪಾಸಣಾ ಶಿಬಿರಕ್ಕೆ ಇಂದು ಬರಮಾಡಿಕೊಂಡು ಪರೀಕ್ಷೆಗೆ ಒಳಪಡಿಸಲಾಯಿತು ಮತ್ತು ಇನ್ನು ಹೆಚ್ಚಿನ ಚಿಕಿತ್ಸೆಗೆ ಬುಧವಾರ ಕೊಯಂಬತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ಕಳುಹಿಸಿಕೊಡಲು ವ್ಯವಸ್ಥೆ ಮಾಡಲಾಗಿದೆ. ಇದು ಈ ತಿಂಗಳ ಶಿಬಿರದ ವಿಶೇಷವಾಗಿರುತ್ತದೆ ಎಂದರು.

ಕಾರ್ಯಕ್ರಮದಲ್ಲಿ ರೋಟರಿ ಸಂಸ್ಥೆ ಸಂಸ್ಥಾಪಕ ಸದಸ್ಯ ಸಿ.ವಿ.ಶ್ರೀನಿವಾಸಶೆಟ್ಟಿ, ಕಾರ್ಯದರ್ಶಿ ಕಾಗಲವಾಡಿಚಂದ್ರು, ಉಪಾಧ್ಯಕ್ಷ ಎಲ್.ನಾಗರಾಜು, ಮುಂದಿನ ಸಾಲಿನ ಅಧ್ಯಕ್ಷ ಚಂದ್ರಪ್ರಭಜೈನ್, ಸದಸ್ಯ ಕೆಂಪನಪುರ ಸಿದ್ದರಾಜು, ಮತ್ತು ಇವರ ಧರ್ಮ ಪತ್ನಿ, ಕುಮಾರ್ ರಾಜು, ರಾಮು, ಮೋಹನ್, ಸಿದ್ದಮಲ್ಲಪ್ಪ, ಮುಖಂಡ ಬಸವನಪುರ ರಾಜಶೇಖರ್, ಉಚಿತ ಕಣ್ಣಿನ ಶಿಬಿರದ ಮೇಲ್ವಿಚಾರಕ ವಿಜಯಕಾಂತ್, ಡಾ. ಪರಮೇಶ್ವರಪ್ಪ ಅರವಿಂದ ಕಣ್ಣಿನ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿ ವರ್ಗ ಮತ್ತು ಇತರರು ಹಾಜರಿದ್ದರು.

ಬುದ್ಧಿಜೀವಿಗಳು, ರಾಜಕೀಯ ತಜ್ಞರು, ಪರಿಸರವಾದಿಗಳು, ವಕೀಲರು, ವೈದ್ಯರು, ಜನರ ಸಲಹೆ ಪಡೆದು ಬಿಜೆಪಿ ಪ್ರಣಾಳಿಕೆ

ಪ್ರಣಾಳಿಕೆ ಸಲಹಾ ಅಭಿಯಾನದಲ್ಲಿ ಶಾಸಕ ಮಹೇಶ್‌ರಿಂದ ಸಲಹೆ ಸ್ವೀಕಾರ



ಕೊಳ್ಳೇಗಾಲ, ಮಾ.5– ಬಿಜೆಪಿ ಎಲ್ಲಾ ವರ್ಗ ಮತ್ತು ಎಲ್ಲಾ ಜನಾಂಗಗಳ ಹಿತಕ್ಕೂ ಬದ್ಧವಾಗಿರುವ ಪಕ್ಷವಾಗಿದ್ದು, ಮುಂಬರುವ ಚುನಾವಣೆ ಹಿನ್ನೆಲೆಯಲ್ಲಿ ಒಂದು ಕೋಟಿಗೂ ಅಧಿಕ ಸಂಖ್ಯೆಯ ನಾಗರಿಕರು, ಗಣ್ಯರು, ಬುದ್ಧಿಜೀವಿಗಳ ಸಲಹೆ ಪಡೆದು ಚುನಾವಣಾ ಪ್ರಣಾಳಿಕೆ ಬಿಡುಗಡೆ ಮಾಡಲಾಗುವುದು ಎಂದು ಶಾಸಕ ಎನ್. ಮಹೇಶ್ ತಿಳಿಸಿದ್ದಾರೆ.

ಚೌಡೇಶ್ವರಿ ಮಿನಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಪ್ರಣಾಳಿಕೆ ಸಲಹಾ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ದೇಶದ ಅಭಿವೃದ್ಧಿ ಚಿಂತನೆಯುಳ್ಳ ಪ್ರತಿಯೊಬ್ಬರು ಪಕ್ಷಭೇದ ಮರೆತು ಈ ಚುನಾವಣಾ ಪ್ರಣಾಳಿಕಾ ಪತ್ರದಲ್ಲಿ ತಮ್ಮ ಅಭಿಪ್ರಾಯ ಲಿಖಿತವಾಗಿ ನಮೂದಿಸುವ ಮೂಲಕ ಸಲಹೆ ನೀಡಬಹುದು. ಪ್ರಣಾಳಿಕೆ ಸಲಹಾ ಅಭಿಯಾನ ಇಂದು ನೂರಾರು ಮಂದಿ ಪಾಲ್ಗೊಂಡು ಸಹಕಾರ ನೀಡಿದ್ದಾರೆ. ವರ್ತಕರು, ನೇಕಾರರು, ವಕೀಲರು ಸೇರಿದಂತೆ ಇನ್ನಿತರರು ಅಭಿಯಾನದಲ್ಲಿ ತಮ್ಮ ಸಲಹೆ, ಸಹಕಾರ ನೀಡಿದ್ದಾರೆ. ನೂರಕ್ಕೂ ಹೆಚ್ಚು ಮಂದಿ ನೀಡಿದ ಸಲಹೆಯನ್ನು ಪೆಟ್ಟಿಗೆಯಲ್ಲಿ ಲಿಖಿತ ರೂಪದಲ್ಲಿ ಹಾಕಲಾಗಿದೆ ಎಂದರು. ಪ್ರತಿಯೊಂದು ರಾಜಕೀಯ ಪಕ್ಷಗಳು ಚುನಾವಣೆ ವೇಳೆ ಪ್ರಣಾಳಿಕೆ ಘೋಷಣೆ ಮಾಡುತ್ತೆ, ಆದರೆ ಬಿಜೆಪಿ ಆ ಪ್ರಣಾಳಿಕೆ ಬಿಡುಗಡೆ ಮುನ್ನ ಬುದ್ಧಿಜೀವಿಗಳು, ರಾಜಕೀಯ ತಜ್ಞರು, ಪರಿಸರವಾದಿಗಳು, ವಕೀಲರು, ವೈದ್ಯರು, ಗಣ್ಯರು, ಸಾರ್ವಜನಿಕರಿಂದ ಮಾಹಿತಿ ಪಡೆಯಲಾಗುತ್ತಿದೆ. ನೀವು ಇಲ್ಲಿ ನೀಡಿದ ಸಲಹೆಗಳು ಬಿಜೆಪಿಯ ಮುಂದಿನ ಚುನಾವಣಾ ಪ್ರಣಾಳಿಕೆಯಾಗಿ ಹೊರಹೊಮ್ಮಿದರೂ ಅಚ್ಚರಿ ಇಲ್ಲ ಎಂದರು.

ಜಿಲ್ಲಾ ಸಂಚಾಲಕ ಬಾಲಸುಬ್ರಮಣ್ಯಂ, ಸಹ ಸಂಚಾಲಕ ಬೂದಿತಿಟ್ಟು ಶಿವ ಕುಮಾರ್, ಮಂಡಲ ಸಂಚಾಲಕ ಜಗದೀಶ್ ಶಂಕರ್, ನಗರ ಮಂಡಲ ಅಧ್ಯಕ್ಷ ರಮೇಶ್, ಓಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ನಟರಾಜಗೌಡ, ನಿರಂಜನ್ ರವಿ, ನಗರಸಭೆ ಸದಸ್ಯರುಗಳಾದ ಕವಿತಾ, ರಾಮಕೃಷ್ಣ, ಪ್ರಕಾಶ್, ಬೀದಿ ಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ದ್ವಾರಕೀ, ವಕೀಲ ಮಾದಪ್ಪ, ರಾಜೇಂದ್ರ, ಬಸವರಾಜು ಇನ್ನಿತರರು ಇದ್ದರು



ಸೌಹಾರ್ದಯುತ ಕ್ರಿಕೆಟ್: ಟ್ರೋಲ್ ಕ್ರಿಕೆಟರ್ಸ್ ಚಾಂಪಿಯನ್

ಚಾಮರಾಜನಗರ, ಮಾ.5– ನಗರದ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಭಾನುವಾರ ಟ್ರೋಲ್ ಕ್ರಿಕೆಟರ್ಸ್ ಅಸೋಷಿಯೇಷನ್‌ನಿಂದ ನಡೆದ ಸೌಹಾರ್ದಯುತ ಕ್ರಿಕೆಟ್ ಪಂದ್ಯಾವಳಿ ಯಶಸ್ವಿಯಾಯಿತು.

ಯುವಕರಲ್ಲಿ ಸೌಹಾರ್ದಯುತ ಭಾವನೆಯನ್ನು ಮೂಡಿಸುವ ಉದ್ದೇಶದಿಂದ ನಡೆದ ಪಂದ್ಯಾವಳಿಯನ್ನು ಬೆಳಗ್ಗೆ ಕೆಆರ್‌ಐಡಿಎಲ್‌ನ ಅಧ್ಯಕ್ಷ ಎಂ. ರುದ್ರೇಶ್ ಉದ್ಘಾಟಿಸಿದರು. ಬಳಿಕ ನಡೆದ ಪಂದ್ಯಾವಳಿಯಲ್ಲಿ ಟ್ರೋಲ್ ಕ್ರಿಕೆಟ್ ಚಾಲೆಂಜರ್ಸ್, ಟ್ರೋಲ್ ಕ್ರಿಕೆಟ್ ಸೂಪರ್‌ಕಿಂಗ್ಸ್, ಚಿಕ್ಕಣ್ಣ ಬಾಯ್ಸ್ ಸೇರಿದಂತೆ ನಾಲ್ಕು ತಂಡಗಳು ಪಾಲ್ಗೊಂಡಿದ್ದವು. ಬೆಳಗ್ಗೆಯಿಂದ ಸಂಜೆವರೆಗೂ ನಡೆದ ಪಂದ್ಯಾವಳಿಯು ಅತ್ಯಂತ ರೋಚಕವಾಗಿತ್ತು. ಅಂತಿಮವಾಗಿ ಟ್ರೋಲ್ ಕ್ರಿಕೆಟ್ ಚಾಲೆಂಜರ್ಸ್, ಟ್ರೋಲ್ ಕ್ರಿಕೆಟ್ ಸೂಪರ್‌ಕಿಂಗ್ಸ್ ತಂಡಗಳು ಪ್ರಶಸ್ತಿ ಸುತ್ತಿಗೆ ಲಗ್ಗೆ ಇಟ್ಟಿತ್ತು.

ಫೈನಲ್ ಪಂದ್ಯದಲ್ಲಿ 9ರನ್‌ಗಳಿಂದ ಭರ್ಜರಿ ಗೆಲುವು ದಾಖಲಿಸಿದ ಟ್ರೋಲ್ ಕ್ರಿಕೆಟ್ ಚಾಲೆಂಜರ್ಸ್ ಚಾಂಪಿಯನ್ ಆಗಿ ಹೊರಹೊಮ್ಮಿತ್ತು. ಪಂದ್ಯಾವಳಿಯಲ್ಲಿ ಉತ್ತಮ ಬ್ಯಾಟಿಂಗ್ ಮಾಡಿದ ಮಹೇಶ್(ಕಬ್ಬಿಣ ಮಾಹಿ), ಉತ್ತಮ ಬೌಲಿಂಗ್ ಮಾಡಿದ ಮಣಿ ಹಾಗೂ ಉತ್ತಮ ಕ್ಷೇತ್ರ ರಕ್ಷಣೆ ಮಾಡಿದ ರಘು(ಗಂಗೂಲಿ) ಉತ್ತಮ ಆಟಗಾರರ ಪ್ರಶಸ್ತಿಗೆ ಭಾಜನರಾದರು.

ಟೂರ್ನಿಯ ಯಶಸ್ವಿಗೆ ಕಾರಣರಾದ ಟ್ರೋಲ್ ಕ್ರಿಕೆಟರ್ಸ್ ಅಸೋಷಿಯೇಷನ್ ಮರಿಯಾಲ ಗುರುಪ್ರಸಾದ್, ವೆಂಕಟೇಶ್, ರಘು(ಗಂಗೂಲಿ), ಮಾಹಿ(ಸಚಿನ್), ಯಾನಗಹಳ್ಳಿ ಕೆ. ಮಹೇಶ್, ಪೃಥ್ವಿ, ರಘು ಆಕಾಶ್ ಸೇರಿದಂತೆ ಇತರೆ ಆಟಗಾರರನ್ನು ಅಭಿನಂದಿಸಲಾಯಿತು.

ಮೈಸೂರು ಮಿತ್ರ

ಗ್ಯಾಸ್ ಸಿಲಿಂಡರ್ ವಿತರಣೆಗೆ ಅಧಿಕ ಶುಲ್ಕ ವಸೂಲಿ ದೂರು

ಹೆಚ್ಚುವರಿ ಶುಲ್ಕ ಪಡೆದರೆ ಲೈಸೆನ್ಸ್ ರದ್ದು: ಡಿಸಿ ಆದೇಶ

ಮೈಸೂರು, ಮಾ.5– ಗ್ಯಾಸ್ ಸಿಲಿಂಡರ್ ವಿತರಣೆ ವೇಳೆ ಗ್ರಾಹಕರಿಂದ ನಿಯಮಬಾಹಿರವಾಗಿ ಹೆಚ್ಚುವರಿ ಶುಲ್ಕ ಪಡೆದರೆ ಸಂಬಂಧಪಟ್ಟ ವಿತರಕರ ಲೈಸೆನ್ಸ್ ರದ್ದುಪಡಿಸುದಾಗಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಆದೇಶಿಸಿದ್ದಾರೆ. ಜಿಲ್ಲೆಯ ಎಲ್ಲಾ ಅಡುಗೆ ಅನಿಲ ವಿತರಕರು ತಮ್ಮ ಕಚೇರಿ ಅಥವಾ ಮಳಿಗೆಯಿಂದ 15 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಹೆಚ್ಚುವರಿ ವಿತರಣೆ ಶುಲ್ಕ(ಡೆಲಿವರಿ ಚಾರ್ಜ್) ಪಡೆಯುವಂತಿಲ್ಲ 15 ಕಿ.ಮೀಗಿಂತ ದೂರದಲ್ಲಿರುವ ಗ್ರಾಹಕರಿಗೆ ಸಿಲಿಂಡರ್ ವಿತರಿಸಬೇಕಿದ್ದಲ್ಲಿ ಶುಲ್ಕವನ್ನು ಬಿಲ್‌ನಲ್ಲಿ ನಮೂದಿಸಿ ಅಷ್ಟೇ ಪ್ರಮಾಣದ ಮೊತ್ತವನ್ನು ಪಡೆಯಬೇಕೆಂದು ಆದೇಶದಲ್ಲಿ ತಿಳಿಸಿರುವ ಜಿಲ್ಲಾಧಿಕಾರಿಗಳು ಹೆಚ್ಚುವರಿ ಶುಲ್ಕ ಪಡೆದಿದ್ದು, ಸಾಬೀತಾದಲ್ಲಿ ಅಂತಹ ವಿತರಕರ ಲೈಸೆನ್ಸ್ ರದ್ದು ಪಡಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಮೂರನೇ ಪುಟದಿಂದ

ವಿಜಯ ಸಂಕಲ್ಪ ಯಾತ್ರೆ

ಪ್ರಮುಖ ರಸ್ತೆಗಳಲ್ಲಿ ಭರ್ಜರಿ ರೋಡ್ ಶೋ ನಡೆಸಿ, ನಾಯಕರು ಸರ್ಕಾರದ ಯೋಜನೆಗಳ ಬಗ್ಗೆ ಭಾಷಣ ಮಾಡಿದರು. ಮೆರವಣಿಗೆಯುದ್ದಕ್ಕೂ ಸಚಿವ ಕೋಟಾ ಶ್ರೀನಿವಾಸ ಪೂಜಾರಿ, ಸಂಸದರಾದ ಬಿ.ವೈ.ರಾಘವೇಂದ್ರ, ಪ್ರತಾಪ್ ಸಿಂಹ ಅವರು ಭರ್ಜರಿ ರೋಡ್ ಶೋ ನಡೆಸಿ ಜನರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆ ಅನುಷ್ಠಾನಗೊಳಿಸಿರುವ ಬಗ್ಗೆ ಭಾಷಣ ಮಾಡಿದರು. ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಮೈಸೂರು ನಗರ ಅಧ್ಯಕ್ಷ ಶ್ರೀವತ್ಸ, ಮುಖಂಡರುಗಳಾದ ಸಂದೇಶ್ ಸ್ವಾಮಿ, ವಿ.ಗಿರಿರಾಜ್, ಬಿ.ಬಿ.ಮಂಜುನಾಥ್, ರಘು ಕೌಟಿಲ್ಯ, ಭಾನುಪ್ರಕಾಶ್, ಗಿರಿರಾಜ್ ಸೇರಿದಂತೆ ಹಲವು ಬಿಜೆಪಿ ನಾಯಕರು ಯಾತ್ರೆಯಲ್ಲಿ ಭಾಗಿಯಾಗಿದ್ದರು.

ಮಧ್ಯಾಹ್ನ 12.40 ಗಂಟೆ ವೇಳೆಗೆ ಚಾಮುಂಡೇಶ್ವರಿ ಕ್ಷೇತ್ರ ತಲುಪಿದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆಯು, ಹಿನಕಲ್ ಬಳಿ ನನ್ನೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಿ.ವೈ.ರಾಘವೇಂದ್ರ ಅವರು, ನಂತರ ಹುಣಸೂರು ರಸ್ತೆಯಲ್ಲಿ ರೋಡ್ ಶೋ ನಡೆಸಿದರು. ಹಿನಕಲ್ ರಿಂಗ್ ರಸ್ತೆಯ ರಿಂಗ್ ರೋಡ್ ಜಂಕ್ಷನ್ ಬಳಿ ನೆರೆದಿದ್ದ ಜನಸ್ತೋಮ ಉದ್ದೇಶಿಸಿ ಅವರು ಮಾತನಾಡಿದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿಗೆ ಈ ಬಾರಿ ಉತ್ತಮ ವಾತಾವರಣವಿದೆ. ಕಳೆದ ಎರಡು ಬಾರಿ ನಮ್ಮ ಅಭ್ಯರ್ಥಿಗಳು ಸೋಲನನುಭವಿಸಿದ್ದರು. ಆದರೆ ಈಗ ಪ್ರಧಾನಿ ನರೇಂದ್ರ ಮೋದಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆಡಳಿತಾವಧಿಯಲ್ಲಿ ದೇಶ ಮತ್ತು ರಾಜ್ಯಕ್ಕೆ ನೀಡಿದ ಜನಪರ ಕಲ್ಯಾಣ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿರುವುದರಿಂದ ಇಂದು ಬಿಜೆಪಿಗೆ ಜನರ ಒಲವಿದೆ ಎಂಬುದು ವಿಜಯ ಸಂಕಲ್ಪ ಯಾತ್ರೆಗೆ ಸೇರಿರುವ ಜನರೇ ಸಾಕ್ಷಿ ಎಂದು ರಾಘವೇಂದ್ರ ನುಡಿದರು.

ಈ ಬಾರಿ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿಗೆ ಆಶೀರ್ವಾದ ನೀಡಿ ಪೂರ್ಣ ಬೆಂಬಲದೊಂದಿಗೆ ಸರ್ಕಾರ ರಚಿಸಲು ಅನುವು ಮಾಡಿಕೊಟ್ಟರೆ ರಾಜ್ಯವನ್ನು ಮಾದರಿ ಮಾಡಿ ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲಾಗುವುದು. ಗ್ರಾಮೀಣ ಜನರ ಬವಣೆಗಳಿಗೆ ಮಿಡಿಯುವ ಬಿಜೆಪಿ ಸರ್ಕಾರ ಮತ್ತೊಮ್ಮೆ ರಾಜ್ಯದಲ್ಲಿ ಅಧಿಕಾರ ಹಿಡಿಯಲು ಅನುವು ಮಾಡಿಕೊಡಬೇಕೆಂದು ಬಿ.ವೈ.ರಾಘವೇಂದ್ರ ಅವರು ಇದೇ ಸಂದರ್ಭ ನುಡಿದರು. ಇದೇ ವೇಳೆ ನೆರೆದಿದ್ದ ಜನರನ್ನುದ್ದೇಶಿಸಿ ಮಾತನಾಡಿದ ಸಂಸದ ಪ್ರತಾಪ್ ಸಿಂಹ, ಚಾಮುಂಡೇಶ್ವರಿ ಕ್ಷೇತ್ರಗಳ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿ ಮತ್ತು ನಗರ ಸಭೆಗಳನ್ನಾಗಿ ಮಾಡಿ ಅಭಿವೃದ್ಧಿಗೆ ಆದ್ಯತೆ ನೀಡಿರುವ ಸರ್ಕಾರ ನಿವಾಸಿಗಳಿಗೆ ಮೂಲಭೂತ ಸೌಲಭ್ಯ ಒದಗಿಸಿದೆ ಎಂದರು.

ಹಳೆ ಉಂಡವಾಡಿ ಕುಡಿಯುವ ನೀರಿನ ಯೋಜನೆಗೆ ಅಗತ್ಯ ಅನುದಾನ ನೀಡಿದ ಬಿಜೆಪಿ ಸರ್ಕಾರ, ಚಾಮುಂಡೇಶ್ವರಿ ಕ್ಷೇತ್ರದ ಹಲವು ಗ್ರಾಮಗಳಿಗೆ ಕಾವೇರಿ ನೀರು ಪೂರೈಸಲು ಮುಂದಾಗಿದ್ದು, ಈ ಯೋಜನೆಯಿಂದ ಗ್ರಾಮೀನ ಪ್ರದೇಶವಲ್ಲದೆ, ಮೈಸೂರು ನಗರಕ್ಕೆ ಮುಂದಿನ 50 ವರ್ಷ ಅವಧಿಗೆ ಕುಡಿಯುವ ನೀರಿನ ಕೊರತೆಯುಂಟಾಗದಂತೆ ನೋಡಿಕೊಳ್ಳಲು ನಮ್ಮ ಸರ್ಕಾರ ಮುಂದಾಗಿದೆ ಎಂದರು.

ಅಷ್ಟೇ ಅಲ್ಲದೆ, ಕಬಿನಿಯಿಂದಲೂ ಕುಡಿಯುವ ನೀರು ಪೂರೈಸುವ ಯೋಜನೆಯನ್ನು ಕೈಗೊಳ್ಳಲಾಗಿದ್ದು, ನಮ್ಮ ಸರ್ಕಾರದಲ್ಲಿ ಜನರ ಕಲ್ಯಾಣ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗಿದೆಯಾದ್ದರಿಂದ ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಲವು ಯೋಜನೆಗಳನ್ನು ಜನರಿಗೆ ನೀಡಿವೆ ಎಂದು ಪ್ರತಾಪ್ ಸಿಂಹ ನುಡಿದರು.

ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ನಗರಾಧ್ಯಕ್ಷ ಶ್ರೀವತ್ಸ, ಮುಖಂಡರಾದ ಚಾಮುಂಡೇಶ್ವರಿ ಕ್ಷೇತ್ರದ ಮಾಜಿ ಅಧ್ಯಕ್ಷ ಎನ್.ಅರುಣ್ ಕುಮಾರ್‌ಗೌಡ, ಶಿವಕುಮಾರ್ ಸೇರಿದಂತೆ ಹಲವರು ವಿಜಯ ಸಂಕಲ್ಪ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

‘ಕರ್ನಾಟಕ ಬಂದ್’ಗೆ ಕರೆ ನೀಡಿದ ಕಾಂಗ್ರೆಸ್

ರಾಜ್ಯಕ್ಕೆ ಅಗೌರವ ತರುವ ಕೆಲಸ ಬಿಜೆಪಿ ಮಾಡಿದೆ. ಸಿಎಂ ಭ್ರಷ್ಟಾಚಾರಕ್ಕೆ ಆಧಾರ ಕೊಡಿ ಅಂತಾ ಕೇಳಿದ್ರು, ಗುತ್ತಿಗೆದಾರ ಸಂಘದ ಅಧ್ಯಕ್ಷರು ನೇರವಾಗಿ ಮೋದಿ ಅವರಿಗೆ ಪತ್ರ ಬರೆದಿದ್ದರು. ಈವರೆಗೂ ಯಾವುದೇ ಉತ್ತರ ಕೊಡದೇ ಮೋದಿ ನಾನು ತಿನ್ನೋದಿಲ್ಲ, ತಿನ್ನೋರಿಗೂ ಬಿಡಲ್ಲ? ಎಂದು ಹೇಳಿದ್ದಾರೆ ಎಂದು ಕಿಡಿಕಾರಿದ್ದಾರೆ.ಎಲ್ಲ ಕಚೇರಿಗಳಲ್ಲಿ ಆಗುತ್ತಿರುವ ಭ್ರಷ್ಟಾಚಾರದ ಬಗ್ಗೆ ಜನರ ಗಮನ ಸೆಳೆದಿದ್ದೇವೆ. ಭ್ರಷ್ಟಾಚಾರದಿಂದ ಸಾವಿರಾರು ಜನ ನೊಂದಿದ್ದಾರೆ. ಸಿಎಂ ಕೇಳಿದ ಸಾಕ್ಷಿಗೆ ಲೋಕಾಯುಕ್ತ ಅಧಿಕಾರಿಗಳು ಕೊಟ್ಟಿದ್ದಾರೆ. ಸರ್ಕಾರಿ ಕಚೇರಿಯಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರವನ್ನು ಬಯಲಿಗೆಳೆದಿದ್ದಾರೆ. ಎಲ್ಲಾ ಲೋಕಾಯುಕ್ತ ಅಧಿಕಾರಿಗಳಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಇದರ ನೈತಿಕ ಹೊಣೆಹೊತ್ತು ಸಿಎಂ ರಾಜೀನಾಮೆ ಕೊಡಬೇಕು ಎಂದು ಒತ್ತಾಯಿಸಿದರು.

ಮಾಸಿಕ ಪಾಸ್ ದರಗಳ ಏರಿಕೆ

ಟೋಲ್ ದರ ಶೇ. 5ರಷ್ಟು ಹೆಚ್ಚಾಗಬಹುದು. ಭಾರೀ ವಾಹನಗಳು ಪಾವತಿಸಬೇಕಾದ ಟೋಲ್ ದರ ಶೇ. 10ರಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ಈಗಿರುವ ದರದ ಪ್ರಕಾರ ಎಕ್ಸ್‌ಪ್ರೆಸ್‌ವೇಗಳಲ್ಲಿ ಪ್ರತೀ ಕಿಲೋಮೀಟರ್‌ಗೆ 2.19 ರೂ.ನಂತೆ ಟೋಲ್ ದರ ನಿಗದಿ ಮಾಡಲಾಗಿದೆ. 2022–23ರ ವರ್ಷದಲ್ಲಿ ಟೋಲ್ ದರಗಳನ್ನು ಶೇ.10ರಿಂದ 15ರಷ್ಟು ಹೆಚ್ಚಿಸಲಾಗಿತ್ತು. ಈ ವರ್ಷ ರಾ.ಹೆ. ಟೋಲ್‌ಗಳಲ್ಲಿ 33,881.22 ಕೋಟಿ ರೂ. ಸಂಗ್ರಹವಾಗಿದೆ. ಹಿಂದಿನ ವರ್ಷಕ್ಕೆ ಇದು ಶೇ.21ರಷ್ಟು ಹೆಚ್ಚಾಗಿದೆ. 2018ರಿಂದೀಚೆ ಹತ್ತಿರಹತ್ತಿರ ಒಂದೂವರೆ ಲಕ್ಷ ಕೋಟಿ ರೂನಷ್ಟು ಟೋಲ್ ಸಂಗ್ರಹವಾಗಿದೆ.

ಫಾಸ್‌ಟ್ಯಾಗ್ ವ್ಯವಸ್ಥೆ ಬಂದ ಮೇಲೆ ಟೋಲ್ ಸಂಗ್ರಹ ಗಮನಾರ್ಹವಾಗಿ ಹೆಚ್ಚಾಗಿದೆ. ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ನೀಡಿರುವ ಮಾಹಿತಿ ಪ್ರಕಾರ ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಫಾಸ್‌ಟ್ಯಾಗ್ ಮೂಲಕ ದಿನಕ್ಕೆ ಸರಾಸರಿ 140 ಕೋಟಿ ರೂನಷ್ಟು ಟೋಲ್ ಸಂಗ್ರಹವಾಗುತ್ತಿದೆ.

ಮಾಸಿಕ ಟೋಲ್ ಪಾಸ್: ಟೋಲ್ ಪ್ಲಾಜಾದಿಂದ 20 ಕಿ.ಮೀ. ಸುತ್ತಲಿನ ಪ್ರದೇಶದಲ್ಲಿ ವಾಸಿಸುತ್ತಿರುವ ನಾನ್–ಕಮರ್ಷಿಯಲ್ ವಾಹನ ಸವಾರರಿಗೆ ಮಾಸಿಕ ಪಾಸ್ ನೀಡಲಾಗುತ್ತದೆ. ಇದು ಸದ್ಯ ತಿಂಗಳಿಗೆ 315 ರೂ ಇದೆ. ಈ ದರವನ್ನು ಶೇ. 10ರಷ್ಟು ಹೆಚ್ಚು ಮಾಡಲು ಕೇಂದ್ರ ಸರ್ಕಾರ ಸಿದ್ಧವಾಗಿದೆ.

ಕೊಡಗು ಮೂಲದ ಓರ್ವನ ಬಂಧನ

ದಾಳಿಯಿಂದ ಗಂಭೀರ ಗಾಯಗೊಂಡಿದ್ದ ಪ್ರವೀಣ್ ನೆಟ್ಟಾರು ಅವರನ್ನು ಪುತ್ತೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದರು. ಪ್ರವೀಣ್ ನೆಟ್ಟಾರು ಕೊಲೆಯಾದ ಬಳಿಕ ರಾಷ್ಟ್ರೀಯ ತನಿಖಾ ದಳ 2022ರ ಸೆ.6 ಮತ್ತು ಸೆ.22ರಂದು ಮಡಿಕೇರಿಗೆ ಆಗಮಿಸಿ ತುಫೈಲ್ ಮನೆಗೆ ತೆರಳಿ ಮಾಹಿತಿ ಕಲೆ ಹಾಕಿತ್ತು. ಪ್ರವೀಣ್ ನೆಟ್ಟಾರು ಕೊಲೆ ಕೃತ್ಯದ ಬಳಿಕ ತುಫೈಲ್ ಮಡಿಕೇರಿಗೆ ಆಗಮಿಸಿರುವ ಶಂಕೆ ವ್ಯಕ್ತಪಡಿಸಿದ್ದ ಎನ್‌ಐಎ ಅಧಿಕಾರಿಗಳು ನಗರದಲ್ಲೂ ಶೋಧ ಕಾರ್ಯ ನಡೆಸಿದ್ದರು ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಸ್ಫೋಟದ ಹೊಣೆ ಹೊತ್ತ ISIS ಸಂಘಟನೆ

ಖೊರಾಸನ್ ಪ್ರಾಂತ್ಯದ ಇಸ್ಲಾಮಿಕ್ ಸ್ಟೇಟ್ ಉಗ್ರ ಸಂಘಟನೆ (ಐಎಸ್‌ಕೆಪಿ) ಈ ದಾಳಿಗಳ ಹೊಣೆ ಹೊತ್ತಿದೆ. ಮಂಗಳೂರಿನ ಕದ್ರಿಯಲ್ಲಿರುವ ಹಿಂದೂ ದೇವಾಲಯದ ಮೇಲೆ ದಾಳಿ ಮಾಡಲು ನಮ್ಮ ಸಹೋದರ ಪ್ರಯತ್ನಿಸಿದ್ದನು. ಆದರೆ ಅದು ವಿಫಲವಾಗಿದೆ. ಆದರೆ ನಮ್ಮ ಕಾರ್ಯಾಚರಣೆಗಳನ್ನು ನಿಲ್ಲಿಸುವುದಿಲ್ಲ. ರಾಜ್ಯ, ಕೇಂದ್ರ ಗುಪ್ತಚರ ಸಂಸ್ಥೆಗಳ ಕಣ್ಣು ತಪ್ಪಿಸಿ ದಾಳಿ ಮಾಡಲು ಸಿದ್ಧತೆ ನಡೆಸುತ್ತಿದ್ದೇವೆ ಎಂದು ಉಗ್ರರು ಎಚ್ಚರಿಕೆ ನೀಡಿದ್ದಾರೆ. 2022ರ ನವೆಂಬರ್ 9ರಂದು ಮಂಗಳೂರಿನಲ್ಲಿ ಆಟೋದಲ್ಲಿ ಕುಕ್ಕರ್ ಬಾಂಬ್ ಸ್ಫೋಟ ಸಂಭವಿಸಿದ್ದು ಇದು ಇಡೀ ರಾಜ್ಯವನ್ನೇ ಬೆಚ್ಚಿ ಬೀಳಿಸಿತ್ತು.

ವಿಶೇಷ ತಂಡ ರಚಿಸಿದ ಕರ್ನಾಟಕ ಲೋಕಾಯುಕ್ತ

ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲು ಸಿದ್ಧತೆ ನಡೆಸಿದ್ದಾರೆ. ಬೆಂಗಳೂರು, ದಾವಣಗೆರೆಯಲ್ಲಿರುವ ಬಿಜೆಪಿ ಶಾಸಕರ ನಿವಾಸ, ಶಾಸಕರ ಭವನ ಮತ್ತು ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಾರ್ಖಾನೆ (ಕೆಎಸ್‌ಡಿಎಲ್) ಕಚೇರಿಗೆ ನೋಟಿಸ್ ಕಳುಹಿಸಲಾಗುವುದು. ಕೆಎಸ್‌ಡಿಎಲ್‌ನ ಅಧ್ಯಕ್ಷರಾಗಿದ್ದ ಶಾಸಕ ವಿರೂಪಾಕ್ಷಪ್ಪ ಅವರು ಘಟನೆಯ ನಂತರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಲೋಕಾಯುಕ್ತ ಅಧಿಕಾರಿಗಳು ವಿರೂಪಾಕ್ಷಪ್ಪ ಮಾಡಾಳ್ ಅವರ ಪುತ್ರ ಪ್ರಶಾಂತ್ ಅವರ ನಿವಾಸದಲ್ಲಿ ಪತ್ತೆಯಾದ 6 ಕೋಟಿ ರೂ.ಗೂ ಹೆಚ್ಚು ನಗದು ಮತ್ತು ಖಾಸಗಿ ಕಚೇರಿಯಲ್ಲಿ 2 ಕೋಟಿ ರೂ.ಗೂ ಹೆಚ್ಚು ನಗದು ಮೂಲದ ಬಗ್ಗೆಯೂ ತನಿಖೆ ನಡೆಸುತ್ತಿದ್ದಾರೆ. ಪ್ರಶಾಂತ್ ಮಾಡಾಳ್ ತನ್ನ ತಂದೆಯ ಪರವಾಗಿ ಕೆಎಸ್‌ಡಿಎಲ್‌ಗೆ ಕಚ್ಚಾ ಸಾಮಗ್ರಿಗಳನ್ನು ಖರೀದಿಸಲು ಟೆಂಡರ್ ಮಂಜೂರು ಮಾಡಲು 40 ಲಕ್ಷ ರೂಪಾಯಿ ನಗದು ಸ್ವೀಕರಿಸುವಾಗ ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾರೆ. ಪ್ರಶಾಂತ್ ಮಾಡಲ್ ಅವರನ್ನು ಬಂಧಿಸಲಾಗಿದ್ದು, ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ. ಬಳಿಕ ಅಧಿಕಾರಿಗಳು ನಿವಾಸ ಮತ್ತು ಕಚೇರಿಗಳಿಂದ 8 ಕೋಟಿ ರೂ.ಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಬೆಳವಣಿಗೆಯು ಆಡಳಿತಾರೂಢ ಬಿಜೆಪಿ ಸರ್ಕಾರಕ್ಕೆ ತೀವ್ರ ಹಿನ್ನಡೆಯಾಗಿ ಪರಿಣಮಿಸಿದೆ.

ಡಾ.ಕೆ.ಎಸ್.ನಾರಾಯಣಾಚಾರ್ಯರ ಕೃತಿಗಳ ವಿಚಾರ ಸಂಕಿರಣ; ಭಾರತೀಯ ಸಾಹಿತ್ಯ ಕುರಿತಂತೆ

ಪಾಶ್ಚಿಮಾತ್ಯರ ಅಪವ್ಯಾಖ್ಯಾನ ತಿದ್ದುವಲ್ಲಿ ನಾರಾಯಣಾಚಾರ್ಯರು ಸರ್ವಶಕ್ತಿ ವಿನಿಯೋಗಿಸಿದರು

ಹಿರಿಯ ಸಂಶೋಧಕ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ ಅಭಿಮತ

ಮೈಸೂರು,ಮಾ.5(ಪಿಎಂ)– ಭಾರತೀಯರಲ್ಲಿ ರಾಷ್ಟ್ರೀಯತೆಯ ಅನುಸರಣೆ, ಅನುಸಂಧಾನವು ಭಾರತೀಯ ಸಾಹಿತ್ಯದ ಅನುಸಂಧಾನ ಮತ್ತು ಅಧ್ಯಯನಗಳಿಂದಲೇ ಸಾಧ್ಯವೆಂದು ಪ್ರತಿಪಾದಿಸಿದ್ದ ಡಾ.ಕೆ.ಎಸ್.ನಾರಾಯಣಾಚಾರ್ಯರು, ಭಾರತೀಯ ಸಾಹಿತ್ಯ ಕುರಿತಂತೆ ಪಾಶ್ಚಿಮಾತ್ಯರ ಅಪವ್ಯಾಖ್ಯಾನಗಳನ್ನು ತಿದ್ದಿ ಖಂಡಿಸುವ ನೆಲೆ–ಹಿನ್ನೆಲೆಗಳಲ್ಲಿ ತಮ್ಮ ಸರ್ವಶಕ್ತಿ ವಿನಿಯೋಗಿಸಿದರು ಎಂದು ಹಿರಿಯ ಸಂಶೋಧಕ ಡಾ.ಟಿ.ವಿ. ವೆಂಕಟಾಚಲಶಾಸ್ತ್ರಿ ಅಭಿಪ್ರಾಯಪಟ್ಟರು.

ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಸಾಹಿತ್ಯಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಚಟುವಟಿಕೆಗಳ ಸಂಸ್ಥೆಯಾದ ಸನಾತನ ಸಭಾದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ವಿದ್ವಾಂಸ ಡಾ.ಕೆ.ಎಸ್.ನಾರಾಯಣಾಚಾರ್ಯರ ಕೃತಿಗಳ ವಿಚಾರ ಸಂಕಿರಣ ಮತ್ತು ಅವರ ‘ಸ್ವಾಧ್ಯಾಯ ಪ್ರವಚನ’ ಕುರಿತು ಒಂದು ಅವಲೋಕನ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಾರಾಯಣಾಚಾರ್ಯರ ನಿರಂತರ ಸಾಹಿತ್ಯ ನಿಷ್ಠೆ ಬೆರಗು ಉಂಟು ಮಾಡುತ್ತದೆ. ಪ್ರವಾಹರೂಪಿ ಆಲೋಚನೆ ಮತ್ತು ಬರವಣಿಗೆ ಅವರದಾಗಿತ್ತು ತಮ್ಮ ಬರವಣಿಗೆ, ಉಪನ್ಯಾಸ, ಸಂವಾದ, ಪ್ರವಚನಗಳ ಮೂಲಕ ಭಾರತೀಯ ಸಮಾಜ, ಸಾಹಿತ್ಯ, ಸಂಸ್ಕೃತಿ ಮತ್ತು ಧರ್ಮಗಳ ಮಹತ್ವವನ್ನು ಪರಿಣಾಮಕಾರಿಯಾಗಿ ಆಧುನಿಕ ಜಗತ್ತಿಗೆ ಮುಟ್ಟಿಸಬೇಕೆಂಬ ತುಡಿತ ಅವರಲ್ಲಿತ್ತು. ಭಾರತೀಯರಲ್ಲಿ ರಾಷ್ಟ್ರೀಯತೆ ಅನುಸರಣೆ, ಅನುಸಂಧಾನವು ಭಾರತೀಯ ಸಾಹಿತ್ಯದ ಅನುಸಂಧಾನ, ಅಧ್ಯಯನಗಳಿಂದಲೇ ಸಾಧ್ಯವೆಂದು ಸಾರಿದ ಅವರು, ಭಾರತೀಯ ಸಾಹಿತ್ಯ ಕುರಿತಂತೆ ಪಾಶ್ಚಿಮಾತ್ಯರ ಸಿದ್ಧಾಂತಗಳನ್ನು ಪ್ರಶ್ನೆಗಳಿಗೆ ಒಳಪಡಿಸಿ, ಅವರ ಅಪವ್ಯಾಖ್ಯಾನ ತಿದ್ದುವ, ಖಂಡಿಸುವಲ್ಲಿ ತಮ್ಮ ಸರ್ವಶಕ್ತಿ ವಿನಿಯೋಗಿಸಿದರು ಎಂದು ಸ್ಮರಿಸಿದರು.

ಅವರ ಚಿಂತನೆ, ಕೃತಿ ರಚನೆ, ವ್ಯಾಖ್ಯಾನ ಎಲ್ಲವೂ ವೈದಿಕ ಸಂಸ್ಕೃತಿ, ಸನಾತನ ಧರ್ಮ, ಭಾರತೀಯ ಮಹಾಕಾವ್ಯಗಳ ವಸ್ತುಗಳ ಕಥಾನಕಗಳ ಮೌಲ್ಯಗಳನ್ನು ಆಶ್ರಯಿಸಿದವು. ಆ ಮೂಲಕ ಅವರು ಭಾರತೀಯತೆ ಸತ್ವಶಾಲಿ ಎಂದು ತೋರಿಸಿದರು. ಜೀವನೋತ್ಸಾಹ ಕಳೆದುಕೊಳ್ಳದೇ ಅಧ್ಯಾಪನ, ಪ್ರವಚನ, ಲೇಖನ, ಉಪನ್ಯಾಸ ಮತ್ತು ಸಂವಾದದಲ್ಲಿ ಪೂರ್ಣವಾಗಿ ತಾವಿದ್ದಷ್ಟು ಕಾಲ ಜಾಗೃತಪ್ರಜ್ಞರಾಗಿದ್ದರು. ಹೆಚ್ಚಾಗಿ ಅವರನ್ನು ಪೌರಾಣಿಕರಾಗಿಯೇ ಗುರುತಿಸಲಾಯಿತೇ ಹೊರತು, ಸಾಹಿತ್ಯದಲ್ಲಿ ಕೆಲಸ ಮಾಡಿದರೂ ಸಾಹಿತ್ಯ ತಜ್ಞರಾಗಿ ಗುರುತಿಸಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನನ್ನ ಬಾಲ್ಯ ಸ್ನೇಹಿತರು: ನಾರಾಯಣಾಚಾರ್ಯರು ಮತ್ತು ನನ್ನ ಹುಟ್ಟೂರು ಒಂದೇ. ಅದೇ ಕನಕಪುರ. 20 ವರ್ಷಗಳ ಹಿಂದೆ ನಮ್ಮ ಊರಲ್ಲಿ ತ್ರಿಮತಸ್ಥ ಬ್ರಾಹ್ಮಣ ಸಂಘದಿಂದ ನಮ್ಮಿಬ್ಬರನ್ನು ಸನ್ಮಾನಿಸಲಾಯಿತು. ನಮ್ಮ ಪೂರ್ವಿಕರ ಮನೆಯನ್ನು ಸದರಿ ಸಂಘಕ್ಕೆ ದಾನ ಮಾಡಿದ್ದೆ. ಅದಕ್ಕಾಗಿ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಇದೇ ವೇಳೆ ಆಯೋಜಿಸಿದ್ದ ಭಜನಾ ಕಾರ್ಯಕ್ರಮವನ್ನು ನಾರಾಯಣಾಚಾರ್ಯರು ತದೇಕಚಿತ್ತದಿಂದ ಆಲಿಸುತ್ತಿದ್ದರು. ಅವರು ನನ್ನ ಬಾಲ್ಯ ಸ್ನೇಹಿತರು. ಒಂದೇ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ನಾವಿಬ್ಬರು ವ್ಯಾಸಂಗ ಮಾಡಿದೆವು ಎಂದು ವೆಂಕಟಾಚಲಶಾಸ್ತ್ರಿ ಹಳೇ ನೆನಪಿಗೆ ಜಾರಿದರು.

ಉದ್ಘಾಟಿಸಿದ ಮಂಗಳೂರು ಗಣೇಶ ಬೀಡಿ ವರ್ಕ್ಸ್‌ನ ವ್ಯವಸ್ಥಾಪಕ ಪಾಲುದಾರ ಡಾ.ಎಂ.ಜಗನ್ನಾಥ ಶೆಣೈ ಮಾತನಾಡಿ, ನಾರಾಯಣಾಚಾರ್ಯರು ಯಾವುದೇ ವಿಷಯವಾದರೂ ಆಳವಾದ ವಿಶ್ಲೇಷಣೆಗೆ ಒಳಪಡಿಸುತ್ತಿದ್ದರು. ಹಾಗಾಗಿ ಜನ ಅವರ ಪ್ರವಚನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದರು. ಅಂತಹ ಮೇರು ವ್ಯಕ್ತಿತ್ವ ಹೊಂದಿದ್ದ ಅವರು ನಮ್ಮನ್ನು ಅಗಲಿರುವುದು ನಾಡಿಗೆ ತುಂಬಲಾರದ ನಷ್ಟ ಎಂದರು.

ದುಷ್ಟರನ್ನು ದೃಢವಾಗಿ ಎದುರಿಸಿದರು: ಹಿರಿಯ ನ್ಯಾಯವಾದಿ ಓ.ಶಾಂ ಭಟ್ ಮಾತನಾಡಿ, ಭಾರತೀಯ ಸಂಸ್ಕೃತಿ ಅಲುಗಾಡಿಸುವವರನ್ನು ದೃಢವಾಗಿ ಎದುರಿಸಿದವರು ನಾರಾಯಣಾಚಾರ್ಯರು. ಅವರು ತಮ್ಮ ಸಾಹಿತ್ಯದ ಮೂಲಕ ನಮ್ಮಲ್ಲಿ ಧರ್ಮ ಶ್ರದ್ಧೆ ಮೂಡಿಸುವಲ್ಲಿ ಅಪಾರ ಕೆಲಸ ಮಾಡಿದ್ದಾರೆ. ಸ್ವಾತಂತ್ರ್ಯ ಪೂರ್ವದ ನಮ್ಮ ರಾಷ್ಟ್ರದಲ್ಲಿ ತಾನು ಪ್ರಜ್ಞಾವಂತ ಎಂದುಕೊಂಡಿದ್ದ ಎಂ.ಎನ್. ರಾಯ್, ಚೀನಾ ಪ್ರವಾಸ ಕೈಗೊಂಡಿದ್ದರು. ಇವರು ಮರಳಿದ ನಂತರ ದೇಶದಲ್ಲಿ ಇವರ ವಿಚಾರಗಳಿಂದ ಪ್ರಭಾವಿತವಾದ ದುಷ್ಟಶಕ್ತಿಗಳು ಹುಟ್ಟಿಕೊಳ್ಳುತ್ತವೆ. ಇಂತಹ ದುಷ್ಟರನ್ನು ದೃಢವಾಗಿ ಎದುರಿಸಿದವರು ನಾರಾಯಣಾಚಾರ್ಯರು ಎಂದು ಹೇಳಿದರು.

ತಪ್ಪು ಕಲ್ಪನೆ ಹೋಗಲಾಡಿಸಿದರು: ಸಾನ್ನಿಧ್ಯ ವಹಿಸಿದ್ದ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಮಾತನಾಡಿ, ನಾರಾಯಣಾಚಾರ್ಯರು ಭೌತಿಕ ದೇಹ ತ್ಯಜಿಸಿ ವರ್ಷ ಕಳೆದಿದೆ. ಅವರು ಆಂಗ್ಲ ಭಾಷೆ ಪ್ರಾಧ್ಯಾಪಕರಾಗಿದ್ದರೂ ನಮ್ಮ ಪ್ರಾಚೀನ ಸಂಸ್ಕೃತಿ ಕರಗತ ಮಾಡಿಕೊಂಡಿದ್ದರು. ನಮ್ಮ ಪ್ರಾಚೀನ ಕೃತಿಗಳ ಬಗ್ಗೆ ಅಧಿಕೃತವಾಗಿ ಮಾತನಾಡುವ ಸಾಮರ್ಥ್ಯ ಹೊಂದಿದ್ದರು. ಮಹಾಭಾರತ ಮತ್ತು ರಾಮಾಯಣ ಕುರಿತು ಒಂದೊಂದು ಸನ್ನಿವೇಶ ಮತ್ತು ಪಾತ್ರಗಳ ಬಗ್ಗೆ ವಿಶ್ಲೇಷಣಾತ್ಮಕವಾಗಿ ಆಯಾಯ ಪಾತ್ರಗಳ ಬಗ್ಗೆ ಹೊಂದಿದ್ದ ತಪ್ಪು ಕಲ್ಪನೆ ಹೋಗಲಾಡಿಸಿ, ವಸ್ತುನಿಷ್ಠವಾಗಿ ಪರಿಚಯಿಸುವಲ್ಲಿ ಮಹತ್ವ ಪಾತ್ರ ವಹಿಸಿದರು ಎಂದರು.

ಬಳಿಕ ವಿಚಾರಗೋಷ್ಠಿಗಳು ನಡೆದವು. ಡಾ.ಎಸ್.ಎಲ್.ಭೈರಪ್ಪ ಸಾಹಿತ್ಯ ಪ್ರತಿಷ್ಠಾನದ ಕಾರ್ಯದರ್ಶಿ ಡಾ.ಜಿ.ಎಲ್.ಶೇಖರ್, ಸನಾತನ ಸಭಾದ ಅಧ್ಯಕ್ಷ ಎನ್.ಎಸ್.ದ್ವಾರಕನಾಥ, ಉಪಾಧ್ಯಕ್ಷ ಪ್ರೊ.ಎಸ್.ರಾಮಪ್ರಸಾದ್, ಕಾರ್ಯದರ್ಶಿ ವಿದ್ವಾನ್ ಗ.ನಾ.ಭಟ್ಟ ಮತ್ತಿತರರು ಹಾಜರಿದ್ದರು.



ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವಿದ್ವಾಂಸ ಡಾ.ಕೆ.ಎಸ್.ನಾರಾಯಣಾಚಾರ್ಯರ ಕೃತಿಗಳ ವಿಚಾರ ಸಂಕಿರಣ ಮತ್ತು ಅವರ ‘ಸ್ವಾಧ್ಯಾಯ ಪ್ರವಚನ’ ಕುರಿತ ಒಂದು ಅವಲೋಕನ ಕಾರ್ಯಕ್ರಮವನ್ನು ಉದ್ಯಮಿ ಡಾ.ಎಂ.ಜಗನ್ನಾಥ ಶೆಣೈ ಉದ್ಘಾಟಿಸಿದರು.

ಅಪಾರ ಪಾಂಡಿತ್ಯ, ಅಷ್ಟೇ ರಾಷ್ಟ್ರಭಕ್ತರು

ನಾರಾಯಣಾಚಾರ್ಯರ ಪಾಂಡಿತ್ಯ ಅಪಾರ. ಅವರು ಅಷ್ಟೇ ರಾಷ್ಟ್ರಭಕ್ತಿ ಹೊಂದಿದ್ದರು. ದೇಶದ ಸಮಸ್ತ ಕೃತಿಗಳನ್ನು ಅಧ್ಯಯನ ಮಾಡಿದವರು. ಅವರು ದಿನಪತ್ರಿಕೆಗಳಲ್ಲಿ ದೇಶದ ಸಂಸ್ಕೃತಿ, ಪರಂಪರೆ ಬಗ್ಗೆ ಲೇಖನಗಳನ್ನು ಬರೆಯುತ್ತಿದ್ದರು. ದೇಶದ ಸಂಸ್ಕೃತಿ–ಪರಂಪರೆ ಬಗ್ಗೆ ವ್ಯತಿರಿಕ್ತ ಅಭಿಪ್ರಾಯಗಳು ವ್ಯಕ್ತವಾದರೆ ಅವುಗಳನ್ನು ಕಠಿಣವಾಗಿ ಖಂಡಿಸುತ್ತಿದ್ದರು. ಮಾತ್ರವಲ್ಲದೆ, ಪ್ರಬುದ್ಧವಾಗಿ ನಮ್ಮ ಸಂಸ್ಕೃತಿ–ಪರಂಪರೆ ಶ್ರೇಷ್ಠತೆಯನ್ನು ಪ್ರತಿಪಾದಿಸುತ್ತಿದ್ದರು. ಇದೇ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅವರು ಹಿರಿಯ ಕಾದಂಬರಿಕಾರ ಡಾ.ಎಸ್.ಎಲ್. ಭೈರಪ್ಪನವರ ಸಹಪಾಠಿಯಾಗಿದ್ದರು. ‘ನನ್ನ ಸಹಪಾಠಿಗಳಲ್ಲಿ ನಾರಾಯಣಾಚಾರ್ಯರಷ್ಟು ವಿದ್ವತ್ ಸಂಪಾದಿಸಿದವರು ಮತ್ತೊಬ್ಬರಿಲ್ಲ ಎಂದು ಡಾ.ಎಸ್.ಎಲ್. ಭೈರಪ್ಪನವರು ತಮ್ಮ ಬರವಣಿಗೆಯಲ್ಲಿ ಒಂದೆಡೆ ಉಲ್ಲೇಖಿಸಿದ್ದಾರೆ.

-ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ಬೀದಿ ನಾಯಿಗಳ ಸಂತತಿ ನಿಯಂತ್ರಣ ಹೇಳಿಕೆ ಖಂಡಿಸಿ

ಪ್ರತಾಪ್ ಸಿಂಹ ವಿರುದ್ಧ ಶ್ವಾನ ಪ್ರಿಯರ ಪ್ರತಿಭಟನೆ



ಮೈಸೂರು,ಮಾ.5(ಎಂಟಿವೈ)– ಬೀದಿ ನಾಯಿಗಳ ಹಾವಳಿ ನಿಯಂತ್ರಿಸಲು ಅವುಗಳನ್ನು ಕೊಲ್ಲುವಂತೆ ಪ್ರಚೋದನಾಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಸಂಸದ ಪ್ರತಾಪ ಸಿಂಹ ವಿರುದ್ಧ ಮೈಸೂರಲ್ಲಿ ಪೀಪಲ್ಸ್ ಫಾರ್ ಅನಿಮಲ್ಸ್ ನೇತೃತ್ವದಲ್ಲಿ ಶ್ವಾನಪ್ರಿಯರು ಪ್ರತಿಭಟನೆ ನಡೆಸಿದರು.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಭಾನುವಾರ ಬೆಳಗ್ಗೆ ಪ್ರತಿಭಟನೆ ನಡೆಸಿದ ಶ್ವಾನಪ್ರಿಯರು ಸಂಸದ ಪ್ರತಾಪ ಸಿಂಹ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಇತ್ತೀಚೆಗೆ ಮೈಸೂರು ಮಹಾನಗರ ಪಾಲಿಕೆ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಬೀದಿನಾಯಿಗಳ ಹಾವಳಿ ನಿಯಂತ್ರಿಸಲು ಅವುಗಳ ನರ ಕಟ್ ಮಾಡಬೇಕು. ಒಂದೊಂದು ನಾಯಿ 10ಕ್ಕೂ ಹೆಚ್ಚು ಮರಿ ಹಾಕುವುದರಿಂದ ಬೀದಿ ನಾಯಿಗಳ ಸಂಖ್ಯೆ ಹೆಚ್ಚಾಗಿದೆ. ಬೀದಿ ನಾಯಿಗಳಿಗೆ ಆಹಾರ ಹಾಕುವುದು ದೊಡ್ಡ ಶ್ರೇಯಸ್ಸಲ್ಲ. ನಾಯಿಗಳ ನಿಯಂತ್ರಣಕ್ಕೆ ಮುಂದಾದರೆ ಶ್ವಾನ ಪ್ರೇಮಿಗಳು ಆಕ್ಷೇಪಿಸುತ್ತಾರೆ ಎಂದು ಸಂಸದ ಪ್ರತಾಪ ಸಿಂಹ ಹೇಳಿಕೆ ನೀಡಿರುವುದು ಖಂಡನೀಯ. ಜವಾಬ್ದಾರಿಯುತ ಸ್ಥಾನದಲ್ಲಿರುವ ಸಂಸದರು ಬೀದಿ ನಾಯಿಗಳ ಕೊಲ್ಲಲು ಪ್ರೇರೇಪಣೆ ನೀಡುವಂತೆ ಮಾತನಾಡಿರುವುದು ತಲೆ ತಗ್ಗಿಸುವ ಸಂಗತಿ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಭೂಮಿ ಮೇಲೆ ಮನುಷ್ಯ ಜೀವಿಸುವುದಕ್ಕೆ ಇರುವ ಹಕ್ಕಿನಿಂದ ಪ್ರಾಣಿಗಳಿಗೂ ಹಕ್ಕಿದೆ. ನ್ಯಾಯಾಲಯವೇ ಪ್ರಾಣಿಗಳಿಗೂ ಹಕ್ಕು ನೀಡಿದೆ. ಆದರೆ, ಇದರ ಅರಿವೇ ಇಲ್ಲದಂತೆ ಸಂಸದರು ಮಾತನಾಡಿದ್ದಾರೆ.

ನಾಯಿಗಳು ಬೈಕ್ ಹಾಗೂ ಕಾರುಗಳನ್ನು ಅಟ್ಟಿಸಿಕೊಂಡು ಬರುತ್ತವೆ ಎಂದು ಹೇಳಿದ್ದಾರೆ. ಯಾವುದೇ ನಾಯಿಗಳು ಬೇಕಂತಲೇ ಅಟ್ಟಿಸಿಕೊಂಡು ಹೋಗುವುದಿಲ್ಲ. ಯಾವುದಾದರೂ ವಾಹನ ನಾಯಿಗಳಿಗೆ ಡಿಕ್ಕಿ ಹೊಡೆದು ಗಾಯಗೊಳಿಸಿದ್ದರೆ ಮಾತ್ರ, ಅಂತಹ ವಾಹನಗಳನ್ನು ಕಂಡರೆ ಭಯದಿಂದ ಅಟ್ಟಿಸಿಕೊಂಡು ಹೋಗುತ್ತವೆ. ಇದು ನಾಯಿಗಳ ಮಾನಸಿಕ ಸ್ಥಿತಿಯಾಗಿದೆ. ಈಗಾಗಲೇ ಕೆಲವು ಕಿಡಿಗೇಡಿಗಳು ಆಹಾರದಲ್ಲಿ ವಿಷ ಬೆರಸಿ ಹತ್ಯೆ ಮಾಡುತ್ತಿರುವ ಘಟನೆ ಹಲವೆಡೆ ನಡೆಯುತ್ತಲೇ ಇದೆ. ಈ ಹಿನ್ನೆಲೆಯಲ್ಲಿ ಸಂಸದ ಪ್ರತಾಪ ಸಿಂಹ ನೀಡಿರುವ ಹೇಳಿಕೆ ಹಿಂಪಡೆಯಬೇಕು. ಬೇರೆ ಬೇರೆ ಕ್ಷೇತ್ರಗಳಲ್ಲಿ ಬಿಜೆಪಿ ಶಾಸಕರು ಬೀದಿನಾಯಿಗಳನ್ನು ದತ್ತು ಪಡೆಯುವಂತೆ ಸಲಹೆ ನೀಡುತ್ತಿದ್ದಾರೆ. ಅದೇ ಮಾದರಿಯಲ್ಲಿ ಮೈಸೂರಲ್ಲೂ ಬೀದಿ ನಾಯಿಗಳ ರಕ್ಷಣೆಗೆ ಪ್ರತಾಪ ಸಿಂಹ ಕ್ರಮ ಕೈಗೊಳ್ಳಬೇಕು. ಅವುಗಳ ನರ ಕಟ್ ಮಾಡಿ ಎಂದು ಹೇಳುವುದಕ್ಕೆ ಅವರಿಗೆ ಯಾವುದೇ ಅಧಿಕಾರವಿಲ್ಲ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಶ್ವಾನ ಪ್ರಿಯರಾದ ಭಾಗ್ಯಲಕ್ಷ್ಮಿ, ಸುಪ್ರೀತ್ ನಾರಾಯಣ್, ರೋಹಿಣಿ, ಸುಪ್ರಿಯಾ, ವಿಜಯಲಕ್ಷ್ಮಿ, ಹರ್ಷ, ಕೋಮಲ, ಹರಿಣಿ, ಜಯ, ರೋಹಿಣಿ, ಕಾವ್ಯ, ಅಜಯ್ ಜೈನ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ಮುಕ್ತ ಅಭಿಯಾನಕ್ಕೆ ಚಾಲನೆ



ಮೈಸೂರು,ಮಾ.5(ಎಂಟಿವೈ)– ಚಾಮುಂಡಿಬೆಟ್ಟವನ್ನು ಪ್ಲಾಸ್ಟಿಕ್ ಮುಕ್ತಗೊಳಿಸುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ನಡೆಸುತ್ತಿರುವ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹ ವಿಶೇಷ ಅಭಿಯಾನದ ಮೂರನೇ ದಿನವಾದ ಭಾನುವಾರ 25ಕ್ಕೂ ಹೆಚ್ಚು ಪರಿಸರಾಸಕ್ತರು ಪಾಲ್ಗೊಂಡು, ಬೆಟ್ಟದ ರಸ್ತೆ ಬದಿ ಬಿದ್ದಿದ್ದ ನೂರಾರು ಮದ್ಯದ ಬಾಟಲಿಗಳು ಹಾಗೂ ನಾಲ್ಕು ಮೂಟೆ ಕಸ ಸಂಗ್ರಹಿಸಿದರು.

ಚಾಮುಂಡಿಬೆಟ್ಟದ ತಾವರೆಕಟ್ಟೆಯಿಂದ ಮುಖ್ಯ ರಸ್ತೆಯಲ್ಲಿ ಬೆಳಗ್ಗೆ 7.30ಕ್ಕೆ ಅರಣ್ಯ ಸಿಬ್ಬಂದಿಗಳೊಂದಿಗೆ ಸ್ವಚ್ಛತಾ ಕಾರ್ಯ ಆರಂಭಿಸಿದ ಪರಿಸರ ಕಾಳಜಿಯುಳ್ಳ ಸ್ವಯಂ ಸೇವಕರು 9.30ರವರೆಗೂ ಬೆಟ್ಟದ ಮುಖ್ಯ ರಸ್ತೆಯ ಎರಡೂ ಬದಿಯಲ್ಲೂ ಜನರು ಬಿಸಾಡಿದ್ದ ಪ್ಲಾಸ್ಟಿಕ್ ತ್ಯಾಜ್ಯ, ಮದ್ಯದ ಖಾಲಿ ಬಾಟಲಿಗಳನ್ನು ಸಂಗ್ರಹಿಸಿದರು. ಎರಡು ಗಂಟೆ ನಡೆದ ಸ್ವಚ್ಛತಾ ಅಭಿಯಾನದಲ್ಲಿ ನೂರಾರು ಮದ್ಯದ ಖಾಲಿ ಬಾಟಲ್ ಸಿಕ್ಕಿದ್ದು, ಧಾರ್ಮಿಕ ಕೇಂದ್ರವಾಗಿರುವ ಚಾಮುಂಡಿಬೆಟ್ಟ ಕುಡುಕರ ತಾಣವಾಗುತ್ತಿದೆಯೇ ಎಂಬ ಪ್ರಶ್ನೆ ಕಾಡತೊಡಗಿದೆ.

ರಸ್ತೆ ಬದಿಯ ಅರಣ್ಯ ಪ್ರದೇಶದಲ್ಲಿ ಜನರು ಎಸೆದಿರುವ ಪ್ಲಾಸ್ಟಿಕ್ ಕವರ್‌ಗಳು ಹಾಗೂ ಮನೆಯಲ್ಲಿ ಪೂಜೆ ಮಾಡಿದ ಬಳಿಕ ಹೂವು ಸೇರಿದಂತೆ ಇನ್ನಿತರ ವಸ್ತುಗಳನ್ನು ಪೊಟ್ಟಣ ಕಟ್ಟಿ ಎಸೆದು ಹೋಗಿರುವುದು ಕಂಡು ಬಂತು. ಸಂಗ್ರಹವಾದ ಎಲ್ಲಾ ತ್ಯಾಜ್ಯಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಅರಣ್ಯ ಇಲಾಖೆಯ ಸಿಬ್ಬಂದಿಗಳು ವಿದ್ಯಾರಣ್ಯಪುರಂನಲ್ಲಿರುವ ಪಾಲಿಕೆಯ ಕಸ ವಿಲೇವಾರಿ ಘಟಕಕ್ಕೆ ರವಾನಿಸಿದರು.

ಸ್ವಚ್ಛತಾ ಅಭಿಯಾನದಲ್ಲಿ ಆರ್‌ಎಫ್‌ಓ ಎಂ.ಆರ್.ಧನ್ಯಶ್ರೀ, ಡಿಆರ್‌ಎಫ್‌ಓ ಸತೀಶ್, ಸಿಬ್ಬಂದಿಗಳಾದ ಅಪ್ಪಣ್ಣ, ಗಗನ್ ಅವರೊಂದಿಗೆ ಪರಿಸರ ಬಳಗ ಹಾಗೂ ಚಾಮುಂಡಿ ಬೆಟ್ಟ ಉಳಿಸಿ ಸಮಿತಿಯ ಸದಸ್ಯರು ಪರಶುರಾಮೇಗೌಡ, ಲೀಲಾ ಶಿವಕುಮಾರ್, ಪ್ರಮೀಳಾ ರವೀಂದ್ರ, ಗಂಟಯ್ಯ, ಲೋಲಕುಮಾರ್, ಆನಂದಮೂರ್ತಿ, ಸಿದ್ದಲಿಂಗಯ್ಯ, ಕುಸುಮ ಆಯರಹಳ್ಳಿ, ಭಾಗ್ಯ ಶಂಕರ್, ಅಂಜನಾ, ಕಲಾ, ಜಾನಕಿ, ಶ್ರೀಲಕ್ಷ್ಮಿ, ನಾಗೇಶ್, ದೇವರಾಜ್, ಚಂದ್ರಶೇಖರ್, ನಂಜುಂಡ, ಮನು, ಸಮರ್ಥ, ಅಶ್ವಥ್, ಗಿರೀಶ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ನನ್ನಿಂದ ಬೆಳೆದವರೇ ನನಗೆ ಚುಚ್ಚುತ್ತಾರೆ: ಜಿಟಿಡಿ

ಮೈಸೂರು, ಮಾ.5–‘ನಾನು ಎಲ್ಲರನ್ನು ಬೆಳೆಸುತ್ತೇನೆ. ಬೆಳೆದ ಮೇಲೆ ಅವರೇ ನನಗೆ ಚುಚ್ಚುತ್ತಾರೆ’ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ತಮ್ಮನ್ನು ಟೀಕಿಸುವವರು ಮತ್ತು ಪಕ್ಷ ತೊರೆದು ಹೋದವರಿಗೆ ಮಾರ್ಮಿಕವಾಗಿ ಟಾಂಗ್ ನೀಡಿದರು.

ಸೋಮನಾಥನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಮತ್ತು ಚಂದನವನ ಪಾರ್ಕ್ ಸಮಿತಿ ವತಿಯಿಂದ ಭಾನುವಾರ ಸೋಮನಾಥನಗರದ ವಾಟರ್ ಟ್ಯಾಂಕ್ ಪಾರ್ಕ್‌ನಲ್ಲಿ ಏರ್ಪಡಿಸಲಾಗಿದ್ದ ಸೋಮನಾಥನಗರ ಬಡಾವಣೆಯ ಕುಡಿಯುವ ನೀರಿನ ಜಲಧಾರೆ ಪೂಜೆ ನೆರವೇರಿಸಿ ಅವರು ಮಾತನಾಡುತ್ತಿದ್ದರು.

ನಮ್ಮ ಜಾತಕದಲ್ಲೇ ಹಾಗೇ ಬರೆದಿರಬೇಕು. ನನ್ನಿಂದ ಬೆಳೆದವರೆಲ್ಲ ನನ್ನನ್ನು ತಿವಿಯುತ್ತಿದ್ದಾರೆ. ನಾನೇನು ಜಾತಕ ಬರೆಸಿಲ್ಲ. ಜಾತಕದಲ್ಲಿ ಹಾಗೆ ಇದ್ದರೂ ಇರಬಹುದು ಬಿಡಿ. ನಾನು ಅದಕ್ಕೆ ತಲೆ ಕೆಡಿಸಿಕೊಳ್ಳುವುದಿಲ್ಲ ಎಂದು ನುಡಿದರು.

ನಾನು ಚಾಮುಂಡೇಶ್ವರಿ ಕ್ಷೇತ್ರಕ್ಕೆ ಆಗಬೇಕಿರುವ ಎಲ್ಲಾ ಕೆಲಸಗಳನ್ನು ಸರ್ಕಾರದ ಮಟ್ಟದಲ್ಲಿ ಹೋರಾಟ ಮಾಡಿ ಅನುದಾನ ಮಂಜೂರು ಮಾಡಿಸಿಕೊಂಡು ಕೆಲಸ ಮಾಡಿಸುತ್ತಿದ್ದೇನೆ ಎಂದ ಅವರು, ಯಾವುದೇ ಸರ್ಕಾರ ಬಂದರೂ ನಾನು ಜನಪರ ಕೆಲಸಗಳಿಗೆ ಬೇಕಾದ ಅನುದಾನವನ್ನು ತರುತ್ತೇನೆ ಎಂದು ಹೇಳಿದರು.

ಸೋಮನಾಥ ನಗರದ ಸಮಸ್ಯೆಯನ್ನು ತಿಳಿದ ನಾನು, ಹಿರಿಯ ಅಧಿಕಾರಿಗಳು ಮತ್ತು ಸರ್ಕಾರದ ಜೊತೆ ಮಾತುಕತೆ ನಡೆಸಿ ಬಡಾವಣೆಯನ್ನು ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಸೇರಿಸಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುತ್ತಿದ್ದೇನೆ. ಇದನ್ನು ನಿವಾಸಿಗಳು ಅರ್ಥ ಮಾಡಿಕೊಂಡು ಸಹಕರಿಸಬೇಕು ಎಂದು ಹೇಳಿದ ಅವರು, ನೀರಿನ ಸಮಸ್ಯೆ ನಿವಾರಿಸಲು ತಮ್ಮೊಂದಿಗೆ ಸಹಕರಿಸಿದ ಅಧಿಕಾರಿಗಳನ್ನು ಅಭಿನಂದಿಸಿದರು.


ಕುಮಾರಣ್ಣ ಮುಖ್ಯಮಂತ್ರಿ: ಕೆಲವೊಂದು ಕಾರಣಗಳಿಂದ ಜೆಡಿಎಸ್‌ನಿಂದ ದೂರ ಉಳಿದಿದ್ದ ನನ್ನನ್ನು ಕಾಂಗ್ರೆಸ್ ಮತ್ತು ಬಿಜೆಪಿ ಮುಖಂಡರು ತಮ್ಮ ಪಕ್ಷ ಸೇರುವಂತೆ ಒತ್ತಾಯ ಮಾಡುತ್ತಿದ್ದರು. ನಾನು ಬ್ಯಾಲೆನ್ಸ್ ಮಾಡಿಕೊಂಡು ಬಂದು ಕೊನೆಗೆ ಜೆಡಿಎಸ್ ಪಕ್ಷದಲ್ಲೇ ಉಳಿದು ಒಳ್ಳೆಯ ಕೆಲಸ ಮಾಡಿದೆ ಎಂದು ಅವರು ಇದೇ ವೇಳೆ ತಿಳಿಸಿದರು.

ಈ ವಿಚಾರ ಇತ್ತೀಚೆಗೆ ವಿಧಾನಸೌಧಕ್ಕೆ ತೆರಳಿದ್ದಾಗ ಚರ್ಚೆಯಾಯಿತು. ನನಗೆ ಸಿಕ್ಕಿದ ಶಾಸಕರುಗಳು ಜೆಡಿಎಸ್‌ನಲ್ಲೇ ಉಳಿದು ಒಳ್ಳೆಯ ಕೆಲಸ ಮಾಡಿದ್ದೀರಿ. ಮುಂದಕ್ಕೆ ನಿಮ್ಮದೇ ಅಧಿಕಾರ, ಜೆಡಿಎಸ್ ಅಧಿಕಾರಕ್ಕೆ ಬರೋದು ಗ್ಯಾರಂಟಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗೋದು ಗ್ಯಾರಂಟಿ ಎಂದು ಹೇಳಿದರು ಎಂದು ಸ್ಮರಿಸಿದ ಜಿಟಿಡಿ, ನಮ್ಮ ಪಕ್ಷ ಅಧಿಕಾರಕ್ಕೆ ಬರುತ್ತೆ. ಕುಮಾರಣ್ಣ ಮುಖ್ಯಮಂತ್ರಿಯಾಗ್ತಾರೆ. ಇನ್ನಷ್ಟು ಅಭಿವೃದ್ಧಿ ಕಾರ್ಯ ಮಾಡಲು ನಮಗೆ ಶಕ್ತಿ ಬರುತ್ತದೆ ಎಂದರು.

ಇದೇ ವೇಳೆ ಸೋಮನಾಥ ನಗರದ ನೀರಿನ ಬವಣೆಯನ್ನು ನೀಗಿಸಿದ ಶಾಸಕ ಜಿ.ಟಿ.ದೇವೇಗೌಡರನ್ನು ಸಂಘದ ವತಿಯಿಂದ ಮತ್ತು ಬಡಾವಣೆ ನಿವಾಸಿಗಳು ಅಭಿನಂದಿಸಿದರು. ಸಂಘದ ಗೌರವ ಅಧ್ಯಕ್ಷ ರಮೇಶ್ ಕಳ್ಳಿಪಾಳ್ಯ ಅವರನ್ನು ಕೂಡ ಇದೇ ಸಂದರ್ಭದಲ್ಲಿ ಅಭಿನಂದಿಸಲಾಯಿತು.

ಬಡಾವಣೆಯಲ್ಲಿ ಸ್ವಚ್ಛತಾ ಕಾರ್ಯ ನಡೆಸುವ ಪೌರಕಾರ್ಮಿಕರು ಮತ್ತು ನೀರು ಬಿಡುವ ನೀರುಗಂಟಿ ಸೇರಿದಂತೆ ಹಲವರನ್ನು ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ಪುಟ್ಟೇಗೌಡ, ಪದಾಧಿಕಾರಿಗಳು ಮತ್ತು ಬಡಾವಣೆ ನಿವಾಸಿಗಳು ಭಾಗವಹಿಸಿದ್ದರು.

ಸೋಮನಾಥನಗರದ ನೀರಿನ ಬವಣೆ ನೀಗಿಸಿದ ಜಿಟಿಡಿಗೆ ಸನ್ಮಾನ



ಮೈಸೂರು ಮಿತ್ರ ಸೋಮವಾರ 6 ಮಾರ್ಚ್ 2023

ಮತ್ತೊಮ್ಮೆ ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ

ಜೆಡಿಎಸ್ ಸಮಾವೇಶದಲ್ಲಿ ಶಾಸಕ ಜಿ.ಟಿ.ದೇವೇಗೌಡ ಭವಿಷ್ಯ



ಹುಣಸೂರು, ಮಾ.5– ಹುಣಸೂರು ಜನತೆ ಮುಂಬರುವ ಚುನಾವಣೆಯಲ್ಲಿ ಪ್ರಾದೇಶಿಕ ಪಕ್ಷ ಜೆಡಿಎಸ್ ಬೆಂಬಲಿಸಿ. ಆ ಮೂಲಕ ಸ್ಪಷ್ಟ ಬಹುಮತದೊಂದಿಗೆ ಜೆಡಿಎಸ್ ಅಧಿಕಾರಕ್ಕೆ ಬರಲಿದ್ದು, ಮತ್ತೊಮ್ಮೆ ಹೆಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಲಿದ್ದಾರೆ ಎಂದು ಶಾಸಕ ಜಿ.ಟಿ.ದೇವೇಗೌಡ ಭವಿಷ್ಯ ನುಡಿದರು.

ನಗರದ ಸಾಯಿಬಾಬಾ ದೇವಾಲಯದ ಮುಂಭಾಗದ ಮೈದಾನದಲ್ಲಿ ತಾಲೂಕು ಜೆಡಿಎಸ್ ವತಿಯಿಂದ ಆಯೋಜಿಸಿದ್ದ ಬೂತ್ ಮಟ್ಟದ ಕಾರ್ಯಕರ್ತರ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಕಳೆದ 15 ವರ್ಷಗಳಿಂದ ಹುಣಸೂರಿನ ಜನತೆ ಸಾಕಷ್ಟು ನೋವು ಅನುಭವಿಸಿ ಈಗ ಎಚ್ಚೆತ್ತುಕೊಂಡಿದ್ದಾರೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಪ್ರಾದೇಶಿಕ ಪಕ್ಷ ಜೆಡಿಎಸ್ ಬೆಂಬಲಿಸಲಿದ್ದಾರೆ. ಅದೇ ರೀತಿ ಈ ಬಾರಿ ರಾಜ್ಯದಲ್ಲಿ ಜೆಡಿಎಸ್ 140 ರಿಂದ 145 ಸ್ಥಾನಗಳನ್ನು ಪಡೆದು ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬರಲಿದ್ದು, ಕುಮಾರಸ್ವಾಮಿ ಮತ್ತೊಮ್ಮೆ ಮುಖ್ಯಮಂತ್ರಿಯಾಗಲಿದ್ದಾರೆ ಎಂದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರಿಗೆ ಅನ್ಯಾಯವಾಯಿತೆಂದು ಅವರನ್ನು ಬೆಂಬಲಿಸಿದ್ದಕ್ಕೆ ನನಗೆ ನನ್ನ ಕ್ಷೇತ್ರದಲ್ಲಿ ಸೋಲಾಯಿತು. ಅದು ಈಗ ವೀರಶೈವ ಸಮುದಾಯಕ್ಕೆ ಮನವರಿಕೆಯಾಗಿದ್ದು, ಇಂದಿನ ಕಾರ್ಯಕ್ರಮದಲ್ಲಿ ಸಮುದಾಯದವರು ಚುನಾವಣಾ ಖರ್ಚಿಗಾಗಿ 25 ಲಕ್ಷ ರೂ.ಗಳನ್ನು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡರಿಗೆ ನೀಡಿ, ಚುನಾವಣೆಯಲ್ಲಿ ಬೆಂಬಲಿಸುವುದಾಗಿ ಭರವಸೆ ನೀಡಿದ್ದಾರೆ ಎಂದರು.

ನಾನು ಎಲ್ಲಾ ವರ್ಗದ ಸಣ್ಣಪುಟ್ಟ ಸಮುದಾಯದವರನ್ನು ಗುರ್ತಿಸಿ ಅವರಿಗೆ ಸ್ಥಾನಮಾನ ಕಲ್ಪಿಸಿದೆ. ಕುರುಬ ಸಮಾಜದ ಕಲ್ಕುಣಿಕೆ ರಮೇಶ್ ಅವರನ್ನು ನಗರಸಭೆ ಅಧ್ಯಕ್ಷರನ್ನಾಗಿ, ವಿಶ್ವಕರ್ಮ ಜನಾಂಗದ ಕೃಷ್ಣಚಾರಿ ಅವರನ್ನು ನಗರಸಭೆ ಸದಸ್ಯರನ್ನಾಗಿ, ಗಿರಿಜನ ಸಮುದಾಯದ ಜಾಜಿಯನ್ನು ಜಿಪಂ ಅಧ್ಯಕ್ಷೆಯನ್ನಾಗಿ, ಹೀಗೆ ಮಡಿವಾಳ, ಸವಿತಾ, ದಲಿತ ಎನ್ನದೇ ಸಣ್ಣಪುಟ್ಟ ಸಮುದಾಯದವರಿಗೆ ಸ್ಥಾನಮಾನ ಕಲ್ಪಿಸಿ ಸಾಮಾಜಿಕ ನ್ಯಾಯ ದೊರಕಿಸಿದ್ದೇನೆ. ಆದರೆ ನೀವು ಯಾವ ಸಮುದಾಯವನ್ನು ಮುಂದೆ ತಂದಿದ್ದೀರಿ ಎಂದು ಪ್ರಶ್ನಿಸಿದ ಅವರು, ದಲಿತರ ಸಂಬಂಧ ಬೆಳೆಸಿದರೇ ದಲಿತರು ಓಟು ಹಾಕುತ್ತಾರೆಯೇ, ಒಕ್ಕಲಿಗರ ಸಂಬಂಧ ಬೆಳೆಸಿದರೇ ಒಕ್ಕಲಿಗರು ಓಟು ಹಾಕುತ್ತಾರೆಯೇ, ಇವೆಲ್ಲ ಪ್ರೇಮ ವಿವಾಹಗಳು. ನೀವೇ ಹೋಗಿ ಸಂಬಂಧ ಬೆಳೆಸಿಲ್ಲ. ನಿಮ್ಮ ಬಾಯಿ ಚಪಲಕ್ಕೆ ಹೇಳಿಕೊಂಡು ಜನರನ್ನು ಓಲೈಸುವ ತಂತ್ರಗಾರಿಕೆ ಕ್ಷೇತ್ರದಲ್ಲಿ ನಡೆಯುವುದಿಲ್ಲ. ತಾಲೂಕಿನ ಜನತೆ ತಮಗೆ ಯಾರು ಹಿತವರು ಎಂಬುದನ್ನು ತಿಳಿದಿದ್ದಾರೆ ಎಂದು ಶಾಸಕ ಹೆಚ್.ಪಿ.ಮಂಜುನಾಥ್ ಹೆಸರೇಳದೇ ಟೀಕಿಸಿದರು.

ನನ್ನ ಅವಧಿಯಲ್ಲಿ ತಾಲೂಕಿಗೆ 75 ಕುಡಿಯುವ ನೀರಿನ ಟ್ಯಾಂಕ್‌ಗಳು, ಹಳೇ ಸೇತುವೆ ನಿರ್ಮಾಣಕ್ಕೆ ಅನುದಾನ, ಕೆಆರ್‌ಎಸ್ ಮತ್ತು ಕೆ.ಆರ್. ನಗರದಿಂದ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಕಾಡಂಚಿನ ಪ್ರದೇಶದಲ್ಲಿ ಕಾಡಾನೆಗಳ ಹಾವಳಿ ತಡೆಗಾಗಿ ರೈಲ್ವೆ ತಡೆಗೋಡೆ ನಿರ್ಮಾಣ, ಶಾಲೆಗಳು, ಪ್ರೌಢಶಾಲೆಗಳು, ಹಾಸ್ಟೆಲ್‌ಗಳು, ಕಾಲೇಜುಗಳು ಸೇರಿದಂತೆ ಸಾಕಷ್ಟು ಕಾರ್ಯಕ್ರಮ ರೂಪಿಸಿ ತಾಲೂಕಿಗೆ ತಂದಿದ್ದು ನಾನು. ನೀನೇನು (ಶಾಸಕ ಹೆಚ್.ಪಿ.ಮಂಜುನಾಥ್) ಅಭಿವೃದ್ಧಿ ಮಾಡಿದ್ದೀಯಾ? ಎಂದು ಪ್ರಶ್ನಿಸಿದ ಅವರು, ಕಳೆದ 15 ವರ್ಷಗಳಲ್ಲಿ ತಾಲೂಕಿನ ರಸ್ತೆಗಳೆಲ್ಲಾ ಗುಂಡಿ ಬಿದ್ದಿರುವುದೇ ನಿಮ್ಮ ಸಾಧನೆ ಎಂದರು.

ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್ ಗೌಡ ಮಾತನಾಡಿ, ಶಾಸಕ ಹೆಚ್.ಪಿ.ಮಂಜುನಾಥ್ ನಮ್ಮ ಮೇಲೆ 3 ಆರೋಪ ಮಾಡುತ್ತಿದ್ದು, ನಾನು ಹುಣಸೂರಿಗೆ ಬಂದ ಮೇಲೆ ಪೊಲೀಸ್ ಇಲಾಖೆಯಲ್ಲಿ ಪ್ರಕರಣ ಜಾಸ್ತಿಯಾಗಿದೆ ಎನ್ನುತ್ತಾರೆ. ಆದರೆ ಪೊಲೀಸ್ ದಾಖಲೆಗಳ ಪ್ರಕಾರ ಅವರ ಸಹೋದರ ಅಮರ್‌ನಾಥ್ ಅವರೇ 78 ಮಂದಿ ಮೇಲೆ ಪ್ರಕರಣ ದಾಖಲಿಸಿದ್ದಾರೆ. ಅಲ್ಲದೇ 2013ರಲ್ಲಿ ಸೊಸೈಟಿ ವಿಚಾರವಾಗಿ ನನ್ನ ಮೇಲೆ ಕೇಸ್ ಹಾಕಿಸಿದ್ದಾರೆ. ಅಲ್ಲದೇ ಸಹಕಾರ ಕ್ಷೇತ್ರವನ್ನು ನಾವು ದುರ್ಬಳಕೆ ಮಾಡಿಕೊಂಡಿದ್ದೇವೆ ಎಂದು ಹೇಳುವ ಇವರಿಗೆ ತಾಲೂಕಿನ ಜನರೆ ಉತ್ತರ ಹೇಳುತ್ತಾರೆ. ನಾನು ಬರುವುದಕ್ಕೆ ಮೊದಲು ತಾಲೂಕಿನ 27 ಸೊಸೈಟಿಗಳಿಗೆ ಕೇವಲ 20 ಕೋಟಿ ಸಾಲ ನೀಡಲಾಗಿತ್ತು. ಆದರೆ ನಾನು ಬಂದ ಮೇಲೆ ರೈತರಿಗೆ 122 ಕೋಟಿಗೂ ಹೆಚ್ಚು ಸಾಲ ನೀಡಲಾಗಿದೆ. ಅಲ್ಲದೆ ತಾಲೂಕಿನ ಸೊಸೈಟಿಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಿ, ಸಹಕಾರ ಸಂಘಗಳ ಅಭಿವೃದ್ಧಿಗೆ ಸಹಕರಿಸಿದ್ದೇವೆ ಎಂದರು.

ನಿತ್ಯ ಸಾಗರೋಪಾದಿಯಲ್ಲಿ ಯುವಕರು ಕಾಂಗ್ರೆಸ್, ಬಿಜೆಪಿ ತೊರೆದು ಜೆಡಿಎಸ್ ಸೇರ್ಪಡೆಗೊಳ್ಳುತ್ತಿದ್ದಾರೆ. ಇವರೆಲ್ಲರನ್ನು ರಾತ್ರಿ 2 ಗಂಟೆವರೆಗೆ ಭೇಟಿ ಮಾಡುತ್ತಿದ್ದು, ಚುನಾವಣಾ ಖರ್ಚಿಗಾಗಿ ಜನರೇ ಹಣ ನೀಡುತ್ತಿದ್ದಾರೆ ಎಂದರು.

ಬಿಳಿಕೆರೆ ನಿವೃತ್ತ ಉಪ ತಹಸೀಲ್ದಾರ್ ಮಹದೇವನಾಯಕ ಮಾತನಾಡಿ, ಮೈಸೂರಿನಲ್ಲಿ ಶಾಸಕ ಜಿ.ಟಿ.ದೇವೇಗೌಡರು ಸಾಗುವಳಿ ನೀಡುತ್ತಿದ್ದಾರೆ. ಆದರೆ ಹುಣಸೂರಿನಲ್ಲಿ ಸಾವಿರಾರು ಸಾಗುವಳಿಗಳನ್ನು ನೀಡಲು ಅವಕಾಶವಿದ್ದರೂ, ಶಾಸಕ ಹೆಚ್.ಪಿ.ಮಂಜುನಾಥ್ ಆಸಕ್ತಿ ತೋರುತ್ತಿಲ್ಲ. ಮುಂದೆ ಹರೀಶ್‌ಗೌಡರು ಶಾಸಕರಾಗಿ ಬಂದರೆ ಅವರೇ ನೀಡುತ್ತಾರೆ ಎಂದರು.

ತಾಲೂಕು ಜೆಡಿಎಸ್ ಅಧ್ಯಕ್ಷ ದೇವರಾಜ ಒಡೆಯರ್, ಪುರಸಭಾಧ್ಯಕ್ಷ ಹಜರತ್ ಜಾನ್, ಸದಸ್ಯ ಹೆಚ್.ಎಸ್.ವರದರಾಜು, ಮಾಜಿ ಜಿಪಂ ಸದಸ್ಯ ಸಿ.ಟಿ.ರಾಜಣ್ಣ, ರಂಜಿತಾ ಚಿಕ್ಕಮಾದು ಮಾತನಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಮಾಜಿ ಜಿಪಂ ಸದಸ್ಯ ಹೆಚ್.ಎಂ. ಪಜಲುಲ್ಲ, ಕಟ್ಟನಾಯ್ಕ, ಗಣೇಶ್‌ಗೌಡ, ಜಯರಾಮ್, ಜಿಪಂ ಸದಸ್ಯ ಎಂ.ಬಿ. ಸುರೇಂದ್ರ, ಮೈಮುಲ್ ನಿರ್ದೇಶಕ ಕೆ.ಎಸ್. ಕುಮಾರ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷೆ ವಸಂತಮ್ಮ ತಾಪಂ ಮಾಜಿ ಸದಸ್ಯರಾದ ಎಂ.ಬಿ. ಪ್ರಭು, ಪ್ರೇಮೇಗೌಡ, ನಗರಸಭಾ ಸದಸ್ಯರಾದ ಶರವಣ, ಕೃಷ್ಣರಾಜಗುಪ್ತ ರಾಣಿ ಪೆರುಮಾಳ್, ಶ್ರೀನಾಥ್, ದೇವರಾಜು, ಬಸವಲಿಂಗಯ್ಯ, ಶಶಿಕಲಾ, ಅಣ್ಣಯ್ಯ, ಶ್ರೀಧರ್, ಡೇವಿಡ್, ವಿಎಸ್‌ಎಸ್‌ಎನ್ ಮಾಜಿ ಅಧ್ಯಕ್ಷ ವಾಸೇಗೌಡ, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ವೆಂಕಟೇಶ್, ಉಪಾಧ್ಯಕ್ಷ ಹೆಚ್.ಟಿ.ಬಾಬು, ರಾಮೇಗೌಡ, ಆಸ್ವಾಳ್ ಕೆಂಪೇಗೌಡ, ಕೃಷ್ಣಕುಮಾರ್, ವೆಂಕಟೇಶ್, ಸತೀಶ್ ಪಾಪಣ್ಣ, ನಾಗಪ್ರಸಾದ್ ಗುಪ್ತ, ಸರ್ದಾರ್ ಸೇರಿದಂತೆ 5 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಇದ್ದರು.

ಹುಣಸೂರು ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡರಿಗೆ

ವೀರಶೈವ ಸಮುದಾಯದಿಂದ 25, ಜೆಡಿಎಸ್ ಮುಖಂಡನಿಂದ 30 ಲಕ್ಷ ದೇಣಿಗೆ



ಹುಣಸೂರು, ಮಾ.5– ಪ್ರಸ್ತುತ ರಾಜಕೀಯ ವ್ಯವಸ್ಥೆಯಲ್ಲಿ ಹಣವಿಲ್ಲದೇ ರಾಜಕಾರಣ ಮಾಡುವುದು ಕಷ್ಟ ಎಂಬ ಮಾತಿದೆ. ಇದಕ್ಕೆ ವ್ಯತಿರಿಕ್ತವಾಗಿ ಹುಣಸೂರು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡರಿಗೆ ವೀರಶೈವ ಸಮುದಾಯ ಹಾಗೂ ಜೆಡಿಎಸ್ ಮುಖಂಡರು 55 ಲಕ್ಷ ರೂ. ದೇಣಿಗೆ ನೀಡುವ ಮೂಲಕ ಇತಿಹಾಸ ಸೃಷ್ಟಿಸಿದ್ದಾರೆ.

ಯಾವುದೇ ಚುನಾವಣೆ ಬಂದರೂ ಹಣ ಮತ್ತು ಜಾತಿ ಲೆಕ್ಕಾಚಾರ ನಡೆಯಲಿದೆ. ಇದಕ್ಕೆ ವಿರುದ್ಧವಾಗಿ ಪಟ್ಟಣದ ಸಾಯಿ ಮಂದಿರ ಮುಂಭಾಗದ ಆವರಣದಲ್ಲಿಂದು ತಾಲೂಕು ಜೆಡಿಎಸ್ ವತಿಯಿಂದ ಆಯೋಜಿಸಿದ್ದ ಬೂತ್ ಮಟ್ಟದ ಕಾರ್ಯಕರ್ತರ ಸಮಾವೇಶದಲ್ಲಿ ಉದ್ಯಮಿ ಹಾಗೂ ಜೆಡಿಎಸ್ ಮುಖಂಡ ಹರವೆ ಶ್ರೀಧರ್ ನೇತೃತ್ವದಲ್ಲಿ ವೀರಶೈವ ಸಮುದಾಯವರು 25 ಲಕ್ಷ ರೂ. ದೇಣಿಗೆ ನೀಡಿದರು. ಮತ್ತೊಬ್ಬ ಜೆಡಿಎಸ್ ಮುಖಂಡ ಮಹದೇವಪುರ ಮಂಜು ಕೂಡ 30 ಲಕ್ಷ ರೂ. ದೇಣಿಗೆ ನೀಡಿದರು.

ಜೆಡಿಎಸ್ ಮುಖಂಡ ಹರವೆ ಶ್ರೀಧರ್ ಮಾತನಾಡಿ, ತಾಲೂಕಿನಲ್ಲಿ ಕಳೆದ 15 ವರ್ಷಗಳಿಂದ ಜೆಡಿಎಸ್ ಕಾರ್ಯಕರ್ತರು ತಬ್ಬಲಿಯಾಗಿದ್ದಾರೆ. ಬಹಳಷ್ಟು ನೊಂದಿದ್ದಾರೆ. 2023ರ ಚುನಾವಣೆಯಲ್ಲಿ ಹರೀಶ್‌ಗೌಡರನ್ನು ಗೆಲ್ಲಿಸಿಕೊಳ್ಳುವ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡಲಾಗುವುದು ಎಂದರು. ಈ ಹಿಂದೆ ದಲಿತ ಸಮುದಾಯದ ಕಾಡನಕೊಪ್ಪಲಿನ ಕೆಲವು ಯುವ ಮುಖಂಡರು 10 ಲಕ್ಷ ರೂ. ದೇಣಿಗೆ ನೀಡಿದ್ದರು. ಇಂದು 55 ಲಕ್ಷ ರೂ ದೇಣಿಗೆ ನೀಡಲಾಗಿದೆ. ಮುಂದಿನ ದಿನದಲ್ಲಿ ಮತ್ತಷ್ಟು ಮುಖಂಡರು ದೇಣಿಗೆ ನೀಡಲಿದ್ದಾರೆ. ಜೊತೆಗೆ ಮತವನ್ನು ಕೊಟ್ಟು ಬೆಂಬಲಿಸಿ ಗೆಲ್ಲಿಸುವುದಾಗಿ ನಾವು ನಮ್ಮ ಕಾರ್ಯಕರ್ತರು ಪಣ ತೊಟ್ಟಿದ್ದೇವೆ ಎಂದರು.

ರಾಜ್ಯದ ಅಭಿವೃದ್ಧಿಗೆ ಜೆಡಿಎಸ್ ಬೆಂಬಲಿಸಿ: ಆರ್.ಮಾದೇಶ್



ಮಲ್ಕುಂಡಿ, ಮಾ.5– ರಾಜ್ಯದ ಸಮಗ್ರ ಅಭಿವೃದ್ಧಿಗೆ ಮುಂಬರುವ ಚುನಾವಣೆಯಲ್ಲಿ ಪ್ರಾದೇಶಿಕ ಪಕ್ಷ ಜೆಡಿಎಸ್ ಬೆಂಬಲಿಸುವ ಮೂಲಕ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಕೈ ಬಲಪಡಿಸಲು ಕಾರ್ಯಕರ್ತರು ಶ್ರಮಿಸಬೇಕು ಎಂದು ನಂಜನಗೂಡು ಕ್ಷೇತ್ರದ ಜೆಡಿಎಸ್ ಟಿಕೆಟ್ ಆಕಾಂಕ್ಷಿ ಆರ್.ಮಾದೇಶ್ ಮನವಿ ಮಾಡಿದರು.

ನಂಜನಗೂಡು ವಿಧಾನಸಭಾ ಕ್ಷೇತ್ರದ ಮುದ್ದಹಳ್ಳಿ ಗ್ರಾಮದಲ್ಲಿ ನಡೆದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷದ ಹಲವು ಮುಖಂಡರನ್ನು ಜೆಡಿಎಸ್‌ಗೆ ಬರಮಾಡಿಕೊಂಡು ಮಾತನಾಡಿದ ಅವರು, ರಾಜ್ಯದಲ್ಲಿ ರಾಷ್ಟ್ರೀಯ ಪಕ್ಷಗಳ ದುರಾಡಳಿತದಿಂದ ರಾಜ್ಯದ ಜನತೆ ಬೇಸತ್ತಿದ್ದಾರೆ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ರೈತ ಹಾಗೂ ಜನಪರವಾಗಿ ಕೆಲಸ ಮಾಡಿದ್ದಾರೆ. ರೈತರ ಸಾಲ ಮನ್ನಾ, ಶಾಲಾ ಮಕ್ಕಳಿಗೆ ಉಚಿತ ಸೈಕಲ್ ವಿತರಣೆ ಸೇರಿದಂತೆ ಇನ್ನು ಹಲವು ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ರಾಜ್ಯಾದ್ಯಂತ ಜೆಡಿಎಸ್ ಪರ ಒಲವಿದ್ದು, ರಾಜ್ಯದ ಜನತೆ ಮತ್ತೊಮ್ಮೆ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಲು ಬಯಸಿದ್ದಾರೆ ಎಂದರು. ಈ ವೇಳೆ ತಾಪಂ ಮಾಜಿ ಸದಸ್ಯ ಸುರೇಶ್, ಮುಜೀದ್ ಪಾಷ ಸೇರಿದಂತೆ ಇನ್ನಿತರರಿದ್ದರು.

ಗೃಹಲಕ್ಷ್ಮಿ, ಗೃಹಜ್ಯೋತಿ ಯೋಜನೆ ಬಡವರ ಬದುಕಿಗೆ ಪೂರಕ

ಕಾಂಗ್ರೆಸ್‌ನ ಗ್ಯಾರಂಟಿ ಕಾರ್ಡ್ ಬಿಡುಗಡೆ ಸಮಾರಂಭದಲ್ಲಿ ಮುಖಂಡ ಸುನೀಲ್ ಬೋಸ್



ತಿ.ನರಸೀಪುರ ಮಾ.5– ಕಾಂಗ್ರೆಸ್‌ನ ಗೃಹಲಕ್ಷ್ಮಿ ಮತ್ತು ಗೃಹಜ್ಯೋತಿ ಯೋಜನೆಗಳು ಬಡವರು ಮತ್ತು ಮಧ್ಯಮ ವರ್ಗದವರ ಬದುಕಿಗೆ ಪೂರಕವಾಗಿದ್ದು, ಕ್ಷೇತ್ರದ ಪ್ರತಿಯೊಂದು ಕುಟುಂಬಕ್ಕೂ ಪಕ್ಷದ ಭರವಸೆ (ಗ್ಯಾರಂಟಿ) ಕಾರ್ಡ್‌ಗಳನ್ನು ಕಾರ್ಯಕರ್ತರು ಮತ್ತು ಮುಖಂಡರು ವಿತರಿಸಬೇಕು ಎಂದು ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್ ತಿಳಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಭಾನುವಾರ ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಕಾರ್ಡ್‌ಗಳನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಕೆಪಿಸಿಸಿ ಮೊದಲ ಹಂತದಲ್ಲಿ ಕಳುಹಿಸಿರುವ ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಅವರ ಸಹಿಯುಳ್ಳ 40 ಸಾವಿರ ಕಾರ್ಡ್‌ಗಳನ್ನು ವಿಧಾನಸಭಾ ಕ್ಷೇತ್ರದ ಪ್ರತಿಯೊಂದು ಕುಟುಂಬಕ್ಕೂ ನೀಡಿ, ಅವರ ವಿವರ ದಾಖಲಿಸಿ ಕೇಂದ್ರ ಕಚೇರಿಗೆ ಕಳುಹಿಸಬೇಕು ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಪ್ರತಿಯೊಂದು ಮನೆಗೆ 200 ಯೂನಿಟ್ ವಿದ್ಯುತ್ ಉಚಿತ, ಕುಟುಂಬವೊಂದರ ಮಹಿಳೆಗೆ ಮಾಸಿಕ 2 ಸಾವಿರ ರೂ. ನೀಡಲಾಗುವುದು. ಅಲ್ಲದೆ ಅಡುಗೆ ಅನಿಲಕ್ಕೆ 500 ರೂ. ಸಬ್ಸಿಡಿ, ಜಿಎಸ್‌ಟಿ ಪರಿಹಾರವಾಗಿ 500, ಬೆಲೆ ಏರಿಕೆ ಪರಿಹಾರವಾಗಿ ಸಾವಿರ ರೂ. ನೀಡಲು ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಸೇರಿದಂತೆ ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತರೂ ಗ್ಯಾರಂಟಿಯಾಗಿದ್ದೇವೆ. ನಾಡಿನ ಜನರು ಕಾಂಗ್ರೆಸ್ ಪಕ್ಷ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಇದಕ್ಕೂ ಮುನ್ನಾ ಕಾರ್ಯಕ್ರಮದ ಆರಂಭದಲ್ಲೇ ಗ್ಯಾರಂಟಿ ಕಾರ್ಡ್‌ಗಳನ್ನು ಕಾಂಗ್ರೆಸ್ ಬೆಂಬಲಿಸುವ ಜನರನ್ನು ಗುರುತಿಸಿ ನೀಡಬೇಕೆಂಬ ಪ್ರಸ್ತಾಪಕ್ಕೆ ಕಾರ್ಯಕರ್ತರು ಹಾಗೂ ಮುಖಂಡರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಕೆಲಕಾಲ ಗೊಂದಲ, ಗದ್ದಲ ಉಂಟಾಯಿತು. ವಿಪಕ್ಷಗಳ ಗುರುತಿಸಲು ನಾವೇ ಪರೋಕ್ಷವಾಗಿ ಸಹಕಾರ ನೀಡಿದಂತಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾದ ಹಿನ್ನೆಲೆಯಲ್ಲಿ ಸುನೀಲ್ ಬೋಸ್ ಮತದಾರರ ಬದಲು ಕುಟುಂಬಗಳನ್ನು ಕೇಂದ್ರೀಕರಿಸಿ ಭರವಸೆ ಕಾರ್ಡ್‌ಗಳನ್ನು ಕೊಡಿ, ಹೆಚ್ಚುವರಿ ಕಾರ್ಡ್‌ಗಳನ್ನು 2ನೇ ಹಂತದಲ್ಲಿ ವಿತರಿಸಲಾಗುವುದು ಎಂದು ಗೊಂದಲಕ್ಕೆ ತೆರೆ ಎಳೆದರು.

ಈ ವೇಳೆ ಜಿಪಂ ಮಾಜಿ ಸದಸ್ಯೆ ಎಂ. ಸುಧಾ ಮಹದೇವಯ್ಯ, ಡಿಸಿಸಿ ಕಾರ್ಯಕಾರಣಿ ಸದಸ್ಯ ಉಕ್ಕಲಗೆರೆ ಬಸವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಎಸ್ಸಿ ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ನಂಜಾಪುರ ಶಿವಣ್ಣ, ಪಪಂ ಮಾಜಿ ಅಧ್ಯಕ್ಷರಾದ ಬಸವಣ್ಣ, ಎನ್.ಮಹದೇವಸ್ವಾಮಿ, ತಾಪಂ ಮಾಜಿ ಸದಸ್ಯರಾದ ನುಸಿಂಹಮಾದನಾಯಕ, ಕುಕ್ಕೂರು ಗಣೇಶ್, ಕೆಬ್ಬೆ ರಂಗಸ್ವಾಮಿ, ಟೌನ್ ಅಧ್ಯಕ್ಷ ಅಂದಾನಿ ಗೌಡ, ಗ್ರಾಪಂ ಅಧ್ಯಕ್ಷರಾದ ಎಂ. ಮಹೇಶ್, ಪರಮೇಶ, ಡಾ.ಡಿ.ಮಹದೇವಸ್ವಾಮಿ, ಮಾಜಿ ಅಧ್ಯಕ್ಷರಾದ ಅಕ್ಕೂರು ಗುರುಮೂರ್ತಿ, ಆರ್.ಸೋಮಣ್ಣ, ಚಂದ್ರಶೇಖರ್, ಪುಟ್ಟಸ್ವಾಮಿ, ಮಾಜಿ ಉಪಾಧ್ಯಕ್ಷ ಕೆ.ಶಂಕರ, ಮುಖಂಡರಾದ, ಟಿ.ಮೆಗಡಹಳ್ಳಿ ಶಿವಮೂರ್ತಿ, ಎಂ.ಎಸ್.ನಂಜುಂಡಸ್ವಾಮಿ, ಎಸ್. ಮಹದೇವಶೆಟ್ಟಿ, ಸಿದ್ದಪ್ಪಸ್ವಾಮಿ, ಶ್ರೀನಿವಾಸಮೂರ್ತಿ, ವಿಜಾಪುರ ಶಿವಶಂಕರ್, ಪ್ರಭು, ಕಲಿಯೂರು ಶಿವಣ್ಣ, ಶಂಭುಲಿಂಗ, ಮಾದೇಶ್, ಎಂ.ಎಸ್.ನಟರಾಜಮೂರ್ತಿ, ಕೊಳತ್ತೂರು ಮಹದೇವಸ್ವಾಮಿ, ಗದ್ದೆಮೊಳೆ ಸಿದ್ದರಾಜು, ಸುಂದರ ಇನ್ನಿತರರಿದ್ದರು.

ಸರಗೂರಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ

ಸರಗೂರು, ಮಾ.5– ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ವತಿಯಿಂದ ಪಟ್ಟಣದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಶಿಬಿರದಲ್ಲಿ ಡಾ.ಸುಧೀರ್ ಮಾತನಾಡಿ, ಗ್ರಾಮೀಣ ಬಡಜನರ ಆರೋಗ್ಯದ ಹಿತದೃಷ್ಟಿಯಿಂದ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ವತಿಯಿಂದ ಉಚಿತ ಆರೋಗ್ಯ ತಪಾಸಣೆ ನಡೆಸಿ ಔಷಧಿ ನೀಡಲಾಗುತ್ತಿದ್ದು, ಹೆಚ್ಚಿನ ಚಿಕಿತ್ಸೆ ಕಂಡು ಬಂದಲ್ಲಿ ರಿಯಾಯಿತಿ ದರದಲ್ಲಿ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ನೀಡಲಾಗುತ್ತಿದ್ದು, ಇದನ್ನು ಗ್ರಾಮೀಣ ಜನರು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಶಿಬಿರದಲ್ಲಿ 550ಕ್ಕೂ ಹೆಚ್ಚು ಮಂದಿ ತಪಾಸಣೆಗೆ ಒಳಪಟ್ಟರು. ಈ ವೇಳೆ ಡಾ.ಸುರೇಶ ಬಾಬು, ಡಾ.ಪೂರ್ಣಿಮಾ, ಡಾ.ಅಶ್ವಿನಿ, ಡಾ.ಕವಿತಾ, ಡಾ.ಮಂಜುನಾಥ್, ಡಾ.ಮೃತ್ಯುಂಜಯಪ್ಪ, ಡಾ.ಶಿಲ್ಪ, ಡಾ.ಜಯಶ್ರೀ, ಡಾ.ಛಾಯಾ, ಡಾ.ತಿಪ್ಪೇಸ್ವಾಮಿ, ಡಾ.ಅಜಯ್ ಶರ್ಮ, ಹಿರಿಯ ವೈದ್ಯಾಧಿಕಾರಿ ಶಾಂತ ಮಲ್ಲಪ್ಪ ಇದ್ದರು.

ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಪ್ರಾಂಶುಪಾಲ ಗಂಗಾಧರಯ್ಯ, ಶಾಲಾ ಮುಖ್ಯೋಪಾಧ್ಯಾಯ ಮಹಮ್ಮದ್ ಅಂಜುಮ್ ಪಾಷ, ಕೃಷ್ಣಮೂರ್ತಿ, ಅಶೋಕ್ ಹಾಗೂ ಸಿಬ್ಬಂದಿ ವರ್ಗ, ಜೆಎಸ್‌ಎಸ್ ಆಸ್ಪತ್ರೆಯ ಮಲ್ಲಿಕಾರ್ಜುನಸ್ವಾಮಿ, ಪರಶಿವಮೂರ್ತಿ, ಮಹದೇವಸ್ವಾಮಿ ಉಪಸ್ಥಿತರಿದ್ದರು.

ಭ್ರಷ್ಟಾಚಾರ, ಬೆಲೆ ಏರಿಕೆಯಿಂದ ಜನ ಬೇಸತ್ತಿದ್ದಾರೆ

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್



ನಂಜನಗೂಡು, ಮಾ.5– ಬಿಜೆಪಿ ಸರ್ಕಾರದ ವ್ಯಾಪಕ ಭ್ರಷ್ಟಾಚಾರ, ಬೆಲೆ ಏರಿಕೆಯಿಂದಾಗಿ ಜನ ಬೇಸತ್ತಿದ್ದಾರೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ಹೇಳಿದರು.

ತಾಲೂಕಿನ ಸಿಂಧುವಳ್ಳಿ ಬಳಿಯ ಸಂತಾನ ಗಣಪತಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಕಾರ್ಡ್‌ಗಳ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬಿಜೆಪಿ ಸರ್ಕಾರ ವ್ಯಾಪಕ ಭ್ರಷ್ಟಾಚಾರದಲ್ಲಿ ನಿರತವಾಗಿದ್ದು, ಕೊಟ್ಟ 600 ಭರವಸೆಗಳಲ್ಲಿ 6 ಭರವಸೆಗಳನ್ನು ಈಡೇರಿಸಿಲ್ಲ. ಆದಿವಾಸಿಗಳ ಕಾಲೋನಿಯಲ್ಲಿ ಬಡವರ ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದಾರೆ. ಕಳೆದ 4 ವರ್ಷಗಳಲ್ಲಿ ಬಡವರಿಗೆ ನೆರವಾಗುವ ಯಾವುದೇ ಕಾರ್ಯಕ್ರಮ ರೂಪಿಸಿಲ್ಲ. ಸಿದ್ದರಾಮಯ್ಯ ಸರ್ಕಾರದಲ್ಲಿ ಅನ್ನಭಾಗ್ಯ, ಸಾಲ ಮನ್ನಾ ಸೇರಿದಂತೆ ಎಲ್ಲಾ ಭರವಸೆಗಳನ್ನು ಈಡೇರಿಸಿರುವ ಕಾರಣ ಜನರಿಗೆ ಪಕ್ಷದ ಮೇಲೆ ನಂಬಿಕೆ ಬಂದಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ 200 ಯೂನಿಟ್ ವಿದ್ಯುತ್, ಗೃಹಲಕ್ಷ್ಮಿ ಯೋಜನೆ ಜಾರಿಗೊಳಿಸುವುದಾಗಿ ಈಗಾಗಲೇ ಘೋಷಿಸಿದೆ ಎಂದರು.

ಶಾಸಕರು ತಮ್ಮ ಅವಧಿಯಲ್ಲಿ ಯಾವುದೇ ಹೊಸ ಶಾಶ್ವತ ಯೋಜನೆ ಜಾರಿಗೊಳಿಸಿಲ್ಲ. ಹೈಸ್ಕೂಲ್, ಪಿಯು ಕಾಲೇಜು, ಹಾಸ್ಟೆಲ್, ಮೊರಾರ್ಜಿ ದೇಸಾಯಿ ಶಾಲೆ ಮಂಜೂರು ಮಾಡಿಸಲು ಸಾಧ್ಯವಾಗಿಲ್ಲ. ಈ ಭಾಗದ ಜ್ವಲಂತ ಸಮಸ್ಯೆಯಾದ ಕಾಡುಪ್ರಾಣಿಗಳ ಹಾವಳಿ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಸಾಗುವಳಿ ಚೀಟಿ ನೀಡಿಲ್ಲ. ಒಂದೇ ಒಂದು ಜನ ಸಂಪರ್ಕ ಸಭೆ ನಡೆಸಿಲ್ಲ. ಅಲ್ಲದೆ ಶ್ರೀಕಂಠೇಶ್ವರ ದೇವಾಲಯ ಅಭಿವೃದ್ಧಿಯಾಗಿದ್ದು ಎಂ.ಮಹದೇವು ಕಾಲದಲ್ಲಿ ಈಗ ಅತಿಥಿ ಗೃಹವನ್ನು ಕಂಡಿಲ್ಲ. ಭಕ್ತರ ಹಣದಲ್ಲಿ ಬೆಳ್ಳಿರಥ ನಿರ್ಮಿಸುವುದು ಅದು ನಿಮ್ಮ ಸಾಧನೆಯಾಗುವುದಿಲ್ಲ. ಶಾಸಕರಿಗೆ ಅಧಿಕಾರದ ದರ್ಪ, ಅಧಿಕಾರದ ದಾಹವಿದೆ ಎಂದರು.

ಕಳೆದ 4 ವರ್ಷದಿಂದ ಸುಮ್ಮನಿದ್ದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಚುನಾವಣೆ ಸಮೀಪಿಸುತ್ತಿದ್ದಂತೆ ಸಕ್ರಿಯವಾಗಿದ್ದಾರೆ. ಜೊತೆಗೆ ಸಮುದಾಯಗಳ ಬಗ್ಗೆ ಅಕ್ಕರೆ ಬಂದಿದೆ. ಆದ್ದರಿಂದಲೇ ಹಲ್ಲಹಳ್ಳಿಯಲ್ಲಿ ಅಂಬೇಡ್ಕರ್ ಭವನಕ್ಕೆ ಚಾಲನೆ ನೀಡಿದ್ದಾರೆ. ಉಪ್ಪಾರ ಭವನ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಒಳ್ಳೆ ಆಡಳಿತ ನಡೆಸಿದರೆ ನಮ್ಮ ತಕರಾರು ಇಲ್ಲ ಎಂದ ಅವರು ಪ್ರಸಾದ್ ನಮ್ಮ ಜೊತೆಯಲ್ಲಿದ್ದಾಗ ಕಳಲೆ ಕೇಶವಮೂರ್ತಿ ಅವರನ್ನು ನಮ್ಮ ಪಕ್ಷಕ್ಕೆ ಕರೆದುಕೊಂಡು ಬಾ. ನಾನು ಬೇಡ ಎಂದಾಗ ಅವರಿಗೆ ಎಂಎಲ್‌ಎ ಟಿಕೆಟ್ ನೀಡೋಣ ಎಂದಿದ್ದರು. ಈಗ ಅವರ ಬಗ್ಗೆ ಹಗುರವಾಗಿ ಮಾತನಾಡಿರುವುದು ಖಂಡನೀಯ. ದನ ಕಾಯುವುದು ಶ್ರೇಷ್ಠ ಕೆಲಸ ಪ್ರಸಾದ್ ಅವರು ಅದನ್ನು ಕೀಳರಿಮೆ ಎಂದು ತಿಳಿದಿದ್ದಾರೆ. ನಂಜನಗೂಡಿನಲ್ಲಿ ಅವರ ಅಳಿಯನನ್ನು ಗೆಲ್ಲಿಸಬೇಕೆಂದು ಓಡಾಡುತ್ತಿದ್ದಾರೆ. ಅದರ ಬಗ್ಗೆ ನಮ್ಮ ತಕರಾರು ಇಲ್ಲ ಎಂದು ಟೀಕೆ ಮಾಡಿದರು.

ಉಸ್ತುವಾರಿ ಶ್ರೀಕಂಠು ಮಾತನಾಡಿದರು. ಸಮಾರಂಭದಲ್ಲಿ ಉಸ್ತುವಾರಿ ಸೋಮೇಶ್, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಹೆಚ್.ಸಿ. ಬಸವರಾಜು, ಜಿಪಂ ಮಾಜಿ ಸದಸ್ಯರಾದ ಕೆ.ಮಾರುತಿ, ಲತಾಸಿದ್ದಶೆಟ್ಟಿ, ಶಶಿರೇಖಾ, ಎನ್.ಮಹದೇವು, ವಿಶ್ವಕರ್ಮ ನಿಗಮ ಮಾಜಿ ಅಧ್ಯಕ್ಷ ನಂದಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ಮುಖಂಡರಾದ ಮುದ್ದುಮಾದಶೆಟ್ಟಿ, ಪರಶಿವಮೂರ್ತಿ, ಕುಳ್ಳಯ್ಯ, ಶ್ರೀನಿವಾಸಮೂರ್ತಿ, ರಾಜು, ಶಿವಪ್ರಸಾದ್, ನಾಗೇಶ್‌ರಾಜ್, ನಾಗರಾಜಯ್ಯ, ರಾಜೇಶ್, ನಗರಸಭಾ ಸದಸ್ಯರಾದ ಗಂಗಾಧರ್, ಮಹೇಶ್, ಗಾಯತ್ರಿ, ಶ್ರೀಕಂಠಸ್ವಾಮಿ, ಕೆಪಿಸಿಸಿ ಸದಸ್ಯ ಅಕ್ಬರ್‌ಅಲಿಂ, ಯುವ ಕಾಂಗ್ರೆಸ್ ಅಧ್ಯಕ್ಷ ಅಶೋಕ್ ಸೇರಿದಂತೆ ಇತರರಿದ್ದರು.

> “ಆರ್.ಧ್ರುವನಾರಾಯಣ್ ಅವರೇ ಕ್ಷೇತ್ರದ ಅಭ್ಯರ್ಥಿ ಎಂಬ ಘೋಷಣೆ ಮತ್ತು ನಾಮಪತ್ರ ಸಲ್ಲಿಸುವುದೊಂದೇ ಬಾಕಿ. ಕಾರ್ಯಕರ್ತರು ಉದಾಸೀನ ಮಾಡದೆ ಎಚ್ಚರಿಕೆಯಿಂದ ಕೆಲಸ ಮಾಡಿ ಪಕ್ಷದ ಕಾರ್ಯಕ್ರಮವನ್ನು ಜನರಿಗೆ ತಲುಪಿಸಿ ಪಕ್ಷ ಸಂಘಟನೆಗೊಳಿಸಿ.
> –ಕಳಲೆ ಕೇಶವಮೂರ್ತಿ, ಮಾಜಿ ಶಾಸಕ.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಾಟಿನ ಸರ (ಕ): ಬೆ.10.25ಕ್ಕೆ, ಭಗೀರ (ತ): ಮ.1.25ಕ್ಕೆ, ಆಂಟ್ ಮ್ಯಾನ್ ಅಂಡ್ ದಿ ವಾಸ್ಪ್ (3ಡಿ)(ಇಂ): ಸಂ.4.20ಕ್ಕೆ, 19 20 21 (ಕ): ರಾ.7ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 2	ಪ್ರಜಾರಾಜ್ಯ (ಕ): ಬೆ.10.20ಕ್ಕೆ, ಹೊಂದಿಸಿ ಬರೆಯಿರಿ (ಕ): ಮ.1.10ಕ್ಕೆ, ದೂರದರ್ಶನ (ಕ): ಸಂ.4.10ಕ್ಕೆ, ಲವ್‌ಬರ್ಡ್ಸ್ (ಕ): ರಾ.7.10ಕ್ಕೆ, ಕಡಲ ತೀರದ ಭಾರ್ಗವ (ಕ): ರಾ.9.55ಕ್ಕೆ.
ಸ್ಕ್ರೀನ್ 3	ರೋಮಾಂಚಂ (ಮ): ಬೆ.10.50ಕ್ಕೆ, ವಾತಿ (ತ): ಮ.1.25ಕ್ಕೆ, ಅಂಬಾಸಿಡರ್ (ಕ): ಸಂ.4.10ಕ್ಕೆ, ಓ ಮೈ ಡಾರ್ಲಿಂಗ್ (ಮ): ರಾ.7ಕ್ಕೆ, ಪಾಕಲ ಪಾತಿರವುಮ್ (ಮ): ರಾ.9.50ಕ್ಕೆ.
ಸ್ಕ್ರೀನ್ 4	ಕ್ರಿಡ್ 3 (ಇಂ): ಬೆ.11ಕ್ಕೆ, ರಾ.7.10ಕ್ಕೆ, ರಾ.9.45ಕ್ಕೆ, ಕಿಡುಗು (ತ): ಮ.1.45ಕ್ಕೆ, ಪಠಾಣ್ (ಹಿಂ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಆಂಟ್ ಮ್ಯಾನ್ ಅಂಡ್ ದಿ ವಾಸ್ಪ್ (3ಡಿ)(ಇಂ): ಮ.12.35ಕ್ಕೆ, ಸಂ.6.20ಕ್ಕೆ, ರಾ.9.10ಕ್ಕೆ, ಲವ್ ಬರ್ಡ್ಸ್ (ಕ): ಮ.3.15ಕ್ಕೆ.
ಸ್ಕ್ರೀನ್ 2	ಕ್ರಿಡ್ 3 (ಇಂ): ಬೆ.11ಕ್ಕೆ, ಸಂ.4.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ಲವ್ ಬರ್ಡ್ಸ್ (ಕ): ಮ.1.35ಕ್ಕೆ.
ಸ್ಕ್ರೀನ್ 3	ಸೆಲ್ಫಿ (ಹಿಂ): ಮ.12.05ಕ್ಕೆ, ದೂರದರ್ಶನ (ಕ): ಮ.3.05ಕ್ಕೆ, ಲವ್ ಬರ್ಡ್ಸ್ (ಕ): ಸಂ.6ಕ್ಕೆ, ರಾ.8.50ಕ್ಕೆ,
ಸ್ಕ್ರೀನ್ 4	ಪಠಾಣ್ (ಹಿಂ): ಮ.12.25ಕ್ಕೆ, ರಾ.9.20ಕ್ಕೆ, ಕಾಟಿನ ಸರ (ಕ): ಮ.3.25ಕ್ಕೆ, ಪ್ರಣಯ ವಿಲಾಸಂ (ಮ): ಸಂ.6.55ಕ್ಕೆ,

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಕ್ರಾಂತಿ (ಕ): ಬೆ.7.30ಕ್ಕೆ, ಮ.1.45ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕ್ರಾಂತಿ (ಕ): ಬೆ.6.45ಕ್ಕೆ, ಬೆ.9.55ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ
ಸ್ಕ್ರೀನ್ 3	ಕ್ರಾಂತಿ (ಕ): ಬೆ.7ಕ್ಕೆ, ಬೆ.10.05ಕ್ಕೆ, ಮ.1.10ಕ್ಕೆ, ಸಂ.4.15ಕ್ಕೆ, ರಾ.10.15ಕ್ಕೆ, ಪಠಾಣ್ (ಹಿಂ): ರಾ.7.20ಕ್ಕೆ
ಸ್ಕ್ರೀನ್ 4	ಕ್ರಾಂತಿ (ಕ): ಬೆ.7.10ಕ್ಕೆ, ಸಂ.6.50ಕ್ಕೆ, ಪಠಾಣ್ (ಹಿಂ): ಬೆ.10.15ಕ್ಕೆ, ಮ.1.15ಕ್ಕೆ, ರಾ.9.55ಕ್ಕೆ, ಗಾಂಧಿ ಗೋಡ್ಸೆ ಏಕ್ ಯುದ್ಧ್ (ಹಿಂ): ಸಂ.4ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕ್ರಾಂತಿ (ಕ): ಬೆ.11.45ಕ್ಕೆ, ಮ.3.10ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, ಪಠಾಣ್ (ಹಿಂ): ಬೆ.9.30ಕ್ಕೆ, ಬೆ.11.05ಕ್ಕೆ, ಮ.12.45ಕ್ಕೆ, ಮ.2.20ಕ್ಕೆ, ಸಂ.4ಕ್ಕೆ, ರಾ.7.15ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಧಮನ್ (ಹಿಂ): ಸಂ.4.10ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಸಂ.5.35ಕ್ಕೆ, ಬಿಟಿಎಸ್ (ಕೊ): ಮ.1.45ಕ್ಕೆ, ಸಂ.6.50ಕ್ಕೆ, ದಿ ವುಮನ್ ಕಿಂಗ್ (ಇಂ): ಬೆ.10ಕ್ಕೆ, ಮ.3.55ಕ್ಕೆ, ರಾ.9.50ಕ್ಕೆ, ನಾಕ್ ಅಟ್ ದಿ ಕ್ಯಾಬಿನ್ (ಇಂ): ಮ.2.10ಕ್ಕೆ, ರಾ.7.50ಕ್ಕೆ, ರನ್ ಬೇಬಿ ರನ್ (ತ): ಮ.1ಕ್ಕೆ, ಸಂ.6.55ಕ್ಕೆ, ಮೈಕೆಲ್ (ತ): ಸಂ.4.35ಕ್ಕೆ, ರೈಟರ್ ಪದ್ಮಭೂಷಣ್ (ತೆ): ರಾ.9.15ಕ್ಕೆ, ಮೈಕೆಲ್ (ತೆ): ರಾ.10.55ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ತುನಿವು (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟಿನ ಸರ (ಕ) 2 ಪ್ರದರ್ಶನಗಳು, ಬೀಗ (ಕ)	2 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸೆಲ್ಫೀ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವಾರಿಸು (ತ)	4 ಪ್ರದರ್ಶನಗಳು
ಗಾಯಿತ್ರಿ	
ದೂರದರ್ಶನ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಭಗೀರ (ತ)	4 ಪ್ರದರ್ಶನಗಳು
ಸಂಗಂ	
ಪ್ರಜಾರಾಜ್ಯ (ಕ)	4 ಪ್ರದರ್ಶನಗಳು
ಲಿಡೋ	
ಕ್ರಾಂತಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಅಮಿಗೋಶ್ (ತೆ)	4 ಪ್ರದರ್ಶನಗಳು
ಪ್ರಭಾ	
ಅಂಬಾಸಡರ್ (ಕ)	4 ಪ್ರದರ್ಶನಗಳು


ಸಾಲಬಾಧೆ: ರೈತ ಮಹಿಳೆ ಆತ್ಮಹತ್ಯೆ



ಬೆಟ್ಟದಪುರ, ಮಾ.5– ಸಾಲಬಾಧೆ ತಾಳಲಾರದೇ ರೈತ ಮಹಿಳೆ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಇಲ್ಲಿಗೆ ಸಮೀಪದ ವಡ್ಡೇರಹೊಸಹಳ್ಳಿ ಗ್ರಾಮದಲ್ಲಿ ಗುರುವಾರ ರಾತ್ರಿ ನಡೆದಿದೆ.

ಗ್ರಾಮದ ನಿವಾಸಿ ಕೆಂಗೇಗೌಡರ ಪತ್ನಿ ಶಂಕರಮ್ಮ(42) ಆತ್ಮಹತ್ಯೆ ಮಾಡಿಕೊಂಡವರು. ತನ್ನ ಪತಿ ಹೆಸರಿನಲ್ಲಿದ್ದ 1.15 ಗುಂಟೆ ಜಮೀನಿನಲ್ಲಿ ಶಂಕರಮ್ಮ ತಂಬಾಕು, ರಾಗಿ, ಹುರುಳಿ ಬೆಳೆದಿದ್ದರು. ವ್ಯವಸಾಯಕ್ಕಾಗಿ ಬ್ಯಾಂಕ್ ಆಫ್ ಬರೋಡಾದಲ್ಲಿ 8 ಲಕ್ಷ ರೂ. ಕೃಷಿ ಸಾಲ ಪಡೆದಿದ್ದರು. ಅಲ್ಲದೇ ಖಾಸಗಿಯಾಗಿ 2 ಲಕ್ಷ ರೂ. ಸಾಲ ಮಾಡಿದ್ದರು. ಜಮೀನಿನಲ್ಲಿ ಹಾಕಿದ್ದ ಬೆಳೆಗೆ ರೋಗ ಬಂದು ನಷ್ಟ ಸಂಭವಿಸಿದ್ದರಿಂದ ಮನನೊಂದು ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೃತರ ಪತಿ ಕೆಂಗೇಗೌಡ ಬೆಟ್ಟದಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ಯುವಕನ ಹತ್ಯೆ



ಮಲ್ಕುಂಡಿ, ಮಾ.5– ಯುವಕನೋರ್ವನನ್ನು ಮಚ್ಚಿನಿಂದ ಕೊಚ್ಚಿ ಹತ್ಯೆ ಮಾಡಿರುವ ಘಟನೆ ಶುಕ್ರವಾರ ಸಂಜೆ ಇಲ್ಲಿಗೆ ಸಮೀಪದ ಹೆಡಿಯಾಲ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಮಹೇಶ್(24) ಹತ್ಯೆಗೀಡಾದವರಾಗಿದ್ದು, ಅದೇ ಗ್ರಾಮದ ಗಿರೀಶ್ ಹತ್ಯೆ ಆರೋಪಿ. ಘಟನೆಗೆ ಅನೈತಿಕ ಸಂಬಂಧವೇ ಕಾರಣ ಎನ್ನಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಡಿವೈಎಸ್ಪಿ ಪಿ.ಗೋವಿಂದರಾಜು, ಸರ್ಕಲ್ ಇನ್ಸ್‌ಪೆಕ್ಟರ್ ಚಂದ್ರಶೇಖರ್, ಹುಲ್ಲಹಳ್ಳಿ ಠಾಣೆ ಸಿಬ್ಬಂದಿ ಪರಿಶೀಲನೆ ನಡೆಸಿ, ಆರೋಪಿ ಗಿರೀಶನನ್ನು ವಶಕ್ಕೆ ಪಡೆದಿದ್ದಾರೆ. ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಪಿರಿಯಾಪಟ್ಟಣ ತಾಲೂಕಿನ ಅತ್ತಿಗೋಡು ಗ್ರಾಪಂ ವ್ಯಾಪ್ತಿಯ ಮಾದೇಶ್ವರ ಮಠದ ಗ್ರಾಮದಲ್ಲಿ ಪಡಿತರ ಉಪ ಕೇಂದ್ರವನ್ನು ಶಾಸಕ ಕೆ.ಮಹದೇವ್ ಪಡಿತರದಾರರಿಗೆ ಅಕ್ಕಿ ನೀಡುವ ಮೂಲಕ ಉದ್ಘಾಟಿಸಿದರು.

ಮೈಸೂರು ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ಉಪಾಧ್ಯಕ್ಷರಾಗಿ ಮಲಿಯೂರು ಶಿವಣ್ಣ ನೇಮಕ



ತಿ.ನರಸೀಪುರ, ಮಾ.5– ಮೈಸೂರು ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ಉಪಾಧ್ಯಕ್ಷರಾಗಿ ಮಲಿಯೂರು ಶಿವಣ್ಣ ಅವರನ್ನು ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ನೇಮಕ ಮಾಡಿದ್ದಾರೆ.

ಸಂಗೀತ ವಿವಿಯಲ್ಲಿ ಡಾ.ಗಂಗೂಬಾಯಿ ಹಾನಗಲ್ ಅವರ 110ನೇ ಜನ್ಮದಿನೋತ್ಸವ



ಮೈಸೂರು, ಮಾ.5(ಪಿಎಂ)– ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾನಿಲಯದ ವತಿಯಿಂದ ಭಾನುವಾರ ಪದ್ಮವಿಭೂಷಣ ಡಾ.ಗಂಗೂಬಾಯಿ ಹಾನಗಲ್ ಅವರ 110ನೇ ಜನ್ಮದಿನೋತ್ಸವ ಆಚರಿಸಲಾಯಿತು.

ವಿಶ್ವವಿದ್ಯಾನಿಲಯದ ಆವರಣದಲ್ಲಿ ಹಮ್ಮಿಕೊಂಡಿದ್ದ ಜನ್ಮದಿನೋತ್ಸವದಲ್ಲಿ ಡಾ.ಗಂಗೂಬಾಯಿ ಹಾನಗಲ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಅವರ ಹಿರಿಯ ಶಿಷ್ಯೆ ಕರ್ನಾಟಕ ಕಲಾಶ್ರೀ ಡಾ.ಸುಲಭಾ ದತ್ತ ನೀರಲಗಿ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಗಂಗಜ್ಜಿಯವರ (ಡಾ.ಗಂಗೂಬಾಯಿ ಹಾನಗಲ್) ಸರಳತನ, ಶಿಸ್ತು, ಸಂಗೀತ ಅಧ್ಯಾಪನ ಮತ್ತು ರಿಯಾಜ್‌ನಲ್ಲಿ ಅವರಿಗಿದ್ದ ಬದ್ಧತೆ ನಮ್ಮಂತಹ ಶಿಷ್ಯವೃಂದಕ್ಕೆ ಮಾದರಿಯಾಯಿತು. ಅವರು ವಿದ್ಯಾರ್ಥಿಗಳಿಗೆ ಸಂಗೀತ ಕಲಿಸುವಲ್ಲಿ ಅತ್ಯಂತ ಬದ್ಧತೆ ಹೊಂದಿದ್ದರು ಎಂದು ಸ್ಮರಿಸಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಅಂತಾರಾಷ್ಟ್ರೀಯ ಮಟ್ಟದ ಪ್ರಸಿದ್ಧ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತಗಾರ ಪಂಡಿತ್ ಡಾ.ನಾಗರಾಜ ಹವಾಲ್ದಾರ ಮಾತನಾಡಿ, ಗಂಗೂಬಾಯಿಯವರು ಸಂಗೀತ ಕಲಿತ ದಿನಗಳು ಕಷ್ಟಕರವಾಗಿತ್ತು ಅನೇಕ ಏಳುಬೀಳುಗಳ ನಡುವೆ ಸಂಗೀತ ಕ್ಷೇತ್ರಕ್ಕೆ ಅವರು ಅಪಾರ ಕೊಡುಗೆ ನೀಡಿದರು ಎಂದು ಹೇಳಿದರು.

ಮತ್ತೋರ್ವ ಮುಖ್ಯ ಅತಿಥಿ ನಿವೃತ್ತ ಐಎಎಸ್ ಅಧಿಕಾರಿಗಳೂ ಆದ ಪ್ರಸಿದ್ಧ ಹಿಂದೂಸ್ತಾನಿ ಗಾಯಕ ಡಾ.ಮುದ್ದುಮೋಹನ ಮಾತನಾಡಿ, ಕಲಾವಿದ ಮಾತ್ರ ಜನಮಾನಸದಲ್ಲಿ ಕೊನೆವರೆಗೂ ನೆಲೆ ನಿಲ್ಲುತ್ತಾನೆ. ಸಂಗೀತವು ಮನುಷ್ಯನಿಗೆ ಶಾಂತಿ–ತಾಳ್ಮೆ ಕಲಿಸುತ್ತದೆ. ಗಂಗೂಬಾಯಿಯವರು ಕಲೆಯನ್ನು ಭೋಗಕ್ಕಾಗಿ ಸ್ವೀಕರಿಸಲಿಲ್ಲ. ಕಲೆಯನ್ನು ಸಿದ್ಧಿಗಾಗಿ ಮಾಡಬೇಕೇ ಹೊರತು ಪ್ರಸಿದ್ಧಿಗಾಗಿ ಅಲ್ಲ ಸರಳತೆ ಎಂಬುದು ಯಾವುದೇ ವೃತ್ತಿಯಾದರೂ ಎತ್ತರಕ್ಕೆ ಕೊಂಡೊಯ್ಯುತ್ತದೆ ಎಂದು ನುಡಿದರು.

ಅಧ್ಯಕ್ಷತೆ ವಹಿಸಿದ್ದ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಮಾತನಾಡಿ, ವಿದ್ಯಾರ್ಥಿಗಳು ಶ್ರದ್ಧೆಯಿಂದ ಕಲಿತರೆ ಸಾಧನೆ ಮಾರ್ಗ ಸುಲಭವಾಗುತ್ತದೆ. ನಮ್ಮ ವಿಶ್ವವಿದ್ಯಾಲಯವು ಕೋವಿಡ್ ವೇಳೆಯಲ್ಲಿ ಸ್ವಲ್ಪ ಕಳೆಗುಂದಿದರೂ ಈಗ ಮತ್ತೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡುವ ನಿರಂತರ ಪ್ರಕ್ರಿಯೆಯಲ್ಲಿ ತೊಡಗಿದೆ. ರಾಜ್ಯ, ದಕ್ಷಿಣವಲಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ನಮ್ಮ ವಿದ್ಯಾರ್ಥಿಗಳು ಭಾಗವಹಿಸಿ, ವಿಶ್ವವಿದ್ಯಾಲಯಕ್ಕೆ ಕೀರ್ತಿ ತಂದಿದ್ದಾರೆ ಎಂದು ತಿಳಿಸಿದರು.

ಅನೇಕ ವಿಶ್ವವಿದ್ಯಾಲಯಗಳು ಹಾಗೂ ಗಂಗೂಬಾಯಿ ಹಾನಗಲ್ ಗುರುಕುಲದೊಂದಿಗೆ ನಮ್ಮ ವಿವಿ ಒಡಂಬಡಿಕೆ ಮಾಡಿಕೊಂಡಿದ್ದು, ಆ ಮೂಲಕ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ವಿಶ್ವವಿದ್ಯಾಲಯದಲ್ಲಿ ಪ್ರತಿ ವರ್ಷ ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಪದವಿ, ಸ್ನಾತಕೋತ್ತರ ಪದವಿಗಳಿಗೆ ಪ್ರವೇಶ ಪಡೆಯುತ್ತಿದ್ದಾರೆ. ವಿವಿಧ ಇಲಾಖೆಗಳ ಪ್ರತಿಷ್ಠಿತರು, ಅನೇಕ ಹಿರಿಯ ವಿದ್ವಾಂಸರು ಡಿ.ಲಿಟ್ ಪದವಿಯನ್ನು ಪಡೆಯಲು ನಮ್ಮ ವಿವಿಯಲ್ಲಿ ಪ್ರವೇಶಾತಿ ಹೊಂದಿರುವುದು ನಮ್ಮ ವಿಶ್ವವಿದ್ಯಾಲಯದ ಹೆಮ್ಮೆ ಎಂದು ಹರ್ಷ ವ್ಯಕ್ತಪಡಿಸಿದರು.

ಇದೇ ವೇಳೆ 2019–22ರವರೆಗೆ ಕಾರ್ಯನಿರ್ವಹಿಸಿದ್ದ ಪ್ರಾಸನ ಸಮಿತಿಯ ಸದಸ್ಯರನ್ನು ಸನ್ಮಾನಿಸಲಾಯಿತು. ಬಳಿಕ ವಿವಿಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ವಿವಿ ಕುಲಸಚಿವ ಪ್ರೊ.ಟಿ.ಎಸ್.ದೇವರಾಜ ಸೇರಿದಂತೆ ಮತ್ತಿತರರು ಹಾಜರಿದ್ದರು.

ಎಂಎಲ್‌ಸಿ ಡಾ|| ತಿಮ್ಮಯ್ಯರಿಂದ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ವಿತರಣೆ



ಮೈಸೂರು,ಮಾ.5(ಎಂಟಿವೈ)– ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಜಾರಿಗೆ ತರುವ ಗೃಹಲಕ್ಷ್ಮಿ, ಉಚಿತ 10ಕೆಜಿ ಅಕ್ಕಿ ಸೇರಿದಂತೆ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ಇರುವ ಗ್ಯಾರಂಟಿ ಕಾರ್ಡ್ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಗಾಂಧಿನಗರದಲ್ಲಿ ಮನೆ ಮನೆಗೆ ವಿತರಿಸಿ ಬೆಂಬಲ ಯಾಚಿಸಿದರು.

ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ತಲಾ 10 ಕೆಜಿ ಅಕ್ಕಿ, ಪ್ರತಿ ಮನೆಗೆ 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡುವುದು, ಮನೆ ಒಡತಿಗೆ ತಿಂಗಳಿಗೆ 2 ಸಾವಿರ ರೂ. ನೀಡುವುದಾಗಿ ಈಗಾಲೇ ಕೆಪಿಸಿಸಿ ಘೋಷಿಸಿದ್ದು, ಈ ಹಿನ್ನೆಲೆಯಲ್ಲಿ ಭಾನುವಾರ ಗಾಂಧಿನಗರದಲ್ಲಿ ನಡೆದ ಗ್ಯಾರಂಟಿ ಕಾರ್ಡ್ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಬಡವರು, ದೀನ–ದಲಿತರ ಬಗ್ಗೆ ಕಾಳಜಿಯುಳ್ಳ ಏಕೈಕ ಪಕ್ಷವಾಗಿರುವ ಕಾಂಗ್ರೆಸ್ ಮುಂಬರುವ ಚುನಾವಣೆಯಲ್ಲಿ ಅಧಿಕಾರ ಹಿಡಿಯುವುದು ಖಚಿತ. ಈಗಾಗಲೇ ಪಕ್ಷದ ನಾಯಕರು ರಾಜ್ಯದಾದ್ಯಂತ ಪ್ರವಾಸ ಕೈಗೊಂಡು ಪಕ್ಷ ಸಂಘಟನಾ ಕಾರ್ಯದಲ್ಲಿ ತೊಡಗಿದ್ದಾರೆ. ಬಿಜೆಪಿ ಸರ್ಕಾರದ ದುರಾಡಳಿತ, ಭ್ರಷ್ಟಾಚಾರ, ಲಂಚಗುಳಿತನ, ಶೇ.40ರಷ್ಟು ಕಮೀಷನ್, ವರ್ಗಾವಣೆ ದಂಧೆಯಿಂದ ಜನ ಬೇಸತ್ತಿದ್ದಾರೆ. ಕಾಂಗ್ರೆಸ್ ನುಡಿದಂತೆ ನಡೆಯುವ ಪಕ್ಷವಾಗಿದೆ. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಕೊಟ್ಟ ಭರವಸೆಯನ್ನೆಲ್ಲಾ ಈಡೇರಿಸಿದೆ. ಹಾಲಿ ಬಿಜೆಪಿ ಸರ್ಕಾರ ತಾನು ನೀಡಿದ ಭರವಸೆಯನ್ನೇ ಈಡೇರಿಸಲು ಸಾಧ್ಯವಾಗದೆ ವಚನ ಭ್ರಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್‌ಗೆ ಉತ್ತಮ ಬೆಂಬಲ ವ್ಯಕ್ತವಾಗುತ್ತಿದ್ದು, ಅಧಿಕಾರಕ್ಕೆ ಬಂದ ನಂತರ ಇನ್ನಷ್ಟು ಕಾರ್ಯಕ್ರಮ ರೂಪಿಸಲಿದೆ ಎಂದರು.

ಇಂದು 30ಕ್ಕೂ ಹೆಚ್ಚು ಬಿಜೆಪಿ ಮುಖಂಡರು ಕಾಂಗ್ರೆಸ್ ಸೇರ್ಪಡೆ

ಮೈಸೂರು, ಮಾ.5(ಎಂಕೆ)– ಟಿ.ನರಸೀಪುರದ ಶ್ರೀ ಮಹದೇಶ್ವರ ಕಲ್ಯಾಣ ಭವನದಲ್ಲಿ ಮಾ.6ರಂದು ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ವರುಣಾ ವಿಧಾನಸಭಾ ಕ್ಷೇತ್ರದ 30ಕ್ಕೂ ಹೆಚ್ಚು ಮಂದಿ ಬಿಜೆಪಿ ಮುಖಂಡರು ಕಾಂಗ್ರೆಸ್ ಸೇರ್ಪಡೆಯಾಗಲಿದ್ದಾರೆ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ತಿಳಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ಮಾಜಿ ಶಾಸಕ ಹೆಜ್ಜಿಗೆ ಶ್ರೀನಿವಾಸಯ್ಯ ಅವರ ಪುತ್ರ, ಜಿಪಂ ಮಾಜಿ ಸದಸ್ಯ ಹೆಚ್.ಎಸ್.ದಯಾನಂದ ಮೂರ್ತಿ, ತಾಪಂ ಮಾಜಿ ಅಧ್ಯಕ್ಷ ಡಿ.ಕೃಷ್ಣ ಮೂರ್ತಿ, ಎಸ್ ಸಿ ಮೋರ್ಚಾ ಅಧ್ಯಕ್ಷ ಹೆಚ್.ಎಸ್ ಗಿರಿಧರ್, ಕೆ.ಗಣೇಶ್ ಸೇರಿದಂತೆ 38 ಮಂದಿ ಬಿಜೆಪಿ ಹಾಗೂ ಇತರೆ ಪಕ್ಷಗಳ ಮುಖಂಡರು ಕಾಂಗ್ರೆಸ್ ಸೇರಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಗುರು ಯೋಗಿ ನಾರೇಯಣ ಯತೀಂದ್ರರ ಜಯಂತಿ

ಮೈಸೂರು,ಮಾ.5(ಎಂಟಿವೈ)– ಬಲಿಜ(ಬಣಜಿಗ) ಸಮುದಾಯ ಗುರು ಯೋಗಿ ನಾರೇಯಣ ಯತೀಂದ್ರರ (ಕೈವಾರ ತಾತಯ್ಯ) 297ನೇ ಜಯಂತೋತ್ಸವ ಕಾರ್ಯಕ್ರಮವನ್ನು ಮಾ.7ರಂದು ಮೈಸೂರಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ ಎಂದು ಬಲಿಜ ಸಂಘದ ಕಾರ್ಯದರ್ಶಿ ಲಿಂಗರಾಜು ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಜಿಲ್ಲಾಡಳಿತದ ವತಿಯಿಂದ ಆಚರಿಸಲಾಗುತ್ತಿದೆ. ಮಾ.7ರಂದು ಬೆಳಗ್ಗೆ 11 ಗಂಟೆಗೆ ಕಲಾಮಂದಿರದಲ್ಲಿ ಸಭಾ ಕಾರ್ಯಕ್ರಮ ಜರುಗಲಿದೆ. ಅಂದು ಬೆಳಗ್ಗೆ 10ಕ್ಕೆ ಅರಮನೆ ದ್ವಾರದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಮೆರವಣಿಗೆ ಆರಂಭವಾಗಲಿದೆ. ಯೋಗಿ ನಾರೇಯಣರ ಮೂರ್ತಿಯನ್ನು ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಮೆರವಣಿಗೆ ನಡೆಸಲಾಗುತ್ತದೆ ಎಂದರು. ಮೆರವಣಿಗೆಯನ್ನು ಮೈಲ್ಯಾಕ್ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ್ ಉದ್ಘಾಟಿಸಲಿದ್ದಾರೆ. ಮೀನಾ ತೂಗುದೀಪ್ ಶ್ರೀನಿವಾಸ್ ಅಧ್ಯಕ್ಷತೆ ವಹಿಸಲಿದ್ದು, ಸಮುದಾಯ ಮುಖಂಡರಾದ ರೇಣು, ಟಿ.ಕೆ.ಅಪ್ಪಸ್ವಾಮಿ, ಯತಿರಾಜ್, ವಿ. ಕೃಷ್ಣಪ್ಪ ಇನ್ನಿತರರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಯೋಗಿ ನಾರೇಯಣ ಯತೀಂದ್ರ ಬಲಿಜ ಸಂಘದ ಅಧ್ಯಕ್ಷ ವಿ.ಕೃಷ್ಣಪ್ಪ, ಗೋವರ್ಧನ್, ರಾಕೇಶ್, ಹರ್ಷ, ಲೀಲಾವತಿ ನಾಯ್ದು ಇದ್ದರು.

ಹಸಿರು ನಮ್ಮ ಉಸಿರು



ಸಮಾಜದ ಕಣ್ಣು ತೆರೆಸುವುದು ಕಾವ್ಯದ ದೊಡ್ಡ ಗುಣ

ಐಎಎಸ್ ಅಧಿಕಾರಿ ಡಾ.ಎಂ.ಆರ್.ರವಿ ಅಭಿಪ್ರಾಯ



ಮೈಸೂರು, ಮಾ.5(ಜಿಎ)– ಒಂದು ಕಾಲದಲ್ಲಿ ಕಾವ್ಯ ನಲಿವಿಗೆ ಮಾತ್ರ ಆಸ್ಪದವಾಗಿತ್ತು ಆದರೆ ಇಂದು ನೋವು, ಸಂಕಷ್ಟ, ಅಪಮಾನ, ನಿಂದನೆಗೂ ಅದನ್ನು ವಾಹಿನಿಯಾಗಿ ಉಪಯೋಗಿಸಿಕೊಂಡು ಸಮಾಜದ ಕಣ್ಣು ತೆರೆಸುವ ಕೆಲಸ ಮಾಡುತ್ತಿರುವುದು ಕಾವ್ಯದ ದೊಡ್ಡ ಗುಣವಾಗಿದೆ ಎಂದು ರಾಜ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಆರ್.ರವಿ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸ ಗಂಗೋತ್ರಿಯ ಇಎಂಆರ್‌ಸಿ ಸಭಾಂಗಣದಲ್ಲಿ ರಂಗವಾಹಿನಿ, ರಾಮಮನೋಹರ ಲೋಹಿಯಾ ಟ್ರಸ್ಟ್, ನೆಲೆ ಹಿನ್ನೆಲೆ, ಮೈಸೂರು ವಿಶ್ವವಿದ್ಯಾಲಯ ಸಂಶೋಧಕರ ಸಂಘ ಹಾಗೂ ದಲಿತ ವಿದ್ಯಾರ್ಥಿ ಒಕ್ಕೂಟ ಸಂಯುಕ್ತಾಶ್ರಯದಲ್ಲಿ ಭಾನುವಾರ ಆಯೋಜಿಸಿದ್ದ 'ರಾಜ್ಯಮಟ್ಟದ ಮುಳ್ಳೂರು ನಾಗರಾಜ ಕಾವ್ಯ' ಪ್ರಶಸ್ತಿ ಪ್ರದಾನ ಹಾಗೂ ರಾಜಶೇಖರ ಕೋಟಿ ನೆನಪು' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಯುವ ಸಮೂಹವು ಮೊಬೈಲ್‌ಗೆ ದಾಸರಾಗಿದ್ದು, ಬರೆಯುವುದನ್ನು ಮರೆತು ಬಿಟ್ಟಿದ್ದಾರೆ. ಬರವಣಿಗೆ ಎಂಬುದು ತಪಸ್ಸು. ನಮ್ಮನ್ನು ನಾವು ಅರ್ಥ ಮಾಡಿಕೊಳ್ಳಲು ಬರವಣಿಗೆ ಕಲಿಯಬೇಕು. ಇಂದು ಸಹಿ ಮಾಡಲು ಆಗದಷ್ಟು ಮಟ್ಟಿಗೆ ತಲುಪಿದ್ದೇವೆ ಎಂದು ವಿಷಾದಿಸಿದರು.

ಸಾಮಾಜಿಕ, ಸಾಹಿತ್ಯಕ ಮತ್ತು ಪತ್ರಿಕೋದ್ಯಮದ ವಿಚಾರ ಗಮನದಲ್ಲಿಟ್ಟುಕೊಂಡು ನೋಡಿದಾಗ ನಾಲ್ಕು ದಶಕಗಳ ಇತಿಹಾಸದೊಂದಿಗೆ ಮುಳ್ಳೂರು ನಾಗರಾಜ, ರಾಜಶೇಖರ ಕೋಟಿ ಹಾಗೂ ಪ.ಮಲ್ಲೇಶ ಅವರ ಬದುಕು ಮತ್ತು ಹೋರಾಟ ಬೆಸೆದುಕೊಂಡಿದೆ ಎಂದರೆ ಅತಿಶಯೋಕ್ತಿಯಲ್ಲ ಅವರ ಸಾಮಾಜಿಕ ತುಡಿತ, ಅಸಮಾನತೆ ಹಾಗೂ ಶೋಷಣೆ ವಿರುದ್ಧವಾದ ಧ್ವನಿ ನಮ್ಮೆಲ್ಲರ ಆತ್ಮಸಾಕ್ಷಿ ಎಚ್ಚರಗೊಳಿಸಿದ ಧ್ವನಿಯಾಗಿತ್ತು. ಈ ಸಂದರ್ಭದಲ್ಲಿ ಇಂತಹವರ ಬದುಕು ಮತ್ತು ಬರಹ ನಮಗೆಲ್ಲರಿಗೂ ದೊಡ್ಡ ಆದರ್ಶ ಎಂದರು.

ಸಾಹಿತಿ ಸುಬ್ಬು ಹೊಲೆಯಾರ್ ಮಾತನಾಡಿ, 80ರ ದಶಕದ ನಂತರ ಅನೇಕ ಸಮುದಾಯಗಳು ಪ್ರೇರಣೆ ಪಡೆದುಕೊಂಡವು. ಇದಕ್ಕೆ ಬಹಳ ದೊಡ್ಡ ಸಾಕ್ಷಿ ಪ್ರಜ್ಞೆಯಾಗಿದ್ದು ದಲಿತ ಚಳವಳಿ. ಸ್ವಾಭಿಮಾನ, ಬರವಣಿಗೆ ಹಾಗೂ ಮಾತನಾಡಲು ಕಲಿಸಿದ ಈ ಚಳವಳಿ ಎಲ್ಲರಿಗೂ ತಾಯಿ ಇದ್ದ ಹಾಗೆ' ಎಂದರು.

ಪತ್ರಕರ್ತ ಬಿ.ಎಂ.ಹನೀಫ್ ಮಾತನಾಡಿ, 'ಸಾಹಿತ್ಯ, ಸಂಸ್ಕೃತಿ ಉಳಿಸಬೇಕು. ಈ ನಿಟ್ಟಿನಲ್ಲಿ ಸಾಂಸ್ಕೃತಿಕ ಮುಖ ಜೀವಂತವಾಗಿರಿಸಬೇಕು ಎಂಬ ಉದ್ದೇಶದಿಂದ ಇಂತಹ ಕಾರ್ಯಕ್ರಮವನ್ನು ನಿರಂತರವಾಗಿ ನಡೆಸಿಕೊಂಡು ಬಂದಿರುವುದು ಶ್ಲಾಘನೀಯ. ಮೈಸೂರು ಮತ್ತು ಧಾರವಾಡ ಜಿಲ್ಲೆಗಳು ರಾಜ್ಯದ ಸಂಸ್ಕೃತಿ ಮತ್ತು ಹೋರಾಟದ ಮುಖ್ಯಭೂಮಿಕೆಯ ಎರಡು ಕಣ್ಣು' ಎಂದರು.

ಕಾರ್ಯಕ್ರಮದಲ್ಲಿ ನಂದಿನಿ ಹೆದ್ದುರ್ಗ ಹಾಗೂ ಬಿದಲೋಟಿ ರಂಗನಾಥ ಅವರಿಗೆ ಪ್ರಶಸ್ತಿ ನೀಡಿ ಅಭಿನಂದಿಲಾಯಿತು. ಯೋಜನಾ ಇಲಾಖೆ ಪ್ರದೇಶಾಭಿವೃದ್ಧಿ ಮಂಡಳಿ ನಿರ್ದೇಶಕ ಡಿ.ಚಂದ್ರಶೇಖರಯ್ಯ, ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತ ಮಂಜುನಾಥ ಸೋಸ್ಲೆ, ನೆಲೆ ಹಿನ್ನೆಲೆ ಟ್ರಸ್ಟ್‌ನ ಕೆ.ಆರ್.ಗೋಪಾಲಕೃಷ್ಣ, ರಂಗವಾಹಿನಿ ಅಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ, ಮುಳ್ಳುರು ರಾಜು ಮತ್ತು ಬಸವಣ್ಣ ಮೂಕಹಳ್ಳಿ ಉಪಸ್ಥಿತರಿದ್ದರು.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಸುವುದೇನೆಂದರೆ, ನಮ್ಮ ಕಕ್ಷಿದಾರರು ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಮೈಸೂರು ಸಿಟಿ, ಲಕ್ಷ್ಮೀಪುರಂ ದಿವಾನ್ಸ್ ರಸ್ತೆ, ಮನೆ ನಂ.ಸಿ.ಹೆಚ್–47ರಲ್ಲಿ ವಾಸವಾಗಿರುವ ಶ್ರೀ. ಎಂ.ಎಸ್.ಅಶ್ವಥ್ ನಾರಾಯಣ್ ರಾಜೇ ಅರಸ್ ಅವರ ಮಗನಾದ ಸುಮಾರು 45 ವರ್ಷ ವಯಸ್ಸುಳ್ಳ ಶ್ರೀ ಶ್ರೀಕಾಂತ್ ರಾಜ್ ಅರಸ್.ಎಂ.ಎ ರವರಿಂದ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಒಪ್ಪಿ ಸದರಿಯವರೊಂದಿಗೆ ಶುದ್ಧ ಕ್ರಯಕ್ಕೆ ಮಾಡಿಕೊಳ್ಳುವವರಿದ್ದು, ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಬೇರೆ ಯಾರಿಗಾದರೂ ಹಕ್ಕು ಹಿತಾಸಕ್ತಿ, ಸ್ವಾಧೀನ, ನ್ಯಾಯಾಲಯದಲ್ಲಿ ದಾವೆ, ತಂಡೆ ತಕರಾರು, ವಗೈರೆಗಳು ಇದ್ದಲ್ಲಿ ಈ ಸಾರ್ವಜನಿಕ ಪ್ರಕಟಣೆಗೊಂಡ 15 ದಿನಗಳ ಒಳಗಾಗಿ ಈ ಕೆಳಗೆ ನಮೂದಿಸಿರುವ ವಕೀಲರ ಕಛೇರಿ ವಿಳಾಸಕ್ಕೆ ಲಿಖಿತ ರೂಪದಲ್ಲಿ ಅಥವಾ ಸೂಕ್ತ ದಾಖಲಾತಿಗಳೊಂದಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಯಾರಿಂದಲೂ ಯಾವುದೇ ತಂಟೆ–ತಕರಾರು ಬಾರದೇ ಇದ್ದಲ್ಲಿ ನಮ್ಮ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್ ಸ್ವತ್ತಿನ ಕ್ರಯ ಪತ್ರವನ್ನು ನಮ್ಮ ಕಕ್ಷಿದಾರರು ಅವರ ಹೆಸರಿಗೆ ನೋಂದಣಿ ಮಾಡಿಸಿಕೊಳ್ಳಲು ಸಿದ್ಧರಿರುತ್ತಾರೆಂದು ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ತಾಲ್ಲೂಕು, ವರುಣ ಹೋಬಳಿ, ದೇವಲಾಪುರ ಗ್ರಾಮದ ಸರ್ವೆ ನಂ.71/2ಎ ರ ವಿಸ್ತೀರ್ಣ 1ಎಕರೆ 28 ಗುಂಟೆ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಗಡಿ ರಸ್ತೆ ಮತ್ತು ಹಳ್ಳ ನಂತರ ಸರ್ವೆ ನಂ.69ರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ.71/2ಬಿ ನ ಜಮೀನು, ಉತ್ತರಕ್ಕೆ: ಸರ್ವೇ ನಂ.89/1ರ ಜಮೀನು
ದಕ್ಷಿಣಕ್ಕೆ: ಸರ್ವೇ ನಂ.71/1 ರ ಜಮೀನು

ಸಹಿ/–(ನಾಗೇಂದ್ರ ಪ್ರಸಾದ್.ಎಸ್), ವಕೀಲರು,
ಕೆ.ಎ.ಆರ್–1537/04, ನಂ.1493/1, 2ನೇ ಮಹಡಿ,
ಡಾ. ಬಿ ಆರ್ ಅಂಬೇಡ್ಕರ್ ರಸ್ತೆ, ಕೃಷ್ಣಮೂರ್ತಿಪುರಂ,
ಮೈಸೂರು 570004. ಮೊ.ನಂ: 9986575456

